1921

# DESCRIPTION OF KARWAR

DEPARTMENT OF PUBLIC INSTRUCTION
BOMBAY

# ಕಾರವಾರ ಜಿಲ್ಲೆಯ ವರ್ಣನೆಯು

PUBLISHED BY THE
SE MISSION PRESS AND BOOK DEPOT
MANGALORE
1921



Price: 11 As. 3 P.]

[ಬೆಲೆ: ೧೧ ಆಣೆ ೩ ಪೈ.

*The Department of Public Instruction, Bombay*

# DESCRIPTION OF KARWAR

(THE KANARESE COUNTRY)

**HANUMANT GOVINDRAO DESHPANDE, B. A.**
*Assistant Deputy Educational Inspector, Bijapur*

**FIRST EDITION**



PUBLISHED BY THE
KANARESE MISSION PRESS AND BOOK DEPOT,
NGALORE
1921





**Price: 11 As. 3 P.**

PRINTED AT THE
KANARESE MISSION PRESS AND BOOK DEPOT, MANGALORE

ಮುಂಬಯಿ ಇಲಾಖೆಯೊಳಗಿನ ಸರಕಾರೀ ವಿದ್ಯಾಖಾತೆ

# ಕಾರವಾರ ಜಿಲ್ಲೆಯ ವರ್ಣನೆಯು

ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಅ. ಡಿಪೂಟಿ ಎ. ಇನಸ್ಪೆಕ್ಟರ, ವಿಜಾಪುರ

ಮೊದಲನೆಯ ಛಾಪೆ



ಮಂಗಳೂರು
ಕೆನರಿಸ್ ಮಿಶ್ಯನ್ ಪ್ರೆಸ್ ಮತ್ತು ಬುಕ್ ಡಿಪೊ
೧೯೨೧



ಬೆಲೆ: ೧೧ ಆಣೆ ೩ ಪೈ.

ಮಂಗಳೂರು
ಕೆನರಿಸ್ ಮಿಶ್ಯನ್ ಪ್ರೆಸ್ ಮತ್ತು ಬುಕ್ ಡಿಪೊದಲ್ಲಿ ಛಾಪಿಸಲ್ಪಟ್ಟಿತು

# ಅನುಕ್ರಮಣಿಕೆ.

# ಕಾರವಾರ ಜಿಲ್ಹೆಯ ವರ್ಣನೆಯು

## ೧ನೆಯ ಪ್ರಕರಣ.

### ಉಪೋದ್ಘಾತ.

ಯಾವದೊಂದು ಪ್ರದೇಶದ ಭೂಗೋಲವನ್ನು ಅಭ್ಯಾಸಿಸುವದಾದರೆ ಆ ಪ್ರದೇಶದ ನಕಾಶವನ್ನು ಮನಮುಟ್ಟಿ ಮನನಮಾಡಿಕೊಳ್ಳುವದು ಅವಶ್ಯವು. ನಕಾಶಗಳು ಮುಖ್ಯವಾಗಿ ಎರಡು ಪ್ರಕಾರದವಿರುವವು:—(೧) ಪ್ರಾಕೃತಿಕ, (೨) ರಾಜಕೀಯ. ರಾಜಕೀಯ ನಕಾಶಗಳಲ್ಲಿ ರಾಜ್ಯಕಾರಭಾರದ ಅನುಕೂಲತೆಗೋಸ್ಕರ ಮಾಡಿದ ವಿಭಾಗಗಳು ತೋರಿಸಲ್ಪಡುವವು. ಈ ನಕಾಶಗಳಲ್ಲಿ ಮೇಲೆ ಮೇಲೆ ಹೆಚ್ಚುಕಡಿಮೆಗಳು ಆಗುವವು. ಪ್ರಾಕೃತಿಕ ನಕಾಶಗಳಲ್ಲಿ ಭೂಮಿಯ ಪೃಷ್ಠಭಾಗದ ರಚನೆ, ಅಂದರೆ ಅಲ್ಲಿ ಹಬ್ಬಿರುವ ಪರ್ವತಗಳು, ಗುಡ್ಡಗಳು, ಬೈಲುಗಳು, ಭೂಮಿಯ ಏರಿಳಿತಗಳು, ನದಿಗಳು, ಸರೋವರಗಳು, ಅರಣ್ಯಗಳು ಇವೇ ಮೊದಲಾದವುಗಳ ಉಲ್ಲೇಖವಿರುತ್ತದೆ. ಒಂದು ಪ್ರದೇಶದ ಪ್ರಾಕೃತಿಕ ಸ್ವರೂಪವನ್ನು ಲಕ್ಷ್ಯಪೂರ್ವಕವಾಗಿ ಅಭ್ಯಾಸಿಸುವದರಿಂದ ಆ ಪ್ರದೇಶದ ಯಾವ ಭಾಗಗಳು ಅಲ್ಲಿಯ ಜನರಿಗೆ ಬಹಳ ಉಪಯೋಗವುಳ್ಳವು, ತಮಗೆ ಬೇಕಾದ ಬೇರೆ ಬೇರೆ ಪೈರುಗಳನ್ನು ಅವರು ಯಾವ ಭಾಗದಲ್ಲಿ ಬೆಳಿಸಿಕೊಳ್ಳಬಹುದು, ಯಾವ ಭಾಗದಲ್ಲಿ ನದಿಗಳಿಂದ ಕಾಲುವೆಗಳನ್ನು ತಂದು ಹೊಲಗಳಿಗೆ ನೀರು ಹಾಯಿಸಿಕೊಳ್ಳಬಹುದು, ಯಾವ ಭಾಗಗಳಲ್ಲಿ ದೊಡ್ಡ ದೊಡ್ಡ ಪಟ್ಟಣಗಳುಂಟಾಗಲಿಕ್ಕೆ ಅನುಕೂಲತೆಗಳಿರುವವು ಎಂಬ ಪ್ರಶ್ನೆಗಳಿಗೆ ಉತ್ತರವು ಹೊರಡುವದು.

ಆದ್ದರಿಂದ ಹುಡುಗರು ಕಲಿಯತಕ್ಕ ಪ್ರದೇಶದ ಪ್ರಾಕೃತಿಕ ಸ್ವರೂಪವು ಅವರ ಕಣ್ಣಮುಂದೆ ಕಟ್ಟಿದಂತೆ ಆಗಲಿಕ್ಕೆ ಬೇಕು. ಇದಕ್ಕೆ ಪ್ರಾಕೃತಿಕ ನಕಾಶಗಳನ್ನು ಮೇಲೆ ಮೇಲೆ ನೋಡುವದೇ ಮೇಲಾದ ಉಪಾಯವು. ಎಂದಾದ

ರೊಮ್ಮೆ ಇಂಥ ನಕಾಶಗಳನ್ನು ನೋಡುವದರಿಂದ ಪ್ರಯೋಜನವಾಗದು. ಆದುದರಿಂದ ಇಂಥ ನಕಾಶಗಳನ್ನು ಎಲ್ಲ ಹುಡುಗರು ಸುಲಭವಾಗಿ ನೋಡಿಕೊಳ್ಳುವದಕ್ಕೆ ಅನುಕೂಲವಾದ ಸ್ಥಳದಲ್ಲಿ ತೂಗಹಾಕಿರಬೇಕು. ಪ್ರತಿದಿವಸ ಹುಡುಗರು ಒಂದೆರಡು ಸಾರೆ ಅವುಗಳನ್ನು ತುಸು ಹೊತ್ತು ನಿರೀಕ್ಷಿಸಿ ನೋಡಿದರೆ, ಸ್ವಲ್ಪ ದಿವಸಗಳಲ್ಲಿಯೇ ಆ ಪ್ರದೇಶಗಳ ಸ್ವರೂಪವು ಅವರ ಮನಸ್ಸಿನಲ್ಲಿ ಬಿಂಬಿಸುವದು. ಇದರಿಂದ ಮುಂದಿನ ಅಭ್ಯಾಸಕ್ಕೆ ಒಳ್ಳೇ ಸಹಾಯವಾಗುವದು.

ನಕಾಶಗಳನ್ನು ಮೇಲೆ ಮೇಲೆ ತೆಗಿಸುವ ರೂಢಿಯನ್ನು ಇಟ್ಟು ಭೂಗೋಲವನ್ನು ಅಭ್ಯಾಸಿಸುವದಂತೂ ಮೇಲ್ತರದ ಉಪಾಯವು. ಹುಡುಗರು ಮೊದಲು ಮೊದಲು ನಕಾಶಗಳನ್ನು ನಕಲುಮಾಡಿ ತೆಗೆಯಬಹುದು. ತರುವಾಯ ನೆನಪಿನಿಂದಲೇ ಅವುಗಳನ್ನು ರಚಿಸಲಿಕ್ಕೆ ಬರತಕ್ಕದ್ದು. ಭೂಗೋಲದ ಪಾಠವು ಇರುವ ದಿವಸ ಬಾಹ್ಯರೇಖಾನಕಾಶಗಳನ್ನು ಹುಡುಗರ ಕೈಯಲ್ಲಿ ಕೊಡಬಹುದು. ಇಲ್ಲವೆ ಅವರೇ ಇಂಥ ನಕಾಶಗಳನ್ನು ತೆಗೆದುಕೊಂಡು ಬರಬಹುದು. ಮಾಸ್ತರನು ಪುಸ್ತಕವನ್ನು ಉಪಯೋಗಿಸದೆ ಹುಡುಗರಿಗೆ ಪ್ರಶ್ನೆಗಳನ್ನು ಕೇಳಬೇಕು. ಹುಡುಗರು ದೊಡ್ಡ ನಕಾಶಗಳನ್ನು ನೋಡಿ, ಉತ್ತರಗಳನ್ನು ಹೇಳಬೇಕು. ಈ ಉತ್ತರಗಳು ಸರಿ ಇದ್ದರೆ ಅವುಗಳನ್ನು ಸ್ವೀಕರಿಸಿ, ಕರೇಹಲಿಗೆಯ ಮೇಲೆ ಶಿಕ್ಷಕನು ತೆಗೆದ ಬಾಹ್ಯರೇಷೆಯ ನಕಾಶದಲ್ಲಿ ಅವುಗಳನ್ನು ತೋರಿಸಿ, ಹುಡುಗರಲ್ಲಿದ್ದ ಬಾಹ್ಯರೇಷಾನಕಾಶಗಳಲ್ಲಿ ಅವುಗಳನ್ನು ತುಂಬಲಿಕ್ಕೆ ಹೇಳಬೇಕು.

ಆದರೆ ಯಾವದೊಂದು ಪ್ರದೇಶದ ಭೂಮಿಯ ಸ್ವರೂಪವನ್ನು ಮನದಟ್ಟಾಗುವಂತೆ ಅಭ್ಯಾಸಿಸಬೇಕಾದರೆ ಆ ಪ್ರದೇಶದ ಮಾಡೆಲವನ್ನು ಅಂದರೆ ಮಾದರಿಯನ್ನು ಮಾಡುವದು ಎಲ್ಲಕ್ಕೂ ಮೇಲಾದ ಉಪಾಯವು. ಇವುಗಳನ್ನು ಮಾಡುವಾಗ ಹುಡುಗರ ಕಣ್ಣುಗಳೂ ಕೈಗಳೂ ಕೂಡಿಯೇ ಆ ಕೆಲಸದಲ್ಲಿ ತೊಡಗುವದರಿಂದ ಈ ಸಮಯದಲ್ಲುಂಟಾದ ಜ್ಞಾನವು ದೃಢವಾಗಿ ನಿಲ್ಲುವದು. ಆದದರಿಂದ ಹುಡುಗರ ಕಡೆಯಿಂದ ಈ ತರದ ಮಾಡೆಲಗಳನ್ನು ಮಾಡಿಸುವದು ಅತ್ಯುಪಯುಕ್ತವಾದದ್ದು.

ಭೂಗೋಲದಲ್ಲಿ ಯಾವ ಸಂಗತಿಗಳ ಜ್ಞಾನವು ಮಹತ್ವವುಳ್ಳದ್ದು, ಹುಡುಗರಿಗೆ ಜಿಲ್ಹೆಯ ಭೂಗೋಲವನ್ನು ಪ್ರಾರಂಭಿಸಿದ ಕೂಡಲೆ ಯಾವ ಸಂಗತಿಗಳನ್ನು ಅವರಿಗೆ ಹೇಳಬೇಕು, ಯಾವವನ್ನು ಹೇಳುವ ಕಾರಣವಿಲ್ಲ ಎಂಬ

ಸಂಗತಿಗಳನ್ನು ಶಿಕ್ಷಕನು ನಿರ್ಣಯಿಸಿಕೊಳ್ಳುವದು ಅತ್ಯವಶ್ಯವಿರುವದು. ಕೆಲವು ವರ್ಷಗಳ ಹಿಂದೆ ಭೂಗೋಲಜ್ಞಾನವೆಂದರೆ—ಪರ್ವತ, ಹೊಳೆ, ಹಳ್ಳ, ಕೆರೆ, ಪಟ್ಟಣ ಮೊದಲಾದವುಗಳನ್ನು ಬಾಯಿಪಾಠ ಮಾಡುವದೇ ಎಂದು ಗ್ರಹಿಕೆಯಾಗಿತ್ತು. ಈಗಲೂ ಈ ದೋಷವು ಪೂರ್ಣವಾಗಿ ಹೋಗಿಲ್ಲ. ಜನವಸತಿಯೇ ಇಲ್ಲದಿದ್ದರೆ ಪಟ್ಟಣಗಳಾಗಲಿ, ಪರ್ವತಗಳಾಗಲಿ, ಹೊಳೆಗಳಾಗಲಿ, ಬೆಳೆ ಬರುವ ಭೂಮಿಗಳಾಗಲಿ ಎಲ್ಲಿದ್ದರೇನು? ಒಂದು ಪ್ರದೇಶದಲ್ಲಿರುವ ಜನರಿಗೆ ಆ ಪ್ರದೇಶವು ಎಷ್ಟು ಉಪಯುಕ್ತವಾದದ್ದೆಂಬದನ್ನು ಸಕಾರಣವಾಗಿ ವಿವರಿಸುವದೇ ನಿಜವಾದ ಭೂಗೋಲವಾಗಿರುತ್ತದೆ. ಆದ್ದರಿಂದ ಪಟ್ಟಣಗಳ ಇಲ್ಲವೆ ಪರ್ವತಗಳ ಹೆಸರುಗಳನ್ನು ಬಾಯಿಪಾಠ ಮಾಡಿಸುವದರಿಂದ ಏನೂ ಲಾಭವಾಗುವದಿಲ್ಲ. ಭೂಗೋಲದಲ್ಲಿ ಅನೇಕ ಪ್ರಶ್ನಗಳಿಗೆ ಉತ್ತರ ಕೊಡುವದಿರುತ್ತದೆ. ಉದಾಹರಣಾರ್ಥವಾಗಿ ಈ ಜಿಲ್ಹೆಯ ಜನರು ಮುಖ್ಯವಾಗಿ ಮಾಡುವ ಉದ್ಯೋಗವು ಯಾವದು? ಆ ಉದ್ಯೋಗವನ್ನೇ ಯಾಕೆ ಮಾಡುತ್ತಾರೆ? ಇಲ್ಲಿ ಬರುವ ಬೆಳೆಗಳು ಯಾವವು? ಭೂಮಿ-ಹವೆ-ಮಳೆಗಳು ಆ ಬೆಳೆಗಳಿಗೆ ಹ್ಯಾಗೆ ಅನುಕೂಲತೆಯನ್ನು ಮಾಡಿವೆ? ಕೆಲವು ಭಾಗದ ಭೂಮಿಗಳು ಬೆಳೆಯುಳ್ಳವೂ, ಕೆಲವು ಬೆಳೆ ಬಾರದವೂ ಇರುವ ಕಾರಣವೇನು? ಕೆಲವು ಕಡೆಯಲ್ಲಿ ಹೆಚ್ಚು ಜನಸಂಖ್ಯೆಯೂ ಕೆಲವು ಕಡೆಗೆ ಕಡಿಮೆಯೂ ಇರುವ ಕಾರಣವೇನು? ಕೆಲವು ಪಟ್ಟಣಗಳು ಮಾತ್ರ ವಿಶೇಷವಾಗಿ ವೃದ್ಧಿಹೊಂದಲು ಕಾರಣವೇನು? ಮುಂತಾದ ಪ್ರಶ್ನಗಳಿಗೆ ಸಮರ್ಪಕವಾದ ಉತ್ತರವು ದೊರೆಯಬೇಕಾದರೆ ಆ ಪ್ರಾಂತದ ಭೂಗೋಲವನ್ನು ಯೋಗ್ಯವಾಗಿ ಅಭ್ಯಾಸಮಾಡಬೇಕಾಗುತ್ತದೆ. ಮುಂದೆ ಬೇರೆ ದೇಶಗಳ ಬಗ್ಗೆ ಓದಿದರೆ, ಅವರು ಬೇರೆ ರೀತಿಯಿಂದ ಯಾಕೆ ಉಪಜೀವಿಸುವರೆಂಬದೂ, ನಮಗೂ ಅವರಿಗೂ ಇಷ್ಟು ವ್ಯತ್ಯಾಸಗಳಾಗಲಿಕ್ಕೆ ಯಾವ ಕಾರಣಗಳುಂಟೆಂಬದೂ ನಮಗೆ ಗೊತ್ತಾಗುವದು. ಆದ್ದರಿಂದ ಹುರುಳಿಲ್ಲದ ಸಂಗತಿಗಳನ್ನು ಹುಡುಗರಿಗೆ ಪಾಠಮಾಡಹಚ್ಚಿ ಅವರ ಜಿಜ್ಞಾಸೆಯನ್ನು ಅಣಗಿಸದೆ, ಉಪಯುಕ್ತವಾದಂಥ ಸಂಗತಿಗಳನ್ನು ಮಾತ್ರ ಅವರಿಗೆ ಮನೋಹರವಾಗುವಂತೆ ಹೇಳುವದು ನಮ್ಮ ಕರ್ತವ್ಯವಿರುತ್ತದೆ. ಅಪ್ರಯೋಜಕ ಸಂಗತಿಗಳ ಜ್ಞಾನವನ್ನು ಮಾಡಿಕೊಡುವದು ನಮ್ಮ ಉದ್ದೇಶವಿರುವದಿಲ್ಲ. ಹುಡುಗರು ವಿಚಾರಮಾಡಿ ಕೆಲವು ಸ್ಥೂಲ ಸಂಗತಿಗಳ ಕಾರ್ಯಕಾರಣಭಾವವನ್ನು ಹುಡುಕಿ ತೆಗೆಯುವಂತೆ ಮಾಡು

ವದು ನಮ್ಮ ಮುಖ್ಯ ಉದ್ದೇಶವಿರುವದು. ಭೂಗೋಲ ಕಲಿಸುವ ಉದ್ದೇಶವ ಬಗ್ಗೆ ತಪ್ಪಾದ ಕಲ್ಪನೆಯು ಬಹು ದಿವಸಗಳಿಂದ ನಮ್ಮಲ್ಲಿ ನೆಲೆಗೊಂಡಿರುವದ ರಿಂದ, ಉಪಯುಕ್ತ ಜ್ಞಾನವನ್ನು ಮಾತ್ರ ಹುಡುಗರಿಗೆ ಮಾಡಿಕೊಡಬೇಕೆಂಬ ದನ್ನು ಸದ್ಯದ ಶಿಕ್ಷಕರು ಲಕ್ಷ್ಯದಲ್ಲಿಡಬೇಕು. ಕೇವಲ ಶಾಬ್ದಿಕ ಜ್ಞಾನವೇ ನಿಜವಾದ ಜ್ಞಾನವೆಂದು ನಾವು ಬಹಳ ವರ್ಷಗಳಿಂದ ನಂಬಿರುವದರಿಂದ, ನಮ್ಮ ಹುಡುಗರಿಗೆ ಯಥಾರ್ಥ ಜ್ಞಾನವಾಗುವ ಬಗ್ಗೆ ನಾವು ವಿಶೇಷ ಎಚ್ಚರ ದಿಂದಿರಬೇಕು. ಈ ನಿಜವಾದ ಜ್ಞಾನಕ್ಕೆ ಪ್ರಾಕೃತಿಕ ನಕಾಶಗಳೂ, ಮಾಡೆಲ ಗಳೂ, ಚಿತ್ರಗಳೂ, ಭಾವಚಿತ್ರಗಳೂ, ಶಿಕ್ಷಕನ ಪ್ರಶ್ನಾಕ್ರಮವೂ, ವರ್ಣನಾ ಚಾತುರ್ಯವೂ ಸಾಧನಗಳಾಗಿವೆ. ಸಾಲೆಯಲ್ಲಿ ಕಲಿಸುವ ಎಲ್ಲ ವಿಷಯ ಗಳಲ್ಲಿ ಬಹಳವಾಗಿ ಇದೇ ಸಂಗತಿಯು ದುರ್ಲಕ್ಷಿಸಲ್ಪಡುವದರಿಂದ ಹುಡುಗರಿಗೆ ಭೂಗೋಲದ ವಿಷಯವು ಬೇಸರವಾಗುವದು. ಆದರೆ ಮೇಲೆ ಹೇಳಿದ ಸಾಧನ ಗಳಿಂದ ಈ ವಿಷಯವನ್ನು ಕಲಿಸಿದರೆ, ಹುಡುಗರಿಗೆ ಮನೋರಂಜನವಾಗುವ ದೆಂಬದರಲ್ಲಿ ಸಂಶಯವಿಲ್ಲ.

ಯಾವ ಸಂಗತಿಗಳನ್ನು ಹೇಳಬೇಕು, ಯಾವ ಪದ್ಧತಿಯಿಂದ ಹೇಳಬೇಕು ಎಂಬ ಪ್ರಶ್ನಗಳ ಬಗ್ಗೆ ಮೇಲೆ ಸಂಕ್ಷೇಪವಾಗಿ ಬರೆದಿದ್ದೇವೆ. ಇನ್ನು ಈ ವಿಷಯ ದಲ್ಲಿ ಅನುಸರಿಸತಕ್ಕ ಸಾಮ್ಯವೈಷಮ್ಯಪದ್ಧತಿಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುವೆವು. ವಿದ್ಯಾರ್ಥಿಗಳಿಗೆ ಗೊತ್ತಿದ್ದದ್ದಕ್ಕೆ ಗೊತ್ತಿಲ್ಲದ್ದನ್ನು ಹೊಂದಿಸಿದರೆ ಮಾತ್ರ ಯಥಾರ್ಥವಾದ ಹೊಸ ಜ್ಞಾನವಾಗುವದು. ಶಾಬ್ದಿಕ ಜ್ಞಾನವು ಈ ನಿಯಮವನ್ನು ಅನುಸರಿಸುವದಿಲ್ಲ. ಆದ್ದರಿಂದ ಶಾಬ್ದಿಕ ಜ್ಞಾನ ದಿಂದ ಏನೂ ಪ್ರಯೋಜನವಾಗುವದಿಲ್ಲ. ಕಾರವಾರ ಪಟ್ಟಣವೆಂದರೆ, ಅನೇಕ ಹುಡುಗರು ನಕಾಶದ ಮೇಲಿರುವ ಪೂಜಿಯೆಂದು ತಿಳಿಯುವರು. ಇದು ಶಾಬ್ದಿಕ ಜ್ಞಾನವು. ಆದರೆ ಕಾರವಾರ ಪಟ್ಟಣವೆಂದ ಕೂಡಲೆ, ಈ ಪಟ್ಟಣದ ಹಲವು ಭಾಗಗಳು, ಅಲ್ಲಿಯ ಜನರ ಉದ್ಯೋಗಗಳು, ಅಲ್ಲಿಯ ಜನರಿಗಿರುವ ಅನುಕೂಲ ಪ್ರತಿಕೂಲತೆಗಳು ಇತ್ಯಾದಿ ಸಂಗತಿಗಳು ಅವರ ಮನಸ್ಸಿನಲ್ಲಿ ಬಂದರೆ, ಅವರಿಗೆ ಈ ಪಟ್ಟಣದ ಬಗ್ಗೆ ಯಥಾರ್ಥ ಜ್ಞಾನವಾದಂತಾಗುವದು. ಭೂಗೋಲದಲ್ಲಿ ಬಹುಶಃ ಎಲ್ಲ ಸಂಗತಿಗಳನ್ನು ಕಲ್ಪನಾಶಕ್ತಿಯಿಂದಲೇ ತಿಳಿದು ಕೊಳ್ಳಬೇಕಾಗುವದರಿಂದ ಎಲ್ಲ ಹೊಸ ಸಂಗತಿಗಳಿಗೂ, ಹುಡುಗರಿಗೆ ಗೊತ್ತಿದ್ದ ಸಂಗತಿಗಳಿಗೆ ಸರಿಹಚ್ಚಿ, ಸಾಮ್ಯದಿಂದಾಗಲಿ ವೈಷಮ್ಯದಿಂದಾಗಲಿ ಹೊಸ ಜ್ಞಾನ

ವನ್ನು ಮಾಡಿಕೊಡುವದು ಅವಶ್ಯವಾದದ್ದು. ಈ ಪದ್ಧತಿಯನ್ನು ಅನುಸರಿಸುವದರಿಂದ ಹುಡುಗರ ಸ್ಮರಣಶಕ್ತಿಯೂ ಬಲಪಡುವದು. ಹುಡುಗರಿಂದಲೇ ಸಾಮ್ಯವೈಷಮ್ಯಗಳನ್ನು ಹೊರಡಿಸುವದಾದರೆ, ಅವರ ಬುದ್ಧಿಗೆ ತೋರುವಂಥ ಸಾಮ್ಯವೈಷಮ್ಯಗಳ ಬಗ್ಗೆಯೇ ಅವರಿಗೆ ಪ್ರಶ್ನೆ ಮಾಡಬೇಕು.

ಪ್ರಾಕೃತಿಕ ನಕಾಶವನ್ನು ಶಿಕ್ಷಕನು ಸುಲಭವಾಗಿ ತೆಗೆಯಬಹುದು. ಇವುಗಳಲ್ಲಿ ಪ್ರದೇಶದ ಎತ್ತರವನ್ನು ಬೇರೆ ಬೇರೆ ಬಣ್ಣಗಳಿಂದ ತೋರಿಸಬೇಕು. ಸಮುದ್ರದ ಪಾತಳಿಯಿಂದ ೬೦೦ ಫೂಟುಗಳ ವರೆಗೆ ಎತ್ತರದಲ್ಲಿರುವ ಭಾಗವನ್ನು ನಸು ಹಸರು ಬಣ್ಣದಿಂದಲೂ, ೬೦೦ ರಿಂದ ೧೨೦೦ ರ ವರೆಗೆ ಇದ್ದ ಭಾಗವನ್ನು ಹಸರು ಬಣ್ಣದಿಂದಲೂ, ೧೨೦೦ ರಿಂದ ೨೪೦೦ ರ ವರೆಗೆ ಇದ್ದ ಭಾಗವನ್ನು ಹಳದೀ ಬಣ್ಣದಿಂದಲೂ, ಅದಕ್ಕೂ ಹೆಚ್ಚು ಎತ್ತರದಲ್ಲಿರುವ ಭಾಗವನ್ನು, ಅಂದರೆ ಗುಡ್ಡ ಇಲ್ಲವೆ ಪರ್ವತಗಳನ್ನು ಕಪ್ಪು ಬಣ್ಣದಿಂದಲೂ ತೋರಿಸಬಹುದು. ತಾಲೂಕಿನ ಕೆಲವು ಮುಖ್ಯ ಸ್ಥಳಗಳ ಎತ್ತರವನ್ನೂ, ನದಿಗಳ ಗತಿಗಳನ್ನೂ ನೋಡಿಕೊಂಡು ಇಂಥ ನಕಾಶಗಳನ್ನು ಸ್ಥೂಲಮಾನದಿಂದ ಶಿಕ್ಷಕನು ರಚಿಸತಕ್ಕದ್ದು. ಸರ್ವೇ ನಕಾಶಗಳ ಸಹಾಯದಿಂದ ಇಂಥ ನಕಾಶಗಳನ್ನು ರಚಿಸಲಿಕ್ಕೆ ಒಳ್ಳೇ ಅನುಕೂಲವಾಗುತ್ತದೆ. ಶಿಕ್ಷಕನು ತಾನೇ ರಚಿಸುವ ಪ್ರಾಕೃತಿಕ ನಕಾಶಗಳಿಂದ ಮತ್ತೊಂದು ಲಾಭವೇನಂದರೆ, ತಾನು ಹುಡುಗರಿಗೆ ಹೇಳಬೇಕೆಂದು ಎಣಿಸಿಕೊಂಡ ಸಂಗತಿಗಳನ್ನಷ್ಟೇ ಅವನು ಇವುಗಳಲ್ಲಿ ತೋರಿಸಬಹುದು. ಇದರಿಂದ ಹುಡುಗರು ಅವಶ್ಯವಿಲ್ಲದ ಸಂಗತಿಗಳ ಅವಲೋಕನದಿಂದ ನಿಷ್ಕಾರಣವಾಗಿ ಗೊಂದಲದಲ್ಲಿ ಬೀಳುವದು ತಪ್ಪುವದು. ತಾಲೂಕಿನ ಹಾಗೂ ಜಿಲ್ಹೆಯ ಅಚ್ಚುಹಾಕಿದ ಪ್ರಾಕೃತಿಕ ನಕಾಶಗಳು ಇದ್ದರೆ ಒಳಿತಾಗುತ್ತಿತ್ತು. ಆದರೆ ಇವು ಇಲ್ಲದೆ ಪಾಠವನ್ನು ನಡಿಸುವದಕ್ಕೆ ಎಂದಿಗೂ ಬಾರದ್ದರಿಂದಲೂ, ಸ್ವಲ್ಪ ಶ್ರಮದಿಂದ ಇವುಗಳನ್ನು ಪ್ರತಿಯೊಬ್ಬ ಶಿಕ್ಷಕನು ತಯಾರಿಸಬಹುದಾದ್ದರಿಂದಲೂ ಶಿಕ್ಷಕರು ಇವುಗಳನ್ನು ಅವಶ್ಯವಾಗಿ ರಚಿಸಿ, ಭೂಗೋಲಪಾಠಗಳಲ್ಲಿ ಉಪಯೋಗಿಸತಕ್ಕದ್ದು.

ಭೂಗೋಲದಲ್ಲಿ ವಿವರಿಸುವ ಪ್ರತಿ ಒಂದು ಸಂಗತಿಯನ್ನು ಸ್ಪಷ್ಟೀಕರಿಸಿ ನಕಾಶಗಳನ್ನು ತೆಗೆಯಬಹುದು. ಇವುಗಳ ಸಹಾಯದಿಂದ ಪಾಠವನ್ನು ಸುಲಭವಾಗಿ ಹೇಳಬಹುದು. ಇದರಿಂದ ಹುಡುಗರು ಗೊಂದಲದಲ್ಲಿ ಬೀಳುವ ಅಂಜಿಕೆಯು ದೂರಾಗುವದು. ಆದ್ದರಿಂದ ಪ್ರತಿ ಒಂದು ಕ್ಲಾಸಿನಲ್ಲಿ ಆ ಕ್ಲಾಸಿಗೆ ಹೇಳ

ಬೇಕಾದ ಭೂಗೋಲದ ಭಾಗದ ಹಲವು ಸಂಗತಿಗಳನ್ನು ಪ್ರತ್ಯೇಕವಾಗಿ ಸ್ಪಷ್ಟೀಕರಿಸುವ ನಕಾಶಗಳನ್ನು ಶಿಕ್ಷಕನು ತಯಾರಿಸಿ ತೂಗಹಾಕಿಡತಕ್ಕದ್ದು. ಉದಾಹರಣಾರ್ಥವಾಗಿ, ಕಾರವಾರ ಜಿಲ್ಹೆಯ ಭೂಗೋಲವನ್ನು ಕಲಿಸುವದಿದ್ದಾಗ್ಗೆ, ಕೆಳಗೆ ಕಾಣಿಸಿದ ನಕಾಶಗಳು ಕ್ಲಾಸಿನಲ್ಲಿ ಅವಶ್ಯವಾಗಿ ಇರಬೇಕು.

೧. ಪ್ರಾಕೃತಿಕ ಸ್ವರೂಪ ಅಂದರೆ ಭೂಮಿಯ ಏರಿಳಿತಗಳು, ನದಿಗಳು.

೨. ಮೇರೆಗಳು, ಮುಖ್ಯ ಪಟ್ಟಣಗಳು.

೩. ಹುಟ್ಟುವಳಿ.

೪. ಮಾರ್ಗಗಳು.

೫. ವ್ಯಾಪಾರ.

೬. ಜನಸಂಖ್ಯೆ.

೭. ರಾಜಕೀಯ ವಿಭಾಗಗಳು.

ಇವುಗಳನ್ನು ಪ್ರತ್ಯೇಕವಾಗಿ ತೋರಿಸುವ ನಕಾಶಗಳು ಇರತಕ್ಕದ್ದು.

## ೨ನೆಯ ಪ್ರಕರಣ.

### ಮೇರೆಗಳು, ಆಕಾರ, ಕ್ಷೇತ್ರ, ಸ್ವಾಭಾವಿಕ ರಚನೆ.

ಯಾವದಾದರೊಂದು ಪ್ರದೇಶದ ಭೂಗೋಲವನ್ನು ಅಭ್ಯಾಸಿಸಲಿಕ್ಕೆ ಆರಂಭಿಸಿದ ಕೂಡಲೆ ಅದರ ಮೇರೆಗಳು ಯಾವವು ಎಂಬ ಪ್ರಶ್ನವು ಮೊದಲು ಸೂಚಿತವಾಗುತ್ತದೆ. ಮೇರೆಗಳು ಎರಡು ತರದವಿರುತ್ತವೆ. ಮನುಷ್ಯನು ತನ್ನ ಅನುಕೂಲಕ್ಕೋಸ್ಕರ ಮಾಡಿಕೊಂಡ ಮೇರೆಗಳು ಮೊದಲನೇ ಪ್ರಕಾರದವು. ಇವುಗಳಿಗೆ ರಾಜಕೀಯ ಮೇರೆಗಳೆಂದೆನ್ನುವದುಂಟು. ಎರಡನೆಯವು ಪ್ರಾಕೃತಿಕ ಮೇರೆಗಳು. ಇವು ಹೊಳೆ, ಗುಡ್ಡದ ಸಾಲು, ಪರ್ವತ, ಸಮುದ್ರ ಇವುಗಳಿಂದುಂಟಾದ ಸ್ವಭಾವಸಿದ್ಧವಾದ ಮೇರೆಗಳು. ಊರು ಅಥವಾ ತಾಲೂಕಿನಂಥ ಸಣ್ಣ ಪ್ರದೇಶಕ್ಕೆ ಪ್ರಾಕೃತಿಕ ಮೇರೆಗಳು ಬಹುಶಃ ಇರುವದಿಲ್ಲ. ಕೆಲವು ಜಿಲ್ಹೆಗಳಿಗೂ ಪ್ರಾಕೃತಿಕ ಮೇರೆಗಳು ಇರುವದೇ ಇಲ್ಲ. ಇನ್ನು ಇವೆರಡೂ ತರದ ಮೇರೆಗಳನ್ನು ನೆನಪಿನಲ್ಲಿಟ್ಟುಕೊಂಡು ಕಾರವಾರ ಜಿಲ್ಹೆಯ ಮೇರೆಗಳನ್ನು ಕುರಿತು ಆಲೋಚಿಸುವ.

ಈ ಜಿಲ್ಹೆಯ ಪಶ್ಚಿಮ ದಂಡೆಗೆ ಭಟಕಳ ಪೇಠೆಯ ಬಳಕೆ ಎಂಬ ಗ್ರಾಮದಿಂದ ಗೋವಾಪ್ರಾಂತದ ಸಮೀಪ ಮಾಜಾಳಿಯ ವರೆಗೂ ಸಮುದ್ರವು ಹತ್ತಿರುವದು. ಅದು ಬಹಳ ವಿಸ್ತಾರವಾಗಿದ್ದು ಹಾಗೇ ಪಶ್ಚಿಮಕ್ಕೆ ಇರುವ ಅರಬಸ್ಥಾನಕ್ಕೆ ತಗಲಿರುತ್ತದೆ. ಅದಕ್ಕೆ ಅರಬಿಸಮುದ್ರವೆನ್ನುವರು. ಅದೇ ಈ ಜಿಲ್ಹೆಯ ಪಶ್ಚಿಮ ಮೇರೆಯು. ಇದು ಸ್ವಾಭಾವಿಕವಾದದ್ದು. ಮಾಜಾಳಿಯ ಮೂಲೆಯಿಂದ ವಾಯವ್ಯಕ್ಕೆ ತಿನ್ನೈಘಟ್ಟದ ವರೆಗೂ ಗೋವಾಪ್ರಾಂತವು. ತಿನ್ನೈಘಟ್ಟದ ಮೂಲೆಯಿಂದ ಹಲ್ಯಾಳ ತಾಲೂಕಿನ ಮದನಹಳ್ಳಿಯ ವರೆಗೂ ಬೆಳಗಾವ ಜಿಲ್ಹೆಯು ಹತ್ತಿರುವದು. ಇದೇ ಉತ್ತರ ಮೇರೆ. ಅಲ್ಲಿಂದ ಸಿರಸೀ ತಾಲೂಕ ಬದನಗೋಡದ ವರೆಗೆ ಧಾರವಾಡ ಜಿಲ್ಹೆಯು. ಅಲ್ಲಿಂದ ಮುಂದೆ ಸಿದ್ದಾಪುರ ತಾಲೂಕಿನ ಮಲವಳ್ಳಿಯ ವರೆಗೂ ಮೈಸೂರ ಸೀಮೆಯು ತಾಗಿರುವದು. ಇವೆರಡೂ ಪೂರ್ವ ಮೇರೆಗಳು. ಮುಂದೆ ಭಟಕಳದ ತುದಿಯ ವರೆಗೂ ಮೈಸೂರ ಸೀಮೆಯೇ ಇರುವದು. ಅಂತೂ ಪಶ್ಚಿಮದ ಹೊರತಾಗಿ ಉಳಿದ ಎಲ್ಲ ಮೇರೆಗಳು ರಾಜಕೀಯವೆಂಬದು ಸ್ಪಷ್ಟವದೆ. ಮೈಸೂರ ಸೀಮೆ

ಯನ್ನು ಈ ದೇಶದ ಹಿಂದೂರಾಜರು ಆಳುವರು. ಉಳಿದ ಧಾರವಾಡ, ಬೆಳಗಾವ ಜಿಲ್ಹೆಗಳನ್ನು ಇಂಗ್ಲಿಷರೇ ಆಳುವರು.

ಆಕಾರ ಹಾಗೂ ಕ್ಷೇತ್ರ.—ಕಾನಡಾ ಜಿಲ್ಹೆಯು ಸ್ಥೂಲಮಾನದಿಂದ ನೋಡಿದರೆ ಒಂದು ಚೌಕೋನದಂತೆ ಇರುವದು. ಅದು ಮಾಜಾಳಿ (ಕಾರವಾರ ತಾಲೂಕು), ತಿನ್ನೈ (ಸುಪಾ), ಹುನಗುಂದ (ಯಲ್ಲಾಪುರ ತಾಲೂಕು), ಬಳಕೆ (ಭಟಕಳಪೇ.) ಇವುಗಳನ್ನು ರೇಷೆಗಳಿಂದ ಕೂಡಿಸಿದರೆ ಆಗುವದು. ಇದರ ಒಟ್ಟು ಕ್ಷೇತ್ರವು ೩೯೪೫ ಚೌರಸ ಮೈಲು; ಕಾರವಾರ ತಾಲೂಕಿನ ೧೪ ಪಟ್ಟು ಇರುವದು. ಭಟಕಳದ ತುದಿಯಿಂದ ತಿನ್ನೈ ವರೆಗೆ ದಕ್ಷಿಣೋತ್ತರ ಪರಮಾವಧಿ ಉದ್ದಳತೆ ೯೦ ಮೈಲು, ಮಾಜಾಳಿಯಿಂದ ಹುನಗುಂದದ ವರೆಗೆ ಪೂರ್ವಪಶ್ಚಿಮ ಎಲ್ಲಕ್ಕೂ ಹೆಚ್ಚಿನ ಆಗಲಳತೆ ೬೦ ಮೈಲು.

ಸ್ವಾಭಾವಿಕ ಲಕ್ಷಣಗಳು.—ಭೂಗೋಲದಲ್ಲಿ ಯಾವದೊಂದು ಪ್ರದೇಶವನ್ನು ಅಥವಾ ಅದರ ಎತ್ತರವನ್ನು ಫೂಟುಗಳಿಂದ ಹೇಳುವರು. ಒಂದು ಪಟ್ಟಣ ಅಥವಾ ಪರ್ವತವು ೬೦೦ ಫೂಟು ಎತ್ತರದಲ್ಲಿರುವದೆಂದರೆ, ಅದು ಸಮುದ್ರಪಾತಳಿಯಿಂದ ಅಷ್ಟು ಎತ್ತರದಲ್ಲಿರುವದೆಂದು ತಿಳಿಯಬೇಕು. ಉದಾಹರಣಾರ್ಥವಾಗಿ ಬಿಣಗೆ (ಕಾರವಾರ ತಾಲೂಕು) ಘಟ್ಟವು ೪೩೩ ಫೂಟು, ಅಂದರೆ ಸಮುದ್ರಪಾತಳಿಯಿಂದ ಅಷ್ಟು ಎತ್ತರವೆಂದು ತಿಳಿಯಬೇಕು.

ಇದೇ ಮೇರೆಗೆ ಭೂಗೋಲದಲ್ಲಿ ಸಮುದ್ರಪಾತಳಿಯಿಂದ ೬೦೦ ಫೂಟು ಎತ್ತರದ ವರೆಗೆ ಹಬ್ಬಿದ ಪ್ರದೇಶಕ್ಕೆ 'ಬೈಲುಭೂಮಿ'ಯೆಂದೆನ್ನುವದುಂಟು. ೬೦೦ರಿಂದ ೧೨೦೦ ಫೂಟು ಎತ್ತರದ ವರೆಗೆ ಹಬ್ಬಿದ ಭೂಭಾಗಕ್ಕೆ 'ತಪ್ಪಲು' ಅನ್ನುವರು. ೧೨೦೦ರಿಂದ ೩೦೦೦ ಫೂಟುಗಳ ವರೆಗೆ ಎತ್ತರವಿರುವ ಹರವಾದ ಪ್ರದೇಶಕ್ಕೆ 'ತಪ್ಪಲಭೂಮಿ'ಯೆಂದೆನ್ನುವರು. ಕೆಲವು ತಪ್ಪಲಭೂಮಿಗಳು ಇದಕ್ಕೂ ಎತ್ತರವಿರುವದುಂಟು. ಅವಕ್ಕೆ "ಎತ್ತರವಾದ ತಪ್ಪಲಭೂಮಿಗಳು" ಎಂದೆನ್ನುವರು. ಸುತ್ತಲಿನ ಭೂಮಿಯು ವಿಶೇಷ ಎತ್ತರವಿಲ್ಲದೆ ಅದರಲ್ಲಿಯ ಕೆಲವು ಭಾಗಗಳು ಮಾತ್ರ ಎತ್ತರವಾಗಿದ್ದರೆ, ಅವುಗಳಿಗೆ ಗುಡ್ಡ ಅಥವಾ ಬೆಟ್ಟ ಎಂದೆನ್ನುವರು. ಇಂಥ ಎತ್ತರವಾದ ಸ್ಥಳಗಳು ಒಂದೇ ಸವನೆ ಹಬ್ಬುತ್ತ ನಡೆದರೆ ಗುಡ್ಡದ ಸಾಲು ಅನ್ನುವರು. ವಿಶೇಷ ಎತ್ತರವಾದ ಪ್ರದೇಶಕ್ಕೆ ಪರ್ವತವೆಂದೆನ್ನುವರು. ಇನ್ನು ವಿಸ್ತೀರ್ಣವಾದ ತಪ್ಪಲಭೂಮಿಯ ಮೇಲೆ ಸಹ ಗುಡ್ಡಗಳು ಇರಬಹುದೆಂಬದನ್ನು ಮರೆಯಕೂಡದು.

ಇನ್ನು ಕಾನಡಾ ಜಿಲ್ಹೆಯ ಪ್ರಾಕೃತಿಕ ಸ್ವರೂಪವನ್ನು ಕುರಿತು ವಿಚಾರ ಮಾಡಿದರೆ ಸ್ಥೂಲಮಾನದಿಂದ ಈ ಜಿಲ್ಹೆಯಲ್ಲಿ ಎರಡು ಭಾಗಗಳು ಕಂಡುಬರುವವು. ಅವುಗಳಲ್ಲಿ ಮೊದಲನೇದು ಘಟ್ಟದ ಕೆಳಗಿನ (ಕೊಂಕಣ) ಪ್ರದೇಶವು, ಎರಡನೇದು ಘಟ್ಟದ ಮೇಲಿನ ಪ್ರದೇಶವು. ಮೊದಲನೇ ಭಾಗದಲ್ಲಿ ಕಾರವಾರ, ಕುಮಟಾ, ಹೊನ್ನಾವರ, ಅಂಕೋಲಾ ಈ ತಾಲೂಕುಗಳೂ, ಎರಡನೇದರಲ್ಲಿ ಸಿರಸಿ, ಸಿದ್ದಾಪುರ, ಯಲ್ಲಾಪುರ, ಹಲ್ಯಾಳ ಈ ತಾಲೂಕಗಳೂ ಬರುತ್ತವೆ.

ಕಾನಡಾ ಜಿಲ್ಹೆಯ ನಕಾಶವನ್ನು ನೋಡಿದರೆ ಎಲ್ಲ ಕಡೆಯಲ್ಲಿ ಗುಡ್ಡಗಳ ಚಿಹ್ನಗಳು ಕಾಣುವವು. ಅವು ಮಧ್ಯದಲ್ಲಿ ವಿಚ್ಛಿನ್ನವಾಗದೆ ಸಾಲಾಗಿ ದಕ್ಷಿಣೋತ್ತರ ಹಬ್ಬಿರುತ್ತವೆ. ಆವುಗಳಲ್ಲಿ ಕೆಲವು ಸ್ಥಳಗಳ ಎತ್ತರವನ್ನು ಪರೀಕ್ಷಿಸುವ.

೧. ಹಲ್ಯಾಳ ತಾಲೂಕಿನಲ್ಲಿ ದರ್ಶನೀಗುಡ್ಡ (೩೦೦೦)*, ಸಾಮ್ರಾಣಿ (೧೮೦೦), ತಿನ್ನೈ (೨೯೦೦), ಡಿಗ್ಗಿ (೨೮೭೦), ಅಣಸಿ (೧೯೧೦), ಉಳಿವಿ (೧೭೦೦); ೨. ಯಲ್ಲಾಪುರ ತಾಲೂಕಿನಲ್ಲಿ ಮುಂಡಗೋಡ (೨೦೪೦), ಪಾಳಾ (೨೦೫೩); ೩. ಸಿರಸೀ ತಾಲೂಕಿನಲ್ಲಿ ಸಿರಸಿ (೨೫೦೦), ಇಸಳೂರ (೧೯೦೦), ತ್ಯಾಗ್ಲಿ (೧೯೭೯), ದೇವೀಮನಿ (೨೩೦೯), ಬನವಾಸಿ (೧೮೮೩); ೪. ಸಿದ್ದಾಪುರ ತಾಲೂಕಿನಲ್ಲಿ ಸಿದ್ದಾಪುರ (೧೮೬೩), ಬಳಗ (೧೯೨೫), ದೊಡ್ಡಮನೆ (೨೦೦೮), ಕೋಡಕಣಿ (೨೫೭೫), ಮಲೆಮನೆ (೨೬೨೦), ನೀಲಕುಂದ (೧೮೯೨), ಹೊಸತೋಟ (೧೯೫೧); ೫. ಹೊನ್ನಾವರ ತಾಲೂಕಿನಲ್ಲಿ ಗೆರಸೊಪ್ಪೆ (೪೧೧), ಹೆಬ್ಬಾನಕೆರೆ (೫೧೦), ಕಲಿಕಾಳಮ್ಮನಮನೆ (೧೫೪೦), ಕಳಲೇಗುಡ್ಡ (೨೫೦೦); ೬. ಕುಮಟಾ ತಾಲೂಕಿನಲ್ಲಿ ಕಲ್ಲಬ್ಬೆ (೫೫೭), ಯಾಣ (೨೨೭೯), ಅಘನಾಶಿನಿ (೪೧೦), ಪರ್ವತೇಶ್ವರ (೫೩೮), ಅಕೋಲೆಗುಡ್ಡ (೪೪೪), ಮಾಸೂರಗುಡ್ಡ (೨೪೩); ೭. ಅಂಕೋಲಾ ತಾಲೂಕಿನಲ್ಲಿ ಮೋತೀಗುಡ್ಡ (೩೦೦೦), ತುಳಸೀಗುಡ್ಡ (೧೮೦೦); ೮. ಕಾರವಾರ ತಾಲೂಕಿನಲ್ಲಿ ಸಿರ್ವೆಗುಡ್ಡ (೨೦೦೪), ಗುಡ್ಡೇಹಳಿಗುಡ್ಡ (೧೮೦೦), ಮುಡಗೇರಿಗುಡ್ಡ (೧೨೬೧). ಹೀಗೆ ಆಯಾ ಸ್ಥಳಗಳು ಸಮುದ್ರಸಪಾಟಿಯಿಂದ ಎತ್ತರ ಇರುತ್ತವೆ.

---

* ಈ ಅಂಕೆಗಳು ಆಯಾ ತಾಲೂಕಿನ ಹಾಗೂ ಜಿಲ್ಹೆಯ ಪ್ರಾಕೃತಿಕ ಸ್ವರೂಪವನ್ನು ತೋರಿಸುವ ಪ್ರತಿಮೆಯನ್ನು (Relief Model) ಸಿದ್ಧಮಾಡಲಿಕ್ಕೆ ಉಪಯೋಗವಾಗುವವು.

ಮೇಲಿನ ವಿವರದಿಂದ ತಿಳಿಯುವದೇನಂದರೆ—ಸಹ್ಯ ಪರ್ವತಾವಳಿಯಲ್ಲಿಯ ಗುಡ್ಡಗಳು ಒಂದೇ ಪ್ರಕಾರವಾಗಿ ಎತ್ತರವಿಲ್ಲ. ಕೆಲವುಗಳೊಳಗಿನ ಅಂತರವು ಬಹಳ ಅದೆ. ಇದಕ್ಕೆ ಕಾರಣವೇನಂದರೆ ಎತ್ತರವಾದ ಶಿಖರಗಳುಳ್ಳ ಗುಡ್ಡಗಳ ಸಾಲು ಮಧ್ಯದಲ್ಲಿದ್ದು ಅವು ಪೂರ್ವಕ್ಕೂ ಪಶ್ಚಿಮಕ್ಕೂ ಸಣ್ಣಾಗುತ್ತ ಹೋಗಿವೆ. ಪಶ್ಚಿಮದವು ಒಮ್ಮೆಲೆ ಸಣ್ಣಾಗುತ್ತ ಹೋಗಿವೆ; ಪೂರ್ವದವು ಕ್ರಮಕ್ರಮವಾಗಿ ಸಣ್ಣಾಗಿವೆ.

ಸೂಕ್ಷ್ಮರೀತಿಯಿಂದ ವಿಚಾರಮಾಡಿದರೆ ಈ ಜಿಲ್ಹೆಯಲ್ಲಿ ನಾಲ್ಕು ಭಾಗಗಳನ್ನು ಮಾಡಬಹುದು.

೧. ಸಮುದ್ರತೀರದ ತಗ್ಗುಪ್ರದೇಶ (ಕೊಂಕಣ). ಸಮುದ್ರತೀರದಲ್ಲಿ **ಕಾರವಾರ, ಬೆಲೀಕೇರಿ** ಎಂಬ ಎರಡು ಆಖಾತಗಳಿವೆ. ಅಲ್ಲಲ್ಲಿಗೆ ಸಣ್ಣ ಸಣ್ಣ ನಡುಗಡ್ಡೆ, **ಭೂಶಿರ, ಹೊಳೆಗಳ ಮುಖ, ತೆಂಗಿನ ಬನ** ಇವುಗಳಿಂದ ಈ ಪ್ರದೇಶವು ಚಿತ್ರವಿಚಿತ್ರವಾಗಿದೆ. ದಂಡೆಯ ಹಿಂಬದಿಯಲ್ಲಿ ನಿಬಿಡವಾದ ಅರಣ್ಯಗಳೂ, ಉನ್ನತವಾದ ಶಿಖರಗಳೂ ಕಂಗೊಳಿಸುತ್ತವೆ. **ದೇವಗಡ, ಅಜಾದ್ವೀಪ, ಬಸವರಾಜದುರ್ಗ** ಇವು ಮುಖ್ಯ ನಡುಗಡ್ಡೆಗಳು. **ಕಾಳೀನದಿಯ ಮುಖ, ಗಂಗಾವಳಿಯ ಮುಖ, ಶರಾವತಿಯ ಮುಖ,** ಇವೇ ಮುಖ್ಯ ನದಿಯ ಮುಖಗಳು. ಇವಲ್ಲದೆ ಅನೇಕ ಒತ್ತುಗಳಿರುವವು. ಅವುಗಳೊಳಗೆ ಭರತಿಯ ಕಾಲಕ್ಕೆ ಉಪ್ಪುನೀರು ಬರುವದು. ಈ ಪ್ರದೇಶವು ಕೆಲವೆಡೆಯಲ್ಲಿ ಹತ್ತೆಂಟು ಮೈಲು ಮಾತ್ರ, ಕೆಲವೆಡೆಯಲ್ಲಿ ೨೦, ೨೫ ಮೈಲು ಸಹ ಅಗಲವಾಗಿದೆ. ಇದು ಪೂರ್ಣವಾಗಿ ಉಸುಬಿನ ಭೂಮಿಯು.

೨. ಅಲ್ಲಿಂದ ಪೂರ್ವಕ್ಕೆ ೮, ೧೦ ಮೈಲುಗಳ ವರೆಗೆ, ಏರುತ್ತ ಹೋಗುವ ಘಟ್ಟದ ಇಳುಕಲಲ್ಲಿರುವ ಕೆಂಪು ಬಣ್ಣದ ಭೂಮಿಯುಳ್ಳ ಭಾಗವಿರುವದು. ಅಲ್ಲಲ್ಲಿ ಸಣ್ಣ ದೊಡ್ಡ ಗುಡ್ಡಗಳೂ ಕೆಲವು ಕಡೆ ಹರಿನೀರಿನ ಝರಿಗಳೂ ಇರುವವು. ಘಟ್ಟದ ಹವೆಯಾಗಲಿ ಭೂಮಿಯಾಗಲಿ ಇಲ್ಲಿ ಪೂರಾ ಇರುವದಿಲ್ಲ. ಆದರೆ ಅಲ್ಲಿಯ ಹವೆಯು ಸಮುದ್ರದಂಡೆಯ ಜನರಿಗೆ ರೋಗಕರ (ಕುತ್ಸಿತ)ವಾಗಿರುವದು. ಆದದರಿಂದ ಈ ಪ್ರದೇಶಕ್ಕೆ 'ಕುಚ್ಚೇನಾಡು' ಅನ್ನುವರು. ಇಲ್ಲಿ ತುಸುಮಟ್ಟಿಗೆ ಅಡವಿಯೂ ಇರುವದು. ಈ ಪ್ರದೇಶದಲ್ಲಿ ಕಾರವಾರ ತಾಲೂಕಿನ ೫/೬, ಅಂಕೋಲಾ ತಾಲೂಕಿನ ೧/೮, ಕುಮಟಾ ತಾಲೂಕಿನ ೩/೪, ಹೊನ್ನಾವರ ತಾಲೂಕಿನ ೧/೩ ಭಾಗಗಳು ಬರುತ್ತವೆ.

೩. ಘಟ್ಟವನ್ನು ಏರಿದ ಮೇಲೆ ಭಯಂಕರವಾದ ಅಡವಿಯ ಸಾಲು ಸರಾಸರಿ ೧೨ ವೈಲುಗಳ ವರೆಗೆ ದಟ್ಟಾಗಿ ಹಬ್ಬಿರುವದು. ಮಧ್ಯಮಧ್ಯದಲ್ಲಿ ಎಲ್ಲಾದರೂ ನಾಲ್ಕೆಂಟು ಮನೆಗಳುಳ್ಳ ಊರು ತೋಟಗಳಿಂದ ಯುಕ್ತವಾಗಿ ಇರುವವು. ಈ ಪ್ರದೇಶಕ್ಕೆ "ಅಡವೀಸೀಮೆ" ಎಂದೆನ್ನುವರು. ಇದರಲ್ಲಿ ಸುಪಾ ಹಲ್ಯಾಳಗಳ ೨/೩ ಭಾಗವೂ ಯಲ್ಲಾಪುರ-ಸಿರಸಿ-ಸಿದ್ದಾಪುರಗಳ ೨/೩ ಭಾಗವೂ ಬರುವವು.

೪. ಈ ಸೀಮೆಯ ಪೂರ್ವಪ್ರದೇಶಕ್ಕೆ "**ತೋಟದ ಸೀಮೆ**"ಯನ್ನುವರು. ಇದು ಸರಾಸರಿ ೨೦೦೦ ಫೂಟು ಎತ್ತರವಾಗಿ, ಅಲ್ಲಲ್ಲಿ ಸಣ್ಣ ದೊಡ್ಡ ಗುಡ್ಡಗಳೂ ಇದ್ದು, ಅಡವಿಯು ಕಡಿಮೆಯಾಗುತ್ತ ಹೋಗುವದು. ಇದರ ಮುಂದೆ ಬೈಲುಸೀಮೆಯು ಹತ್ತಿರುವದರಿಂದ ಅಲ್ಲಿಯ ಮಾದರಿಯು ಅಲ್ಪಾಂಶದಿಂದ ಇದರಲ್ಲಿ ಬಂದಿರುವದು. ಗುಡ್ಡಗಳ ಬುಡದಲ್ಲಿ ತೋಟವನ್ನು ಮಾಡಲಿಕ್ಕೆ ಅನುಕೂಲವಿರುವದು. ಈ ಭಾಗದಲ್ಲಿ ಹಲ್ಯಾಳ ತಾಲೂಕಿನ ಪೂರ್ವದ ೧/೩ ಭಾಗವೂ, ಮುಂಡಗೋಡ ಪೇಠಾ ಸಿರ್ಸಿ ತಾಲೂಕುಗಳ ಪೂರ್ವದ ೧/೩ ಭಾಗವೂ, ಸಿದ್ದಾಪುರ ತಾಲೂಕಿನ ಪೂರ್ವದ ೧/೩ ಭಾಗವೂ ಸಮಾವೇಶವಾಗುತ್ತವೆ.

ಅಂತೂ ಸರಾಸರಿ ಮಾನದಿಂದ ಕರಾವಳಿಸೀಮೆಯ ಕ್ಷೇತ್ರವೂ ತೋಟದ ಸೀಮೆಯ ಕ್ಷೇತ್ರವೂ ಸರಿಯಾಗಬಹುದು*. ಕುಚ್ಚೇನಾಡಸೀಮೆಯ ಕ್ಷೇತ್ರವು ಅಡವೀಸೀಮೆಯ ಕ್ಷೇತ್ರದ ೨/೩ ಆಗಬಹುದು. ಅಂದರೆ ಅಡವೀಸೀಮೆಯು ಹಿರೇ ಅಣ್ಣನೂ, ಆತನಿಗೆ ಕುಚ್ಚೇನಾಡು—ತೋಟದ ಸೀಮೆಗಳೆಂಬ ಸಹೋದರರೂ ಎಂದು ಕಲ್ಪಿಸಬಹುದು. ಯಾಕಂದರೆ ಇಲ್ಲಿಯ ಹವೆ-ಮಳೆಗಳಲ್ಲಿಯೂ ಮಣ್ಣಿನಲ್ಲಿಯೂ ಸಾಮ್ಯವು ಬಹಳ ಇರುವದು.

ಕರಾವಳಿ ಸೀಮೆಯಲ್ಲಿ ಗುಡ್ಡಗಳೇ ಇಲ್ಲ; ಅಡವಿ ಎಂಬದು ಗೊತ್ತಿಲ್ಲ. ಎಲ್ಲಾದರೂ ಗುಡ್ಡಗಳಿದ್ದರೆ ಅವುಗಳ ಎತ್ತರವು ೧೦೦ರಿಂದ ೪೦೦ ಫೂಟುಗಳ ಒಳಗೆ. ಈ ಪ್ರದೇಶವು ಸಮುದ್ರದ ದಂಡೆಗೆ ಇರುವದಷ್ಟೇ; ದಂಡೆಗೆ ಕರೆ ಎನ್ನುವರು. ಆದದರಿಂದ ಈ ಪ್ರದೇಶಕ್ಕೆ "ಕರಾವಳಿ" ಎಂಬ ಹೆಸರು ಬಂದಿರಬಹುದು.

ಕುಚ್ಚೇನಾಡಿನಲ್ಲಿ ೫೦೦ರಿಂದ ಒಂದು ಒಂದೂವರೆ ಸಾವಿರ ಫೂಟುಗಳ ವರೆಗೆ ಎತ್ತರವಾದ ಗುಡ್ಡಗಳೂ, ಹುಲಿ, ಕಾಡಹಂದಿ ಮೊದಲಾದ ಹಿಂಸ್ರಪಶುಗಳು ವಾಸಮಾಡುವಂಥ ಅಡವಿಗಳೂ ಇರುವವು.

---

* ಶಿಕ್ಷಕರು ಪ್ರತಿಮಾದರ್ಶಕ ಪಟ (Relief Model)ದ ಮೇಲೆ ಬೇರೆ ಬೇರೆ ಬಣ್ಣವನ್ನೂ ಕೊಟ್ಟು, ಈ ಪ್ರದೇಶಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡತಕ್ಕದ್ದು.

## ೩ನೆಯ ಪ್ರಕರಣ.

### ನದಿಗಳು.

೭೫ನೇ ರೇಖಾಂಶವು ಪೂರ್ವ ಪಶ್ಚಿಮ ಜಲಚ್ಛೇದವೆಂದು ಕಂಡುಬರುವದು. ಯಾಕಂದರೆ ಅದರ ಪಶ್ಚಿಮಕ್ಕೆ ಹುಟ್ಟಿದ ಹೊಳೆಗಳು ಪಶ್ಚಿಮಕ್ಕೇ ಹರಿದವೆ; ಪೂರ್ವಕ್ಕೆ ಹುಟ್ಟಿದವು ಪೂರ್ವಕ್ಕೇ ಹರಿದವೆ. ಇದಕ್ಕೆ ಗಂಗಾವಳಿಯು ಮಾತ್ರ ಅಪವಾದವು. ಅದು ಸಹ್ಯಾದ್ರಿಯನ್ನು ದಾಟಿ ಪಶ್ಚಿಮಕ್ಕೆ ಹರಿದದೆ.

೧. **ಕಾಳೀನದಿ.**—ಗೋವೇಸೀಮೆಯ ಸರಹದ್ದಿನ ಮೇಲೆ ಸಹ್ಯಪರ್ವತದ ತಿನ್ನೈ, ಡಿಗ್ಗಿ ಘಟ್ಟಗಳ ಹತ್ತರ **ಕಾಳೀ ಪಾಂಥರೀ** ಎಂಬ ಎರಡು ಪ್ರವಾಹಗಳು ಪ್ರತ್ಯೇಕವಾಗಿ ಪೂರ್ವಕ್ಕೆ ಹರಿದು ಸುಪೆಯ ಹತ್ತರ ಸಂಗಮವಾಗುತ್ತವೆ. ಸುಪೆಯಿಂದ ಮುಂದೆ ಆಗ್ನೇಯಕ್ಕೆ ಸುಮಾರು ೩೦ ಮೈಲು ಹರಿದ ಮೇಲೆ ನೈಋತ್ಯಕ್ಕೆ ಹರಿದು ೩೦ ಮೈಲು ಬಂದ ಬಳಿಕ ಪಶ್ಚಿಮಕ್ಕೆ ಮತ್ತೆ ೪೦ ಮೈಲು ಹರಿದು ಅರಬಿಸಮುದ್ರಕ್ಕೆ ಕೂಡುತ್ತದೆ. ಇದರ ಉದ್ದಳತೆಯು ಒಟ್ಟಿಗೆ ೧೩೦ ಮೈಲು ಇರುವದು. ಈ ನದಿಯು ದಟ್ಟಾದ ಅಡವಿಯೊಳಗಿಂದ ಹರಿಯುವದರಿಂದ ಗಿಡದ ತೊಪ್ಪಲು ಬಿದ್ದು ಕೊಳೆತು ನೀರು ಕಪ್ಪಾಗಿ ತೋರುವದರಿಂದ ಈ ನದಿಗೆ "**ಕಾಳಿ**" ಎಂಬ ಹೆಸರು ಬಂದದೆ. ಇದರ ದಂಡೆಯ ಮೇಲೆ **ಸುಪಾ, ನಂದೀಗದ್ದೆ, ಬರಬಳ್ಳಿ, ಕದ್ರಾ, ಮಲ್ಲಾಪುರ, ಭೈರೆ, ಹಳಗೆ, ಕೆರವಡಿ, ಸುಂಕೇರಿ, ಕಣಿಕೋಣ, ನಂದನಗದ್ದೆ** ಮುಂತಾದ ಊರುಗಳಿರುತ್ತವೆ. ಮುಖದ ಹತ್ತರ **ಕೋಡೀಬಾಗ, ಸದಾಶಿವಗಡ** ಇರುವವು. ಈ ನದಿಯು ನೈಋತ್ಯಕ್ಕೆ ಒಲಿಯುವಲ್ಲಿ ಹಲ್ಯಾಳದ ಕಡೆಯಿಂದ ತಟ್ಟೀಹಳ್ಳವೆಂಬ ಸುಮಾರು ೨೦ ಮೈಲು ಉದ್ದವಾದ ಶಾಖೆಯೂ, ಅಲ್ಲಿಂದ ಹತ್ತುಹನ್ನೆರಡು ಮೈಲು ಬಂದನಂತರ ಪಶ್ಚಿಮ ಕಡೆಯಿಂದ ಮಾವಿನಹಳ್ಳವೆಂಬ ಶಾಖೆಯೂ, ಕಣಿಕೋಣದ ಹತ್ತರ "**ಕಡವಾಡ ಹೊಳೆ**" ಎಂಬ ಆರೇಳು ಮೈಲು ಉದ್ದವಾದ ಶಾಖೆಯೂ ಬಂದು ಕೂಡುತ್ತವೆ. ಈ ನದಿಯಲ್ಲಿ ಸಮುದ್ರದ ದಂಡೆಯಿಂದ ೨೦ ಮೈಲಿನ ಮೇಲಿರುವ ಕದ್ರಾದ ವರೆಗೆ (ವ್ಯಾಪಾರದ) ಡೋಣಿಗಳು ನಿಯಮದಿಂದ ದಿನಾಲು ತಿರುಗುತ್ತವೆ. ಮತ್ತು

ಬೇಸಿಗೆಯಲ್ಲಿ ಅಲ್ಲಿಯ ವರೆಗೆ ಉಪ್ಪು ನೀರು ಹರಿಯುತ್ತದೆ. ಮಳೆಗಾಲದಲ್ಲಿ ಪ್ರತಿವರ್ಷ ಈ ನದಿಗೆ ಮಹಾಪೂರ ಬರುವದು. ಅದು ಯೋಗ್ಯ ಕಾಲಕ್ಕೆ ಬಂದು ಎರಡು ಮೂರು ದಿವಸಕ್ಕೆ ಇಳಿದರೆ ದಂಡೆಯ ಭೂಮಿಯು ಉತ್ತಮವಾಗಿ ಬೆಳೆಯುವದು. ಬಹು ದಿವಸ ನಿಂತರೆ ಬೆಳೆ ಕೊಳೆತು ಹಾಳಾಗುವದು. ಹಲ್ಯಾಳ ಯಲ್ಲಾಪುರ ತಾಲೂಕುಗಳ ಅಡವಿಯೊಳಗಿಂದ ಈ ನದಿಯು ಹರಿದುಬರುವದರಿಂದ ಅನೇಕ ಗಿಡಮರಗಳ ಎಲೆ ಬೇರುಗಳು ಕೊಳೆತು ಸಂಗ್ರಹಿಸುವವು. ಅಲ್ಲಿ ಈ ನೀರು ಸೀ ಇದ್ದಾಗ್ಯೂ ಆರೋಗ್ಯಕರವಲ್ಲ. ಈ ನದಿಗೆ ಮಹಾಪೂರ ಬಂದಾಗ್ಗೆ ಹಲ್ಯಾಳ ತಾಲೂಕಿನ ಘೋರಾರಣ್ಯದೊಳಗಿನ ಗಗನಚುಂಬಿಗಳಾದ ವೃಕ್ಷಗಳಿಂದ ಹುಟ್ಟುವ ಬೆಲೆಯುಳ್ಳ ಕಟ್ಟಿಗೆಗಳನ್ನು ತೆಪ್ಪಕಟ್ಟಿ ಕದ್ರಾದ ವರೆಗೆ ಬೇಕಾದಲ್ಲಿ ಒಯ್ಯುವರು. ಇದು ಆಗ್ಗೆ ಬಾಡಿಗೆ ಇಲ್ಲದ ಬಂಡಿಯಂತೆ ಉಪಯೋಗವಾಗುವದು. ಇದು ಸ್ವಾಭಾವಿಕ ಅನುಕೂಲವು. ಈ ನದಿಯ ದಂಡೆಯಲ್ಲಿ 'ದಾಂಡೇಲಿ' ಎಂಬ ಕ್ಷೇತ್ರವು ಪ್ರಸಿದ್ಧವು. ಕಾರವಾರ ತಾಲೂಕಿನಲ್ಲಿ ಈ ನದಿಯ ಪಾತ್ರದಲ್ಲಿ ಉಸುಬು ಬಂದು ನಿಂತು ನಡುಗಡ್ಡೆಯಂಥ ಭೂಮಿಯಾಗಿರುತ್ತದೆ. ಅದಕ್ಕೆ "ಜೂಗ" ಎಂಬ ಹೆಸರು ಕೊಡಲ್ಪಟ್ಟಿದೆ. ಕೋಡೀಬಾಗ ಸದಾಶಿವಗಡಗಳ ಹತ್ತರ ಈ ತಾರಿಯ* ಅಗಲು $\frac{1}{2}$ ಮೈಲಿಗಿಂತ ಹೆಚ್ಚುಂಟು. ಯಲ್ಲಾಪುರ ಹಲ್ಯಾಳ ತಾಲೂಕುಗಳಲ್ಲಿ ಈ ನದಿಯು ಬಹಳ ಆಳವಾದ ತಗ್ಗಿನಲ್ಲಿ ಹರಿಯುವದರಿಂದಲೂ ಪಾತ್ರದಲ್ಲಿ ಬಂಡೆಗಲ್ಲುಗಳು ಬಹಳ ಇರುವದರಿಂದಲೂ ಡೋಣಿಗಳು ತಿರುಗುವದಿಲ್ಲ.

೨. **ಬೆಲೇಕೇರಿನದಿ.**— ಇದು ಅಂಕೋಲಾ ತಾಲೂಕಿನ ಉತ್ತರದ ಗುಡ್ಡಗಳಲ್ಲಿ ಹುಟ್ಟಿ ನೈಋತ್ಯಕ್ಕೆ ಹರಿದು ಅರಬಿಸಮುದ್ರಕ್ಕೆ ಕೂಡುತ್ತದೆ. ಧಡದಲ್ಲಿ ಅವುರ್ಸಾ; ಮುಖದ ಹತ್ತರ ಬೆಲೇಕೇರಿ. ಇದರ ಉದ್ದಳತೆ ಸುಮಾರು ೧೦ ಮೈಲು.

೩. **ಗಂಗಾವಳಿನದಿ**— ಇದು ಧಾರವಾಡದ ದಕ್ಷಿಣಕ್ಕೆ ಸೋಮೇಶ್ವರದ ಹತ್ತರ ಸಣ್ಣ ಕೆರೆಯಲ್ಲಿ ಹುಟ್ಟಿದ ಶಾಲ್ಮಲಾ ಬೇಡತಿಹಳ್ಳಗಳೆಂಬ ಎರಡು ಪ್ರವಾಹಗಳಿಂದ ಆಗಿದೆ. ಅನಂತರ ಇವೆರಡು ಪ್ರವಾಹಗಳು ಒಟ್ಟುಗೂಡಿ, ಬೇಡತಿಹಳ್ಳವೆಂಬ ಹೆಸರಿನಿಂದಲೇ ೧೫ ಮೈಲು ಹರಿದ ಬಳಿಕ ಪಶ್ಚಿಮಕ್ಕೆ ಒಲಿದು ಕಾನಡಾ ಜಿಲ್ಹೆಯ ಯಲ್ಲಾಪೂರ ತಾಲೂಕ ಹುನಗುಂದದ ಹತ್ತರ

* 'ತಾರಿ' ಎಂದರೆ ದಾಟುವ ಸ್ಥಳವು. ತೃ=ದಾಟು, ಇದರಿಂದ ಹುಟ್ಟಿದ ಶಬ್ದವು.

ಬಂದು ಸೇರುತ್ತದೆ. ಅಲ್ಲಿಂದ ಸುಮಾರು ೧೦ ಮೈಲು ಪಶ್ಚಿಮಕ್ಕೆ ಹರಿದು, ನೈಋತ್ಯಕ್ಕೆ ಬಂದು, ಸುಮಾರು ೫೦ ಮೈಲು ಅಂಕಡೊಂಕಾಗಿ ಯಲ್ಲಾಪುರ ಅಂಕೋಲಾ ತಾಲೂಕುಗಳಲ್ಲಿ ಹರಿದು, ಗಂಗಾವಳಿಯ ಹತ್ತರ ಅರಬೀ ಸಮುದ್ರಕ್ಕೆ ಕೂಡುತ್ತದೆ. ಮುಖದ ಹತ್ತರ ಇರುವ ಊರ ಮೇಲಿಂದ ಇದಕ್ಕೆ "ಗಂಗಾವಳಿ" ಎಂಬ ಹೆಸರು ಬಂದದೆ. ಈ ತಾರೆಯ ಅಗಲು ಸುಮಾರು ೩ ಫರ್ಲಾಂಗ ಇರುವದು. ಮುಖದಿಂದ ೧೫ ಮೈಲಿನಲ್ಲಿರುವ ಗುಂಡಬಾಳೆಯ ವರೆಗೆ ಈ ನದಿಯಲ್ಲಿ ಡೋಣಿಗಳು ನಡೆಯುತ್ತವೆ. ಧಡದಲ್ಲಿ ಹುನಗುಂದ, ಸಿರೂರ, ಹಡವ, ನಾಡಮಾಸಕೇರಿ ಎಂಬ ಊರುಗಳು ಇರುತ್ತವೆ.

೪. **ಅಘನಾಶಿನೀನದಿ**—ಇದು ಸಿರಸಿಯ ಪಶ್ಚಿಮದಲ್ಲಿ ೧೫ ಮೈಲಿನ ಮೇಲೆ ಇರುವ ಮಂಜಗುಣಿಯ ಹೊಂಡದಲ್ಲಿ ಉಗಮವಾದ ಒಂದು ಹಾಗೂ ಶಿರ್ಶಿಯ ಹತ್ತರದಿಂದ ಬಂದ ಒಂದು ಹೀಗೆ ಎರಡು ಪ್ರವಾಹಗಳು ಹೊರಟು, ದಕ್ಷಿಣಕ್ಕೆ ಹರಿದು ಮದ್ದಳ್ಳಿಯ ಹತ್ತರ ಸಂಗಮವಾಗಿ, ಅಘನಾಶಿನಿ ಎಂಬ ಹೆಸರಿನಿಂದ ಸಿದ್ದಾಪುರ ಕುಮಟಾ ತಾಲೂಕುಗಳಲ್ಲಿ ಹರಿದು ಅರಬೀ ಸಮುದ್ರಕ್ಕೆ ಕೂಡುತ್ತದೆ. ಇದಕ್ಕೆ ಉಪ್ಪಿನ ಪಟ್ಟಣದ ಹತ್ತರ ಸಂಡಿ (ಚಂಡಿಕಾ) ಎಂಬ ಶಾಖೆಯು ಯಾಣದಿಂದಲೂ, ಮಾಸೂರ ಹತ್ತರ ಹಳ್ಳಾಕರ ಹೊಳೆಯು ಹಳ್ಳಾಕರದಿಂದಲೂ ಬಂದು ಕೂಡುತ್ತವೆ. ಉಪ್ಪಿನ ಪಟ್ಟಣದಿಂದ ಮುಂದಿನ ಪಾತ್ರದಲ್ಲಿ ಕೆಲವು ಸಣ್ಣ ಸಣ್ಣ ಕೂರ್ವೆಗಳು ಆಗಿವೆ. ಈ ನದಿಯಲ್ಲಿ ಮುಖದಿಂದ ೧೫ ಮೈಲಿನ ಮೇಲೆ ಇರುವ ಉಪ್ಪಿನ ಪಟ್ಟಣದ ವರೆಗೆ ಡೋಣಿಗಳು ಓಡಾಡುತ್ತವೆ. ಮತ್ತು ಸಾಣೇಕಟ್ಟೆಯಿಂದ ಹಳ್ಳಾಕರಿಗೆ ಮಳೆಗಾಲ ಬೇಸಿಗೆಗಳಲ್ಲಿ ನಿಯಮದಿಂದ ಡೋಣಿಗಳು ಹೋಗುತ್ತವೆ. ಈ ನದಿಯ ಧಡದಲ್ಲಿ ಬಾಳೂರು, ಉಪ್ಪಿನ ಪಟ್ಟಣ, ಕಲ್ಲಬ್ಬೆ, ಮಣ್ಕೆ, ದೀವಿಗೆ ಮಿರ್ಜಾನ, ಹೆಗಡೆ, ಮಾಸೂರು ಮುಂತಾದ ಊರುಗಳಿರುವವು. ಮುಖದಲ್ಲಿರುವ ಅಘನಾಶಿನಿ ಊರಿನಿಂದಲೇ ಇದಕ್ಕೆ ಈ ಹೆಸರು ಬಂದದೆ. ಇದರ ಒಟ್ಟು ಉದ್ದಳತೆಯು ೬೦ ಮೈಲು. ಈ ನದಿಯು ಸಿದ್ದಾಪುರದ ಈಶಾನ್ಯಕ್ಕೆ ೧೨ ಮೈಲಿನ ಮೇಲೆ ಬಂಚಳ್ಳಿ ಎಂಬ ಊರ ಹತ್ತರ ೪೦೦ ಫೂಟು ಒಮ್ಮೆಲೆ ಆಧಾರ ತಪ್ಪಿ ಕೆಳಗೆ ಬೀಳುತ್ತದೆ. ಇದರ ಸಪ್ಪಳವು ("ಜೋ" ಎಂಬ ಶಬ್ದವು) ಬಹು ದೂರ ಕೇಳುವದರಿಂದಲೂ, ಆ ಸಪ್ಪಳದಿಂದ ಕಿವಿಗಳು ಗಡಚಿಕ್ಕುವದರಿಂದಲೂ ಇದಕ್ಕೆ "ಕೆಪ್ಪಜೋಗ" ಎಂಬ ಹೆಸರು ಬಂದಿದೆ. ಇದನ್ನು ಕಾನಡಾ ಜಿಲ್ಲೆಯ ಕಲೆಕ್ಟರರಾಗಿದ್ದ

ಲಸಿಂಗ್ಟನ್ನ ದೊರೆಗಳು ಮೊದಲು ಕಂಡದ್ದರಿಂದ ಇದಕ್ಕೆ "ಲಸಿಂಗ್ಟನ್ನ ಫಾಲ್ಸ" ವೆಂತಲೂ ಅನ್ನುವದುಂಟು.

೫. ಶರಾವತೀನದಿ—ಇದು ಮೈಸೂರ ಸೀಮೆಯಲ್ಲಿ ಬಿದನೂರ ಹತ್ತರ ಹುಟ್ಟಿ ಸುಮಾರು ೪೦ ಮೈಲು ಉತ್ತರಕ್ಕೆ ಹರಿದ ಮೇಲೆ ಕಾನಡಾ ಜಿಲ್ಹೆಯನ್ನು ಸೇರಿ, ಸಿದ್ದಾಪುರ ತಾಲೂಕಿನ ದಕ್ಷಿಣ ಮೇರೆಯಾಗಿ ಸುಮಾರು ೧೦ ಮೈಲು ಹರಿದು ಹೊನ್ನಾವರ ತಾಲೂಕನ್ನು ಸೇರಿ, ಅಲ್ಲಿ ಸುಮಾರು ೭೦ ಮೈಲು ಹರಿದು ಅರಬಿಸಮುದ್ರಕ್ಕೆ ಕೂಡುತ್ತದೆ. ಇದು ಕಾನಡಾ ಜಿಲ್ಹೆಯಲ್ಲಿ ಎಲ್ಲಕ್ಕೂ ದೊಡ್ಡ ನದಿಯು. ಇದರ ಉದ್ದಳತೆ ೧೨೦ ಮೈಲು. ಇದಕ್ಕೆ ಬಡಗಣೆ ಎಂಬ ಹೊಳೆಯು ಚಂದಾವರದಿಂದ ಸುಮಾರು ಹತ್ತು ಹದಿನೈದು ಮೈಲು ಹರಿದು ಬಂದು, ಹೊನ್ನಾವರದ ಹತ್ತರ ಕೂಡುತ್ತದೆ. ಈ ನದಿಯು ಹರಿದು ಬರುವ ಇಳುಕಲು ಕೋಡಕಣಿಯಿಂದ ಗೆರಸಪ್ಪೆಯ ವರೆಗೆ ೧೦೦೦ ಫೂಟು ಕಡಿದಾಗಿದೆ. ಈ ನದಿಯ ಪ್ರವಾಹವು ಆಧಾರವಿಲ್ಲದೆ ಕೆಳಗೆ ಬೀಳುವದರಿಂದ ಗೆರಸಪ್ಪೆಯಿಂದ ೧೮ ಮೈಲುಗಳ ಮೇಲೆ ಕೋಡಕಣಿಯ ಹತ್ತರ ಬಹುಪ್ರಸಿದ್ಧ ತಡಸಲು ಆಗಿದೆ. ಎತ್ತರದಿಂದ ನೀರು ಕೆಳಗೆ ಬೀಳುವಾಗ "ಧಬಧಬ" ಎಂಬ ಶಬ್ದವಾಗುವ ಕಾರಣ "ಧಬಧಬೆ" ಎನ್ನುವರು. ಇದಲ್ಲದೆ ದೂರಿನಿಂದ 'ಜೋ' ಎಂಬ ಶಬ್ದವು ಕೇಳಿಬರುವ ಕಾರಣ ಅದಕ್ಕೆ "ಕೋಡಕಣಿಜೋಗ" ಎಂತಲೂ ಅನ್ನುವರು. ಪ್ರವಾಹವು ನಾಲ್ಕು ಭಾಗಗಳಾಗಿ ಕೆಳಗೆ ಬೀಳುತ್ತದೆ. ಒಂದು ಸರುವು ದೊಡ್ಡದಾಗಿ ೮೯೮ ಫೂಟು ಎತ್ತರದಿಂದ ಕೆಳಗೆ ಬೀಳುತ್ತದೆ. ಅದಕ್ಕೆ "ರಾಜಾ ತಡಸಲು" ಅನ್ನುವರು. ಮತ್ತೊಂದು ಬಹಳ ಅಬ್ಬರ ಮಾಡುವದರಿಂದ ಅದಕ್ಕೆ "ಅಬ್ಬರದ ತಡಸಲು" ಅನ್ನುವರು. ಮೂರನೆಯದು ಪಾವಟಿಗೆಯಂತೆ ಇರುವ ಬಂಡೆಗಲ್ಲುಗಳ ಮೇಲೆ ಬಿದ್ದು ಬಾಣದಂತೆ ಮೇಲಕ್ಕೆ ಹಾರುವ ಕಾರಣ ಅದಕ್ಕೆ "ಬಾಣದ ತಡಸಲು" ಅನ್ನುವರು. ನಾಲ್ಕನೆಯದು ತೀರ ಸ್ವಲ್ಪ ಇಳುಕಲಿನಲ್ಲಿ ಸಾವಕಾಶ ಹರಿಯುವ ಕಾರಣ ಮೇಲೆ ಬಿಳೇ ಬುರುಗು ಸದಾ ಕಾಣುವದರಿಂದ ಅದಕ್ಕೆ "ಗೌರವನಿತಾ" (ಬಿಳೇ ಮುದಿಕಿ) ಎಂದೆನ್ನುವರು. ನದಿಯ ದಂಡೆಯ ಮೇಲೆ ಮಲವಳ್ಳಿ, ಕೋಡಕಣಿ, ಗೆರಸಪ್ಪೆ, ಇಡಗುಂಜಿ, ಹೊನ್ನಾವರ, ಕಾಸರಗೋಡುಗಳು ಇರುವವು. ಈ ನದಿಯಲ್ಲಿ ಮುಖದಿಂದ ೧೮ ಮೈಲು ದೂರ ಇರುವ ಗೆರಸಪ್ಪೆಯ ವರೆಗೆ ಡೋಣಿಗಳು ಹೋಗಿ ಬರುತ್ತವೆ. ಮುಖದ ತಾರೆಯ ಅಗಲು ೧ ಮೈಲು; ಇದರಲ್ಲಿಯೂ ಕೆಲವು

ಕೂರ್ವೆಗಳು ಅವೆ. ಅವುಗಳಲ್ಲಿ ಮಾವಿನ ಕೂರ್ವೆಯು ಒಂದಾಗಿರುವದು. ಇದು ಫಲದ್ರೂಪವಾದ ಪ್ರದೇಶವಿದ್ದು ಇದರಲ್ಲಿ ಜನರು ಸುಖರೂಪವಾಗಿ ವಾಸಮಾಡಿರುವರು. ಇದರ ಉತ್ಪನ್ನವು ೫—೬ ಸಾವಿರ ರೂಪಾಯಿ ಉಂಟು.

೬. **ಶಿರಾಳಿನದಿ**— ಇದು ಮೈಸೂರ ಸೀಮೆಯಲ್ಲಿ ಹುಟ್ಟಿ ಹೊನ್ನಾವರ ತಾಲೂಕಿನಲ್ಲಿ ಹರಿದು ಅರಬಿಸಮುದ್ರಕ್ಕೆ ಕೂಡುತ್ತದೆ. ದಂಡೆಯ ಮೇಲೆ ಶಿರಾಳಿ, ಗುಡಿಹಕ್ಕಲ.

೭. **ವೆಂಕಟಾಪುರನದಿ.**— ಹೊನ್ನಾವರ ತಾಲೂಕಿನ ಬಸವನ ಬಾವಿ ಯಲ್ಲಿ ಹುಟ್ಟಿ, ಅಲ್ಲೇ ಹರಿದು ಅರಬಿಸಮುದ್ರಕ್ಕೆ ಕೂಡುತ್ತದೆ. ಧಡದಲ್ಲಿ ಬಳ್ಳೂರು, ಮುಂಡವಳ್ಳಿ.

೮. **ಕುಮಟಾ ಹೊಳೆ.**— ಇದು ಉಂಚಗೆ ಗುಡ್ಡದಲ್ಲಿ ಹುಟ್ಟಿ, ಪಶ್ಚಿಮಕ್ಕೆ ಹರಿದು, ಬಗ್ಗೋಣ-ಕಲಬಾಗಗಳ ಮೇಲಿಂದ ಹಾಯ್ದು ಅರಬಿ ಸಮುದ್ರಕ್ಕೆ ಕೂಡುತ್ತದೆ. ದಂಡೆಯ ಮೇಲೆ ಕುಮಟಾ, ಅಳವೇಕೋಡಿ, ವನ್ನಳ್ಳಿ, ಇವು ಮುಖ್ಯ. ಇವುಗಳಲ್ಲಿ ಕುಮಟಾದ ಮುಖ್ಯ ಬಂದರದಿಂದ ಸಣ್ಣ ಬಂದರದ ವರೆಗೆ ಡೋಣಿಗಳು ನಡೆಯುತ್ತವೆ. ಈ ಹೊಳೆಯಲ್ಲಿ ಇಳತದ ಕಾಲಕ್ಕೆ ತಾರಿಯ ಹತ್ತರ ದಾಟಲಿಕ್ಕೆ ಬರುವಷ್ಟು ನೀರು ಕಡಿಮೆ ಇರುತ್ತದೆ. ಅಗಲ ಫೂಟು ೨೦೦.

೯. **ವರದಾ ನದಿ.** — ಮೈಸೂರ ಸೀಮೆಯಲ್ಲಿ ಹುಟ್ಟಿ, ಸಿರಸಿ ತಾಲೂಕಿನ ಆಗ್ನೇಯ ಭಾಗದಲ್ಲಿ ಹರಿದು, ಧಾರವಾಡ ಜಿಲ್ಹೆಯ ಹಾನಗಲ್ಲ—ಕರ್ಜಗಿ ತಾಲೂಕುಗಳಲ್ಲಿ ಹರಿದು, ತುಂಗಾಭದ್ರಾ ನದಿಗೆ ಕೂಡುತ್ತದೆ. ದಂಡೆಯ ಮೇಲೆ ಭಾಸಿ—ಬನವಾಸಿಗಳು ಇರುವವು. ಬನವಾಸೀ ಕ್ಷೇತ್ರಕ್ಕೆ ಇದೇ "ತೀರ್ಥ"ವಾಗಿದೆ. ಇದರ ದಂಡೆಯ ಭೂಮಿಯು ಬೇಕಾದ ಬೆಳೆಯನ್ನು ಕೊಡುವದರಿಂದ ಇದಕ್ಕೆ "ವರದಾ" ಎಂಬ ಹೆಸರು ಬಂದದೆ.

೧೦. **ಧರ್ಮಾ ನದಿ.** — ಇದು ಇಸಳೂರ ಕೆರೆಯಲ್ಲಿ ಹುಟ್ಟಿ, ಪೂರ್ವಕ್ಕೆ ಒಲಿದು, ಹಾನಗಲ್ಲ ತಾಲೂಕನ್ನು ಸೇರಿ, ಮುಂದೆ ವರದಾ ನದಿಗೆ ಕೂಡುತ್ತದೆ.

ಈ ಎಲ್ಲ ನದಿಗಳಲ್ಲಿ **ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ** ಎಂಬ ನಾಲ್ಕೇ ನದಿಗಳು ಮುಖ್ಯವು.

ಈ ಜಿಲ್ಹೆಯಲ್ಲಿ ನದಿಗಳಿಂದ ವ್ಯಾಪಾರಕ್ಕೆ ಆಗುವ ಅನುಕೂಲವೇ ಮಹತ್ವದ್ದು. ಯಾಕಂದರೆ ಇವುಗಳಿಂದ ಸರಕುಗಳನ್ನು ಅಲ್ಪ ಬಾಡಿಗೆಯಲ್ಲಿ

ಸ್ಥಳಾಂತರ ಮಾಡಬಹುದು. ಜಲಮಾರ್ಗದಷ್ಟು ಅಲ್ಪ ಬಾಡಿಗೆಯ ಸಾಧನವು ಬೇರೊಂದು ಇಲ್ಲ. (ಇಲ್ಲಿ ದೇವರ ಜಾಣ್ಮೆಯೂ ಮನುಷ್ಯಪ್ರಾಣಿಯ ಮೇಲೆ ಆತನ ದಯವೂ ಅಪಾರವಾಗಿರುವದೆಂದು ಕಂಡುಬರುವದು. ಹ್ಯಾಗಂದರೆ—ಮಾರ್ಗಗಳನ್ನು ಮಾಡಲಿಕ್ಕೆ ಬಾರದಂಥ ಇಕ್ಕಟ್ಟಿನ ಗುಡ್ಡಗಳಲ್ಲಿ ದೊಡ್ಡ ದೊಡ್ಡ ನದಿಗಳೇ ಮಾರ್ಗಗಳಾಗುವಂತೆ ಸೃಷ್ಟಿಕರ್ತನಿಂದ ಯೋಜನೆಯು ಮಾಡಲ್ಪಟ್ಟಿರುವದು.) ಬಾಡಿಗೆಯ ವೆಚ್ಚದ ಸಂಬಂಧದಿಂದ ರೇಲ್ವೆ ಮಾರ್ಗಕ್ಕೆ ಎರಡನೇ ನಂಬರವನ್ನೂ, ಲೈನಮಾರ್ಗಕ್ಕೆ ಮೂರನೇ ನಂಬರವನ್ನೂ, ಕಾಲದಾರಿಗೆ ನಾಲ್ಕನೇ ನಂಬರವನ್ನೂ ಕೊಡಬಹುದು. ಆದರೆ ಸರಕುಗಳನ್ನು ಒಯ್ಯುವದಕ್ಕೆ ಹತ್ತುವ ಕಾಲದ ಬಗ್ಗೆ ವಿಚಾರಮಾಡಿದರೆ ಲೋಹಮಾರ್ಗ, ಜಲಮಾರ್ಗ, ಕಾಲದಾರಿ, ಹೀಗೆ ಅನುಕ್ರಮವಾಗಬಹುದು.

ನದಿಯಲ್ಲಿ ಡೋಣಿಗಳು ನಡೆಯಬೇಕಾದರೆ ಹೊಳೆಯ ಪಾತ್ರದಲ್ಲಿ 1. ಬಂಡೆಗಳೂ ಉಸುಕಿನ ಗುಡ್ಡಗಳೂ ಇರಲಾಗದು. 2. ನೀರಿನ ಪ್ರವಾಹವು ತೀವ್ರವಾಗಿರದೆ ಸ್ತಿಮಿತವಾಗಿ ಇರಬೇಕು. 3. ಆಳವು ತುಸು (ತಕ್ಕಮಟ್ಟಿಗೆ) ಹೆಚ್ಚಿರಬೇಕು. 4. ಅದು ಆದಷ್ಟು ಸಮನೆಲದಲ್ಲಿ ಹರಿಯಬೇಕು. 5. ಪ್ರವಾಹಕ್ಕೆ ಸಮೀಪವಾಗಿ ವ್ಯಾಪಾರದ ಪಟ್ಟಣಗಳಿರಬೇಕು. 6. ಹೊಳೆಯ ದಂಡೆಯ ಭೂಮಿಯು ಫಲದ್ರೂಪವಾಗಿರಬೇಕು.

ವಿಚಾರಮಾಡಿನೋಡಿದರೆ, ಕಾನಡಾ ಜಿಲ್ಹೆಯ ನದಿಗಳಲ್ಲಿ ಈ ಲಕ್ಷಣಗಳು ಕಡಿಮೆ; ಆದಾಗ್ಯೂ ಮುಖ್ಯವಾದ ನಾಲ್ಕು ನದಿಗಳಲ್ಲಿ ಮುಖದಿಂದ ಸರಾಸರಿ ೧೫-೨೦ ಮೈಲುಗಳ ವರೆಗೆ ಇಂಥ ಅನುಕೂಲತೆಗಳು ಸಾಧಾರಣವಾಗಿ ಅವೆ. ಅವುಗಳಲ್ಲಿ ಅಘನಾಶಿನಿ-ಶರಾವತಿ ನದಿಗಳು ಕ್ರಮವಾಗಿ ಉಪ್ಪಿನ ಪಟ್ಟಣ ಗೆರಸಪ್ಪೆಗಳ ವರೆಗೆ ವ್ಯಾಪಾರದ ಬಗ್ಗೆ ವಿಶೇಷ ಅನುಕೂಲತೆಯನ್ನು ಪಡೆದಿರುವವು. ಒಂದರ ಮೇಲೆ ಉಪ್ಪಿನ ಪಟ್ಟಣ, ಮಣಕೆ, ಕುಮಟಾ, ತದಡಿ, ಸಾಣೇಕಟ್ಟೆ ಇವುಗಳ ಮೇಲಿಂದ ಯಾವಾಗಲೂ ವ್ಯಾಪಾರದ ಡೋಣಿಗಳು ಓಡಾಡುತ್ತವೆ. ಧಾರವಾಡ-ಹುಬ್ಬಳ್ಳಿಗಳ ಕಡೆಯ ಸರಕುಗಳೂ ಯಲ್ಲಾಪುರ-ಸಿರಸಿ ತಾಲೂಕುಗಳ ಸರಕುಗಳೂ ಉಪ್ಪಿನ ಪಟ್ಟಣದ ಮೇಲಿಂದ ಕುಮಟೆಗೆ ಇಲ್ಲವೆ ತದಡಿಗೆ ಕಳುಹಿಸಲ್ಪಡಲಿಕ್ಕೆ ಅಘನಾಶಿನಿ ನದಿಯೇ ಅನುಕೂಲವಾದ ಮಾರ್ಗವಾಗಿರುವದು. ಶರಾವತೀ ನದಿಯ ದಂಡೆಯಲ್ಲಿದ್ದ ಗೆರಸಪ್ಪೆಗೆ, ಸಿದ್ದಾಪುರ ತಾಲೂಕಿನ ಸರಕುಗಳೂ ಮೈಸೂರ ಸೀಮೆಯೊಳಗಿನ

ಸಾಮಾನುಗಳೂ ಬಂದು, ಅಲ್ಲಿಂದ ಹೊನ್ನಾವರಕ್ಕೆ ಬರುವದೇ ಅಲ್ಲಿಯ ವ್ಯಾಪಾರಕ್ಕೆ ಕಾರಣವಾಗಿರುವದು. ಕಾಳೀ ನದಿಯ ಮುಖದಲ್ಲಿ ಕಾರವಾರ ಬಂದರವಿದ್ದು ದಂಡೆಯ ಮೇಲಿರುವ ಕದ್ರಾದಿಂದ ಕಾರವಾರಕ್ಕೆ ಉರುವಲಿನ ಹಾಗೂ ಇಮಾರತಿನ ಕಟ್ಟಿಗೆಗಳು ಜಲಮಾರ್ಗದಿಂದ ಹೋಗುತ್ತವೆ. ಗಂಗಾವಳಿ ನದಿಯಲ್ಲಿಯೂ ಗುಂಡಬಾಳೆಯ ವರೆಗೆ ಡೋಣಿಗಳು ನಡೆಯುತ್ತವೆ. ಹಾಗೂ ಅಲ್ಲಿಂದ ಯಲ್ಲಾಪುರ—ಸಿರಸಿಗಳಿಗೆ ಹೋಗುವ ಲೈನಮಾರ್ಗಗಳು ಅವೆ. ಆದರೆ ಕದ್ರಾ—ಗುಂಡಬಾಳೆಗಳಿಂದ ಮುಂದಿನ ಮಾರ್ಗಗಳು ಹಲ್ಯಾಳ, ಯಲ್ಲಾಪುರಗಳ ಘೋರವಾದ ಅಡವಿಗಳಲ್ಲಿ ಹೋಗಿದ್ದು, ಅಲ್ಲಿಯ ಹುಲಿ, ಕರಡಿ ಮುಂತಾದ ಕಾಡಮೃಗಗಳ ಹಾಗೂ ಕಳ್ಳರ ಭಯದ ಮೂಲಕ ಓಡ್ಯಾಟವು ಕಡಿಮೆ.

ಉಳಿದ ನದಿಗಳು ಸಣ್ಣವಿದ್ದು, ದಂಡೆಯ ಮೇಲೆ ವ್ಯಾಪಾರಕ್ಕೆ ಪ್ರಸಿದ್ಧವಾದ ಪಟ್ಟಣಗಳಿಲ್ಲದ್ದರಿಂದ ಅವುಗಳಲ್ಲಿ ಡೋಣಿಗಳು ನಡೆಯುವದಿಲ್ಲ.

ಇನ್ನು ನದಿಗಳಿಂದ ಕಾಲುವೆಗಳನ್ನು ಅಗಿಸಿ, ವ್ಯಾಪಾರಕ್ಕೂ ಬೆಳೆಗೂ ಅನುಕೂಲಮಾಡಿಕೊಳ್ಳುವದು ಅವುಗಳ ಎರಡನೇ ಉಪಯೋಗವು. ಅಂಥ ಕಾಲುವೆಗಳನ್ನು ಅಗಿಯಲಿಕ್ಕೆ ೧. ನದಿಯು ಸಮನೆಲದ ಬೈಲಿನಲ್ಲಿ ಹರಿಯಬೇಕು. ೨. ಅಗಿಯುವ ವೆಚ್ಚಕ್ಕಿಂತ ಉತ್ಪನ್ನವು ಹೆಚ್ಚಾಗುವಂಥ ವ್ಯಾಪಾರವು ಇಲ್ಲವೆ ಬೆಳೆಯು ಅಲ್ಲಿ ಬರುತ್ತಿರಬೇಕು. ೩. ಅಲ್ಪ ಶ್ರಮದಿಂದ ಸಾಧ್ಯವಾಗಿರಬೇಕು. ೪. ಹನ್ನೆರಡು ತಿಂಗಳೂ ಕಾಲುವೆಗಳಿಗೆ ಪೂರೈಸುವಷ್ಟು ನೀರು ಹರಿಯುತ್ತಿರಬೇಕು. ೫. ಅವುಗಳ ಅವಶ್ಯಕತೆಯು ಮಳೆ ಕಡಿಮೆಯಾಗಿರುವದರಿಂದ ವಿಶೇಷವಾಗಿರಬೇಕು.

ಈ ಸಂಬಂಧದಿಂದ ವಿಚಾರಮಾಡಿದರೆ—ಕಾನಡಾ ಜಿಲ್ಹೆಯು ಪರ್ವತಮಯವು. ಅವುಗಳ ಸಂದುಗಳೊಳಗಿಂಡ ಈ ನದಿಗಳು ಹರಿದು ಬಂದಿರುವವು. ಇಂಥ ನದಿಗಳಿಂದ ಕಾಲುವೆಗಳನ್ನು ತರಬೇಕಾದರೆ ದೊಡ್ಡದೊಡ್ಡ ಗುಡ್ಡಗಳನ್ನು ಕಡಿಸುವದಕ್ಕೆ ವೆಚ್ಚವು ಬಹಳ ಹತ್ತುವದು. ನೀರು ನೆಲದ ಮೇಲೆ ಹರಿಯುವಾಗಲೇ ಇಂಗಿಹೋಗುವದು. ಇದಲ್ಲದೆ ಈ ಜಿಲ್ಹೆಯಲ್ಲಿ ಸಹ್ಯಾದ್ರಿಯೂ ಅದರ ಮೇಲಿನ ಅಡವಿಯೂ ತುಂಬಿರುವದರಿಂದ ಸಾಕಷ್ಟು ಮಳೆಯು ಎಲ್ಲ ಕಡೆಗೆ ಬೀಳುತ್ತದೆ. ಅದರಿಂದ ಉಪಯೋಗವೂ ಕಡಿಮೆ. ಆದಕಾರಣ ಸರಕಾರದವರು ಕಾಲುವೆಯನ್ನು ಕಡಿಸುವ ಹವ್ಯಾಸಕ್ಕೆ ಬೀಳಲಿಲ್ಲ.

**ಕೆರೆಗಳು.**— ಈ ಜಿಲ್ಹೆಯ ಪ್ರಾಕೃತಿಕ ಸ್ವರೂಪದ ಮೇಲಿಂದಲೂ ಮಳೆಯ ಪ್ರಮಾಣದಿಂದಲೂ ಇಲ್ಲಿ ಅನೇಕ ಸರೋವರಗಳೂ ಕೆರೆಗಳೂ ಆಗಲಿಕ್ಕೆ ಸಂಭವವದೆ. ಈ ಕೆರೆಗಳಿಂದ ಎಷ್ಟೋ ಪ್ರವಾಹಗಳು ಹುಟ್ಟಿರುತ್ತವೆ. ಸಣ್ಣ ಸಣ್ಣ ಪ್ರವಾಹಗಳಿಂದ ಎಷ್ಟೋ ತೋಟಗಳನ್ನು ಮಾಡಿರುವರು. ಗುಡ್ಡಗಳ ಮೇಲೆ ನೀರಿನ ಆಶ್ರಯವಿದ್ದು ಬುಡದಲ್ಲಿ ನೀರು ಬಸಿದು ಹರಿಯುತ್ತಿರುವ ಝುರಿಗಳು ಇಲ್ಲಿ ಬಹಳ ಅವೆ. ಹೊನ್ನಾವರದ ರಾಮತೀರ್ಥ, ಧಾರೇಶ್ವರದ ನಾಗತೀರ್ಥಗಳಂತೆ ಎಷ್ಟೋ ಕಡೆಗೆ ಝುರಿಗಳಿದ್ದು ಅವುಗಳಿಂದ ದೊಡ್ಡ ದೊಡ್ಡ ತೋಟಗಳ ರಕ್ಷಣೆಯಾಗುತ್ತದೆ. ಗುಡ್ಡದ ಹೊಟ್ಟೆಯೊಳಗಿಂದ ನಿರ್ಮಲವಾದ ಬಸಿನೀರು ಬರುವದರಿಂದ ಆ ನೀರು ಆರೋಗ್ಯಕರವೂ ಇರುತ್ತದೆ. ಇಂಥ ಕೆರೆಗಳು ಅಡವೀ ಸೀಮೆ, ತೋಟದ ಸೀಮೆಗಳಲ್ಲಿಯೇ ಹೆಚ್ಚು.

ಸಿರಸಿ ತಾಲೂಕಿನಲ್ಲಿ ಗುಡ್ನಾಪುರ, ಮಂಜಗುಣಿ, ಇಸಳೂರು, ಸೋಮ ನಾಗರ, ದೇವೀಕೆರೆಗಳೂ, ಸಿದ್ದಾಪುರ ತಾಲೂಕಿನಲ್ಲಿ ಭುವನಗಿರಿ, ರಾಯರ ಕೆರೆಗಳೂ, ಯಲ್ಲಾಪುರ ತಾಲೂಕಿನಲ್ಲಿ ಕಾವತಿಕೆರೆ, ಚಿಗಳ್ಳಿ, ಸಣ್ಣವಳ್ಳಿ ಇಲ್ಲಿಯ ಕೆರೆಗಳೂ, ಹಲ್ಯಾಳ ತಾಲೂಕಿನಲ್ಲಿ ದೊಡ್ಡಕೆರೆ, ಬುಡಬುಡತಳೆ ಈ ಕೆರೆಗಳೂ ಪ್ರಸಿದ್ಧವುಂಟು.

---

# ೪ನೆಯ ಪ್ರಕರಣ.

## ಹವೆ, ಮಳೆ ಮುಂತಾದವು.

**ಹವೆ.**—ಒಂದು ದಿವಸ ಇಲ್ಲವೆ ವಾರದ ವರೆಗೆ ವಿಶೇಷ ಕಾರಣಗಳಿಂದ ವಾತಾವರಣದಲ್ಲಿ ವ್ಯತ್ಯಾಸವುಂಟಾಗಿ ತೋರುವ ಹವೆಗೂ ಬೇರೆ ಬೇರೆ ಋತುಗಳಲ್ಲಿ ನಿಯಮಿತವಾಗಿ ಇರುವ ಹವೆಗೂ ಕಂಡುಬರುವ ಹೆಚ್ಚು ಕಡಿಮೆಯನ್ನು ಲಕ್ಷ್ಯದಲ್ಲಿಡತಕ್ಕದ್ದು. ಒಂದು ದಿವಸ ಹವೆಯು ಬಹಳ ಶಕೆಯುಳ್ಳದ್ದಿರಬಹುದು; ಮತ್ತೊಂದು ದಿನ ಬಹಳ ತಂಪಾದದ್ದಿರಬಹುದು. ಆದರೂ ಆ ಋತುವಿನ ಹವೆಯು ಇದ್ದಂತೆಯೇ ಇರುವದು. ಯಾವದೊಂದು ಪ್ರದೇಶದ ಹವೆಯ ಬಗ್ಗೆ ನಾಲ್ಕು ಸಂಗತಿಗಳನ್ನು ನೆನಪಿನಲ್ಲಿಡತಕ್ಕದ್ದು. ಅವು ಯಾವವೆಂದರೆ—೧. ಹವೆಯ ಉಷ್ಣತೆ ಅಥವಾ ಶೈತ್ಯ. ೨. ಆರ್ದ್ರತೆ (ತೇವು) ಅಥವಾ ಅನಾರ್ದ್ರತೆ. ೩. ಮಳೆ. ೪. ಬಹಳ ದಿವಸ ಬೀಸುವ ಗಾಳಿಯ ದಿಕ್ಕುಗಳು.

ಇವೆಲ್ಲ ಸಂಗತಿಗಳು ಭೂಮಿಯ ಸ್ವರೂಪ ಅಂದರೆ ಭೂಮಿಯ ಮೇಲಿರುವ ಗುಡ್ಡ, ಪರ್ವತ, ಬೈಲು, ಸಮುದ್ರಸಾಮಿಪ್ಯ, ಗುಡ್ಡಗಳ ಸಾಲುಗಳು ಹಬ್ಬಿರುವ ದಿಕ್ಕುಗಳು, ಇವೇ ಮೊದಲಾದ ಸಂಗತಿಗಳನ್ನು ಅವಲಂಬಿಸಿರುತ್ತವೆ.

ಹಿಂದೆ ೨ನೇ ಪ್ರಕರಣದಲ್ಲಿ ಹೇಳಿದಂತೆ ಕಾನಡಾ ಜಿಲ್ಹೆಯ ಪ್ರಾಕೃತಿಕ ಸ್ವರೂಪದಲ್ಲಿ ನಾಲ್ಕು ಪ್ರಕಾರಗಳಿರುವಂತೆ ಹವೆಯಲ್ಲಿಯೂ ನಾಲ್ಕು ತರಗಳುಂಟು.

೧. ಕರಾವಳಿ ಸೀಮೆಯಲ್ಲಿ ಹವೆಯು ಆರೋಗ್ಯಕರವು. ಇಲ್ಲಿ ಅಡವಿಗಳು ಬೆಳೆಯುವದಿಲ್ಲ. ಗುಡ್ಡಗಳೂ ಕಡಿಮೆ. ವಿಸ್ತಾರವಾದ ಸಮುದ್ರವು ಪಶ್ಚಿಮ ಮೇರೆಯನ್ನು ಒಳಗೊಂಡಿದೆ. ಬಿಸಿಲು ಅತಿಶಯ ಕಾಯುವದರಿಂದ ಹವೆಯೂ ನೆಲವೂ ಕಾಯುತ್ತವೆ. ಸಹ್ಯಾದ್ರಿಯ (ಸರಾಸರಿ) ೨೦೦೦ ಫೂಟು ಎತ್ತರವಾದ ತಪ್ಪಲು ದಕ್ಷಿಣೋತ್ತರವಾಗಿ ಕೋಟೆಯ ಗೋಡೆಯಂತೆ ಹಬ್ಬಿರುವದರಿಂದ ಚಳಿಗಾಲದ ಮೂಡಗಾಳಿಗೆ ಪ್ರತಿಬಂಧವಾಗುತ್ತದೆ. ಆದಕಾರಣ ಇಲ್ಲಿ ನಿರ್ದೋಷವಾದ ಹವೆಯು ಇರುವದು. ಮಿಕ್ಕ ಪ್ರದೇಶಗಳಿಗಿಂತ ಶೀತವು ಕಡಿಮೆ. ಹವೆಯಲ್ಲಿ ಆರ್ದ್ರತೆಯುಂಟು. ಆದರೂ ಹವೆಯೊಳಗಿನ ಶಕೆಯು ಮನುಷ್ಯಶರೀರದ ಶಕೆ (೯೮°) ಗಿಂತ ಬಹಳ ಕಡಿಮೆಯಾಗುವದಿಲ್ಲ.

ಬೇಸಿಗೆಯಲ್ಲಿ ಸಮುದ್ರದ (ಉಪ್ಪು ನೀರಿನ) ಮೇಲಿನ ಹವೆಯಿಂದಲೂ, ಬಿಸಿಲಿನ ತಾಪದಿಂದಲೂ ಶಕೆಯು ಬಹಳ ಆಗುವದು. ಆದಾಗ್ಯೂ ರೋಗಕಾರಕವಲ್ಲ. ಅಜೀರ್ಣಾದಿ ಬಾಧೆಗಳಿಲ್ಲ. ಒಟ್ಟಿನ ಮೇಲೆ ಕಾನಡಾ ಜಿಲ್ಹೆಯ ಆರೋಗ್ಯ ಭಾಗ್ಯವು ಇಲ್ಲೇ ಇರುವದು.

೨. ಕುಚ್ಚೇನಾಡ ಸೀಮೆಯಲ್ಲಿ ಹವೆಯು ರೋಗಕರವು. ಇದು ಕ್ರಮೇಣ ಏರುತ್ತ ೧೦೦೦ ಫೂಟುಗಳ ವರೆಗೆ ಎತ್ತರ ಇರುವದು. ಅಲ್ಲಲ್ಲಿ ಸಣ್ಣ ಸಣ್ಣ ಅಡವಿಗಳೂ ಅವೆ. ಭೂಮಿಯು ಪೂರ್ವಕ್ಕೆ ಏರುತ್ತ ಹೋಗಿದೆ. ಮಳೆಯ ನೀರು ನಿಲ್ಲದೆ ಪಶ್ಚಿಮಕ್ಕೆ ಹರಿಯುತ್ತದೆ. ಅದು ಆ ಅಡವಿಯಿಂದಲೇ ಹರಿದು ಬರುತ್ತಿದ್ದು, ಗಿಡಗಳ ಎಲೆ ಬೇರುಗಳಿಂದ ಕೊಳೆತು ತಾನು ಕೆಡುವ ದಲ್ಲದೆ ಹವೆಯನ್ನೂ ಕೆಡಿಸುತ್ತದೆ. ಇದಲ್ಲದೆ ಕುಡಿಯಲಿಕ್ಕೆ ಅದೇ ನೀರನ್ನು ಉಪಯೋಗಿಸಬೇಕಾಗುತ್ತದೆ. ಹವೆಯಾಡಲಿಕ್ಕೂ ಅಡವಿಯಿಂದ ಪ್ರತಿಬಂಧ ವಾಗುತ್ತದೆ. ಎತ್ತರಕ್ಕೆ ಹೋದಂತೆ ಹವೆಯ ಉಷ್ಣಮಾನವು ಕಡಿಮೆಯಾಗು ವದೆಂಬದು ಪ್ರಸಿದ್ಧವು. ಆದಕಾರಣ ಬಹುತರ ಇಲ್ಲಿಯ ಹವೆಯಲ್ಲಿ ಆರ್ದ್ರ ತೆಯು ಕಡಿಮೆ ಇದ್ದು ತಂಪು ಬಹಳ ಇರುವದು. ಒಟ್ಟಿಗೆ ಹವೆಯು ರೋಗ ಕಾರಕ. ಬೇಸಿಗೆ ಮಳೆಗಾಲಗಳಲ್ಲಿ ಸಾಧಾರಣ ಹಿತಕರ; ಆದರೆ ಚಳಿಗಾಲ ದಲ್ಲಿ ರೋಗಗಳು ಬಹಳ.

೩. ಅಡವೀಸೀಮೆಯು ಬಹು ರೋಗಕರವು. ಇದು ಕಾನಡಾ ಜಿಲ್ಹೆಯ ಎತ್ತರ ಪ್ರದೇಶವು. ಸರಾಸರಿ ೨ᵢ ಸಾವಿರ ಫೂಟು ಎತ್ತರವದೆ. ಅಡವಿಯೂ ದಟ್ಟಾಗಿ ಬೆಳೆದದೆ. ಎಷ್ಟೋ ಕಡೆಗೆ ಸೂರ್ಯಕಿರಣಗಳು ಕಾಣದ ದಿವಸ ಗಳೇ ಹೆಚ್ಚು. ಮಧ್ಯಾಹ್ನದಲ್ಲಿ ಮಾತ್ರ ಹಗಲೆಂಬ ತಿಳುವಳಿಕೆಯಾಗುತ್ತದೆ. ಅಂದ ಮೇಲೆ ಹವೆಯು ಕಾಯುವದು ಹೇಗೆ? ಅದು ಕಾಯದೆ ಗಾಳಿಗಳು ಹುಟ್ಟುವ ಬಗೆ ಏನು? ಹವೆಯು ಅತಿ ಶೀತ; ರೋಗಕಾರಕವಾಗಿರುತ್ತದೆ. ಮಲೇರಿಯವು ಎಲ್ಲ ಕಡೆಗೂ ತುಂಬಿರುತ್ತದೆ. ವರ್ಷಕ್ಕೆ ಬೇಸಿಗೆಯಲ್ಲಿ ಮಾತ್ರ ಸಾಧಾರಣ ಸುಖವು. ಆದರೂ ಅದು ಚಳಿಗಾಲದಲ್ಲಿ ಉದ್ಭವವಾದ ರೋಗ ಗಳನ್ನು ನಿವಾರಿಸಿಕೊಳ್ಳಲಿಕ್ಕೆ ವಿಶ್ರಾಂತಿಯಂತೆ ಇರುತ್ತದೆ. ಎಂಟು ತಿಂಗಳು ಚಳಿಯ ಬಾಧೆ ಬಹಳ; ಹಗಲು ಪ್ರತಿಯೊಂದು ಮನೆಯಲ್ಲಿ ಹಾಸಿಗೆಯನ್ನು ಕಾಣದ ದಿವಸಗಳು ಅಪರೂಪ. ಕರಾವಳಿಸೀಮೆಯ ಚಳಿಗಾಲವೂ ಇಲ್ಲಿಯ ಬೇಸಿಗೆಯೂ ಸಮ. ಆದರೂ ಚಳಿಗಾಲದಲ್ಲಿ ಜ್ವರವೂ ಬೇಸಿಗೆಯಲ್ಲಿ ಮಾರೀ

ಬೇನೆಯೂ ತಪ್ಪದೆ ಬರುವವು. ಒಟ್ಟಿನ ಮೇಲೆ ಇಲ್ಲಿಯ ಹವೆಯು ರೋಗದ ತವರ್ಮನೆಯು. ಸುಪಾ ಎಲ್ಲಾಪುರ* ತಾಲೂಕುಗಳ ಅಡವಿಗಳಲ್ಲಿರುವ ಬಿದಿರಿನ ಗಡ್ಡೆಯಿಂದ ಬರುವ ನೀರಿನಿಂದ ಜ್ವರದ ಗಡ್ಡೆಯಾಗುವದು ಪ್ರಸಿದ್ಧವು. ಹಲ್ಯಾಳ, ಸಿರಸಿ ಭಾಗವು ಮಧ್ಯಮವಾಗಿದೆ. ಸಿದ್ದಾಪುರ ತಾಲೂಕು ಕುಚ್ಚೇನಾಡು ಅಡವೀಸೀಮೆಗಳ ಮಧ್ಯವರ್ತಿಯಂತೆ ಇರುವದರಿಂದ ಸಮಶೀತೋಷ್ಣ ಪ್ರದೇಶದಲ್ಲಿ ಎಣಿಸಲ್ಪಡುತ್ತದೆ.

೪. ತೋಟದ ಸೀಮೆಯು ಸಹ ರೋಗಕರವೇ. ಇದು ಸಣ್ಣಸಣ್ಣ ಗುಡ್ಡಗಳಿಂದ ತುಂಬಿದೆ. ಇದು ಬೈಲಸೀಮೆಗೆ ಹತ್ತಿರುವದರಿಂದಲೂ ಅಡವಿಗಳು ಸ್ವಲ್ಪ ಕಡಿಮೆ ಇರುವದರಿಂದಲೂ ಇಲ್ಲಿಯ ಹವೆಯು ಅಡವೀಸೀಮೆಯಷ್ಟು ಕೆಟ್ಟದಲ್ಲ. ತಕ್ಕಮಟ್ಟಿಗೆ ಹವೆಯು ನೆಟ್ಟಗಿರುವದು. ಆದಾಗ್ಯೂ ಸರಾಸರಿ ೨೦೦೦ ಫೂಟು ಎತ್ತರಡ ತಪ್ಪಲಾಗಿರುವ ಕಾರಣ ಹವೆಯಲ್ಲಿ ಶೈತ್ಯವು ಬಹಳ. ಚಳಿಗಾಲದ ಗಾಳಿಗೆ ಪ್ರತಿಬಂಧವಿಲ್ಲದ್ದರಿಂದ ಶೀತದ ಬಾಧೆಯು ಬಹಳ. ಅಡವೀಸೀಮೆಯಿಂದ ಹರಿದುಬರುವ ಹಳ್ಳಗಳ ನೀರಿನಿಂದಲೂ ಮಳೆಗಾಲದಲ್ಲಿ ತುಂಬಿದ ಕೆರೆಗಳಿಂದಲೂ ಕುಡಿಯಲಿಕ್ಕೆ ನೀರು ಒಯ್ಯುವರು. ಈ ನೀರಿನಲ್ಲಿ ರೋಗಜಂತುಗಳು ತುಂಬಿರುತ್ತವೆ. ಅಂತೂ ಇಲ್ಲಿಯ ಹವೆಯೂ ರೋಗಕಾರಕವೇ ಸರಿ. ಆದರೆ ಅಡವೀಸೀಮೆಗಿಂತ ಕಡಿಮೆ.

**ಅಡವಿಗಳು.** — ಈ ಜಿಲ್ಹೆಯ ಹವೆ ಮಳೆಗಳಿಗೆ ಮೂಲಾಧಾರವಾದ ಅಡವಿಗಳ ಸಲುವಾಗಿ ಮೊದಲು ವಿಚಾರಮಾಡಬೇಕಾಗಿದೆ. ಇಲ್ಲಿ ವ್ಯಾಪಿಸಿರುವ ರೋಗಕಾರಕವಾದ ಹವೆಗೆ ಈ ಜಿಲ್ಹೆಯ ಅಡವಿಗಳೇ ಮೂಲ ಕಾರಣ. ಸಹಸ್ರಾವಧಿ ವರ್ಷಗಳ ಮುಂಚೆ ಕಾನಡಾ ಜಿಲ್ಹೆಯ ಮಧ್ಯಭಾಗದಲ್ಲಿ ಹಬ್ಬಿದ ಸಹ್ಯಾದ್ರಿಪರ್ವತಾವಳಿಯೂ, ಕುಚ್ಚೇನಾಡೂ, ತೋಟದ ಸೀಮೆಯೂ ಈಗಿನಷ್ಟು ಅಡವಿಗಳಿಂದ ವ್ಯಾಪ್ತವಾಗಿರಲಿಕ್ಕಿಲ್ಲ. ಅದರಂತೆ ಪೂರ್ವದ ಬೈಲುಸೀಮೆಯೂ ಒಮ್ಮೆಲೆ ಸಿದ್ಧವಾಗಿರಲಿಕ್ಕಿಲ್ಲ. ಆದರೆ ಉನ್ನತವಾದ ಪ್ರದೇಶವು ಮೋಡಗಳನ್ನು ಹೆಚ್ಚಾಗಿ ಆಕರ್ಷಿಸುವ ಮೂಲಕ ಈ ಪರ್ವತದ ಮೇಲೆ ಉಳಿದ ಭಾಗಗಳಿಗಿಂತ ಮಳೆಯು ಹೆಚ್ಚು ಬಿದ್ದು ಅಲ್ಲಿರುವ ಸಣ್ಣಸಣ್ಣ ಗಿಡಗಳಿಗೆ ಸಂತುಷ್ಟಿಯಾಗಿ ಅವು ಭರದಿಂದ ಬೆಳೆಯುತ್ತವೆ. ಊರೊಳಗಿನ ಗಿಡ

---

* ಎಲ್ಲಾಪುರವೆಂದರೆ:—ಎಲ್ಲ=ಘಟ್ಟದ ಮೇಲಿನ ಎಲ್ಲ ಕೆಟ್ಟ ಹವೆಗಳ, ಪುರ=ಪಟ್ಟಣವು ಎಂದು ವಿನೋದಪರವಾಗಿ ಅರ್ಥವನ್ನು ಮಾಡಬಹುದು.

ಗಳಿಗಿಂತ ಅಡವಿಯೊಳಗಿನ ಗಿಡಗಳಿಗೆ ನೀರು ವಿಪುಲವಾಗಿ ಸಿಗುವದರಿಂದಲೂ ಜನರ ಉಪದ್ರವವಿಲ್ಲದ್ದರಿಂದಲೂ ಸ್ವೇಚ್ಛೆಯಾಗಿ ಗಡುತರವೂ ಗಗನಚುಂಬಿಗಳೂ ಆಗಿ ಬೆಳೆಯುವವು. ಕ್ರಮೇಣ ಆ ಗಿಡಗಳ ಎಲೆಗಳೇ ಚಳಿಗಾಲದಲ್ಲಿ ಉದುರಿ, ಬೇಸಿಗೆಯಲ್ಲಿ ಸುಟ್ಟು, ಮಳೆಗಾಲದಲ್ಲಿ ಕೊಳೆತು ಗೊಬ್ಬರವಾಗಲು ಮತ್ತಿಷ್ಟು ಪುಷ್ಟವಾಗುತ್ತವೆ. ಈ ಪ್ರಕಾರ ವರ್ಷಕ್ಕೆ ಮೂರು ನಾಲ್ಕು ತಿಂಗಳು ಯಥೇಚ್ಛವಾಗಿ ತಿಂದ ಆಹಾರವನ್ನು ಎಂಟು ತಿಂಗಳು ಮೆಲಕಾಡಿಸುತ್ತ ಬೆಳೆಯುವವು. ಈ ಅಡವಿಗಳಲ್ಲಿ ಹುಲಿ, ಕರಡಿ, ಹಂದಿ, ಚಿರ್ಚ, ತೋಳ ಮೊದಲಾದ ಹಿಂಸ್ರ ಪಶುಗಳೂ, ನಾನಾ ಜಾತಿಯ ಹಾವುಗಳೂ, ಆನೆ ಮುಂತಾದವುಗಳೂ ವಾಸಮಾಡಿಕೊಂಡು ಇದ್ದು, ಅಡವೀಸೀಮೆ-ಕುಚ್ಚೇನಾಡುಗಳ ಜನರಿಗೂ ದನಕರುಗಳಿಗೂ ತಾಪವನ್ನು ಕೊಡುವವು.

ಮನುಷ್ಯನ ನಿತ್ಯದ ನಿರ್ವಾಹಕ್ಕೆ ಬೇಕಾಗುವ ಉರವಲದ ಕಟ್ಟಿಗೆಯೂ ಅವನ ವಾಸಕ್ಕೆ ಅವಶ್ಯವಾದ ಮನೆಯನ್ನು ಕಟ್ಟಲಿಕ್ಕೆ ಬೇಕಾಗುವ ಇಮಾರತಿಯ ಕಟ್ಟಿಗೆಗಳೂ ಈ ಅಡವಿಗಳಿಂದಲೇ ದೊರೆಯುವವು. ತೀರ ಬಡವರಿಗೆ ಸಹ ಗುಡಿಸಲು ಹಾಕಿಕೊಳ್ಳುವದಕ್ಕೆ ಅವಶ್ಯವಾದ ಡವಿಗೆ, ಬಿದರು, ಸೀಬುಗಳೂ ಇಲ್ಲೇ ಹುಟ್ಟುವವು. ಅರಸರಿಗೂ ಶ್ರೀಮಂತರಿಗೂ ಬೇಕಾಗುವ ಮತ್ತಿ, ತೇಗು, ಹೊನ್ನಿ, ಶ್ರೀಗಂಧ, ಬರಣಿಗೆ, ಸಿಸುವೆ, ಹುನ್ನಾಲ, ದಿಂಡಲ, ಹೆತ್ತಿ, ಜಂಭಾ, ಕರೀಕಮ್ಮರ ಮೊದಲಾದ ವೃಕ್ಷಗಳು ಗಗನಚುಂಬಿಗಳಾಗಿ ಬೆಳೆದಿರುತ್ತವೆ. ಇಲ್ಲಿಯ ಅಡವಿಯ ಮರಗಳಿಂದ ಜೇನುತುಪ್ಪ, ಮೇಣ, ಕಾಚು, ಅಳಿಲೇಕಾಯಿ, ಸೀಗೀಕಾಯಿ ಮೊದಲಾದವು ಸಹ ವಿಪುಲವಾಗಿ ದೊರೆಯುವವು. ಇವೆಲ್ಲವುಗಳ ಉಪಯೋಗವು ಈ ಜಿಲ್ಹೆಗೆ ಮಾತ್ರವಲ್ಲದೆ ಧಾರವಾಡ, ವಿಜಾಪುರ ಮುಂತಾದ ಅನೇಕ ಜಿಲ್ಹೆಗಳಿಗೂ ಆಗುತ್ತದೆ. ಇನ್ನೂ ಹೆಚ್ಚಿಗೆ ವಿಚಾರಮಾಡಿ ನೋಡಿದರೆ ಅರಣ್ಯದೊಳಗೆ ಸೊಕ್ಕಿ ಬೆಳೆದ ವೃಕ್ಷಗಳ ಆಕರ್ಷಣದಿಂದ ಬೀಳುವ ಮಳೆಯ ನೀರಿನಿಂದ ಹುಟ್ಟಿದ ಹಳ್ಳಹೊಳೆಗಳು ಗಿಡಗಳ ಬುಡದಲ್ಲಿ ಸಂಗ್ರಹವಾಗಿರುವ ಎಲೆಗಳನ್ನೂ ಬೇರುಗಳನ್ನೂ ಕೊಳಿಸಿ, ಸಿದ್ಧವಾದ ಗೊಬ್ಬರವನ್ನು ಪ್ರವಾಹದ ಕೂಡ ಎಳಕೊಂಡು ಹೋಗಿ, ಫಲದ್ರೂಪವಾದ ಭೂಮಿಯನ್ನುಂಟುಮಾಡುವವು. ಕರಾವಳಿ ಸೀಮೆಯಲ್ಲಿ ಹರಿದ ಕಾಳಿ, ಅಘನಾಶಿನಿ, ಶರಾವತಿ ಮುಂತಾದ ಹೊಳೆಗಳ ದಂಡೆಯಲ್ಲಿ ಕೆಲವು ಸಣ್ಣ ಕರೇ-ಮಣ್ಣಿನ ಗಝುನಿ ಗದ್ದೆಯಲ್ಲಿ ಉತ್ತಮ ಬೆಳೆಯು ಬರುವದು.

ಇನ್ನು ಅಡವೀ ಮೃಗಗಳ ಬಾಧೆಯನ್ನು ತಪ್ಪಿಸುವದಕ್ಕೆ ಇತ್ತಲಾಗೆ ಸರಕಾರದವರು ಮಾರ್ಗಗಳ ಬದಿಯಲ್ಲಿ ಕೆಲವು ಅಂತರದ ವರೆಗೆ ಗಿಡಗಳನ್ನು ಕಡಿಸಿರುವರು. ಮತ್ತು ಈ ಜಿಲ್ಲೆಯ ಕಲೆಕ್ಟರ, ಅಸಿಸ್ಟಂಟ ಕಲೆಕ್ಟರ, ಪೊಲೀಸ ಸುಪರಿಂಟೆಂಡೆಂಟ ಮುಂತಾದ ಅಧಿಕಾರಸ್ಥರು ಬೇಟೆಯಾಡಿ ಹಿಂಸ್ರಪಶುಗಳ ಬಾಧೆಯನ್ನು ಕೆಲವು ಮಟ್ಟಿಗೆ ಕಡಿಮೆ ಮಾಡುವರು. ಕತ್ತಗ, ಹಾವು, ಹುಲಿಗಳನ್ನು ಕೊಂದವರಿಗೆ ಇನಾಮುಗಳನ್ನು ಇಟ್ಟಿರುವರು. ಕತಗಾಲು, ಸೂಳಗೇರಿ, ಕದ್ರಾ, ಯಲ್ಲಾಪುರ, ಸಾಂತಗಲ್ ಮುಂತಾದ ಠಾಣ್ಯಗಳಲ್ಲಿ ಶಿಕಾರಿ ಆಡುವದು ಬಹಳ.

ಒಟ್ಟಿನ ಮೇಲೆ ಸ್ವಾರ್ಥತ್ಯಾಗಿಗಳಾದ ಪರೋಪಕಾರಿಗಳಂತೆ ಶೋಭಿಸುವ ಈ ಜಿಲ್ಲೆಯ ಅಡವಿಗಳ ಒಟ್ಟು ಕ್ಷೇತ್ರವು ಕಾನಡಾ ಜಿಲ್ಲೆಯ ಕ್ಷೇತ್ರದಲ್ಲಿ ನೂರಕ್ಕೆ ಎಂಬತ್ತರಂತೆ ಇರುತ್ತದೆ.

ಮಳೆ.—ಕಾನಡಾ ಜಿಲ್ಲೆಯ ಹವೆಯು ಕೆಟ್ಟದೆಂದು ಎಷ್ಟೋ ಜನರು ಅದನ್ನು ತಿರಸ್ಕರಿಸಿದಾಗ್ಯೂ ಅಲ್ಲಿ ಬೀಳುವ ಮಳೆಯನ್ನು ಕಂಡು ತಲೆದೂಗದೆ ಇರಲಾರರು. ಇದರ ಕಾರಣವು ಈ ಜಿಲ್ಲೆಯ ಪ್ರಾಕೃತಿಕ ಸ್ವರೂಪವೇ ಸರಿ; ಅಂದರೆ ಸಹ್ಯಪರ್ವತವೂ ಅದರ ಮೇಲಿನ ಅಡವಿಗಳೂ ಮೂಲಕಾರಣವೆಂದು ಒಡೆದು ಹೇಳುವ ಕಾರಣವಿಲ್ಲ.

ಸಮುದ್ರ ಮುಂತಾದ ಜಲಾಶಯಗಳ ನೀರು ಕಾದು ಉಗಿಯಾದನಂತರ ಹಗುರಿರುವದರಿಂದ ನಿಲ್ಲದೆ ಆಕಾಶದ ಕಡೆಗೆ ಹೋಗುವದು. ಅಲ್ಲಿ ತಂಪು ತಗಲಿ ಮೋಡಗಳಾಗಿ ಅಂತರಿಕ್ಷದಲ್ಲಿ ಸಂಚರಿಸುತ್ತಿರುವದು. ಅಲ್ಲಿ ತಂಪು ಗಾಳಿಯು ತಗಲಿದ ಕೂಡಲೆ ನೀರಾಗಿ ಮಳೆಯ ರೂಪದಿಂದ ಪುನಃ ಭೂಮಿಯ ಮೇಲೆ ಬೀಳುವದು. ಈ ತಂಪುಗಾಳಿಗೆ ಮನ್ಸೂನ (ಮಳೆ) ಗಾಳಿಗಳೆನ್ನುವರು. ಇದು ಹೆಚ್ಚಾಗಿ ಸಮುದ್ರದ ದಿಕ್ಕಿನಿಂದ (ನೈಋುತ್ಯದಿಂದ) ಬೀಸುವದು. ದಕ್ಷಿಣ ಹಿಂದುಸ್ಥಾನದ ಪೂರ್ವ ಪಶ್ಚಿಮ ಬದಿಗೆ ಎರಡು ಸಮುದ್ರಗಳು ಇರುವವು. ಒಂದು ಪಶ್ಚಿಮಕ್ಕಿರುವ ಅರಬಿ ಸಮುದ್ರವು. ಮತ್ತೊಂದು ಪೂರ್ವಕ್ಕೆ ಅತಿ ದೂರದಲ್ಲಿರುವ ಬಂಗಾಲ ಉಪಸಾಗರವು. ಇವುಗಳ ನೀರು ಉಗಿಯಾಗಿ ಉಂಟಾದ ಮೋಡಗಳಿಗೆ ನೈಋುತ್ಯದಿಂದಲೂ ಈಶಾನ್ಯದಿಂದಲೂ ಬೀಸುವ ಮನ್ಸೂನ ಗಾಳಿಗಳು ತಗಲಿ ಮಳೆಯು ಸುರಿಯುವದು. ನೈಋುತ್ಯ ಗಾಳಿಯು ಜೂನದಲ್ಲಿ ಏಳನೇ ಅಥವಾ ಎಂಟನೇ ತಾರೀಖಿನ ದಿವಸ ಪ್ರಾರಂಭವಾಗು

ವದು. ಈ ಜಿಲ್ಲೆಗೆ ಈ ಮಳೆಯೇ ಮಹತ್ವದ್ದು. ಇದು ಸಪ್ತಂಬರದ ವರೆಗೆ ಮೂರು, ನಾಲ್ಕು ತಿಂಗಳು ಬಹಳ ಸುರಿಯುವದು. ಅನಂತರ ಅಕ್ಟೋಬರ ತಿಂಗಳಲ್ಲಿ ಈಶಾನ್ಯ ಗಾಳಿಯು ಬೀಸಹತ್ತಿ, ಬಂಗಾಲ ಉಪಸಾಗರದ ಮೋಡಗಳಿಂದ ಪುನಃ ಮಳೆಯು ಪ್ರಾರಂಭವಾಗುವದು. ಆದರೆ ಅದು ಇಲ್ಲಿಂದ ಬಹಳ ದೂರವಾಗುವ ಕಾರಣ ಅದರ ಮಹತ್ವವು ಕಡಿಮೆ. ಅದು ಒಂದು ಒಂದುವರೆ ತಿಂಗಳು ಬೀಳುವದು; ತೋಟದ ಸೀಮೆಯ ಕಡೆಗೆ ಹೆಚ್ಚು ಬೀಳುವದು. ಅಲ್ಲಿ ಅದರ ಉಪಯೋಗವೂ ಹೆಚ್ಚುಂಟು.

ಈ ಪ್ರಕಾರ ಕಾನಡಾ ಜಿಲ್ಹೆಯಲ್ಲಿ ಮಳೆ ಬರುವ ಕಾಲಗಳು ಎರಡು. ಜೂನ ತಿಂಗಳಲ್ಲಿ ಬರುವ ಮಳೆಗೆ *ಮುಂಗಾರೀ (ಮುನ್+ಕಾರು) ಮಳೆಯೆಂತಲೂ ಅಕ್ಟೋಬರದ ಮಳೆಗೆ *ಹಿಂಗಾರೀ ಮಳೆಯೆಂತಲೂ ಅನ್ನುವರು. ಹಿಂಗಾರೀ ಮಳೆಯು ನಿಯಮಿತವಾದದ್ದಲ್ಲ. ಮುಂಗಾರೀ ಮಳೆಯು ನಿಯಮಿತವಾಗಿ ಸುರಿಯುವದು. ಇದರಿಂದ ಬತ್ತದ ಅಗಿಗಳು ತಯಾರಾಗುವವು; ಹೊಳೆಹಳ್ಳಗಳು ತುಂಬುವವು; ಬತ್ತದ ಬೆಳೆಯು ಫಲಿಸುವದು; ಒಕ್ಕಲಿಗರು ಸಂತುಷ್ಟರಾಗುವರು. ಅಂತು ಅದು ಈ ಜಿಲ್ಹೆಗೆ ಬಹು ಪ್ರಯೋಜನಕರವಾಗಿದೆ. ಹಿಂಗಾರೀ ಮಳೆಯಿಂದ ತೋಟದ ಸೀಮೆಯಲ್ಲಿ ಕಡಲೆ, ಹುರುಳಿ, ಔಡ್ಲ, ನವಣೆ ಮುಂತಾದವುಗಳೂ ಕರಾವಳಿಯಲ್ಲಿ ಉದ್ದು, ಹೆಸರು, ಎಳ್ಳುಗಳೂ ಬೆಳೆಯುವವು. ತೆಂಗಿನ ಬೆಳೆಗೂ ಹಿಂಗಾರೀ ಮಳೆಯು ಒಳ್ಳೆಯದು. ಕೆರೆ, ಬಾವಿಗಳು ತುಂಬಿ ಎಲೆ, ಬಾಳೆಗಳಿಗೆ ಹಿತವಾಗುವದು.

ಒಟ್ಟಿನ ಮೇಲೆ ಈ ಜಿಲ್ಹೆಯಲ್ಲಿ ಮಳೆಯು ಬಹಳ ಬೀಳುತ್ತದೆ. ಅಂದರೆ ಹಿಂದುಸ್ಥಾನದಲ್ಲಿ ಆಸಾಮ-ಹಿಮಾಲಯಗಳ ಇಳುಕಲಿನ ಹೊರತಾಗಿ ಮತ್ತೆಲ್ಲಿಯೂ ಇಷ್ಟು ಮಳೆಯು ಬೀಳುವದಿಲ್ಲ. ಈ ಜಿಲ್ಹೆಯಲ್ಲಿ ಬೀಳುವ ಮಳೆಯ ಸರಾಸರಿ ಪ್ರಮಾಣವು ೧೨೫ ರಿಂದ ೧೫೦ ಇಂಚುಗಳ ವರೆಗೆ ಇರುವದು. ಆದಾಗ್ಯೂ ಅಡವೀ ಸೀಮೆಯ ಮಳೆಯ ಸರಾಸರಿಯು ೧೦೦ ಇಂಚುಗಳಿಗಿಂತ ಕಡಿಮೆ ಆಗುವದಿಲ್ಲ. ಕ್ಯಾಸಲರಾಕದಲ್ಲಿ ವರ್ಷಕ್ಕೆ ೨೫೦ ಇಂಚು ಮಳೆಯಾಗುವದು. ಕರಾವಳೀ ಪ್ರಾಂತದ್ದು ೧೨೫ ಇಂಚಿನೊಳಗೆ ಸರಿ. ತೋಟದ ಸೀಮೆಯದು ಎಂಬತ್ತು, ತೊಂಬತ್ತು ಇಂಚು ಇರುವದು.

---

*ಮುಂಗಾರೀ ಮಳೆಗೆ ಮೃಗಪಂಚಕವೆಂತಲೂ ಹಿಂಗಾರೀ ಮಳೆಗೆ ಮಘಾಪಂಚಕವೆಂತಲೂ ಅನ್ನುವರು.

ಈ ಜಿಲ್ಲೆಯ ಬೇರೆ ಬೇರೆ ಪಟ್ಟಣಗಳ ಮಳೆಯ ಪ್ರಮಾಣವು ಇಂಚುಗಳ ರೂಪದಿಂದ ಕೆಳಗೆ ಕೊಟ್ಟದೆ.

| ಪಟ್ಟಣಗಳು | ಮಳೆಯ ಇಂಚುಗಳು | ಪಟ್ಟಣಗಳು | ಮಳೆಯ ಇಂಚುಗಳು |
|---|---|---|---|
| ಕಾರವಾರ | ೧೧೬* | ಸಿರಸಿ | ೮೩ |
| ಅಂಕೋಲಾ | ೯೬ | ಯಲ್ಲಾಪುರ | ೯೦ |
| ಕುಮಟಾ | ೧೩೮ | ಮುಂಡಗೋಡ | ೯೨ |
| ಹೊನ್ನಾವರ | ೧೪೦ | ಹಲ್ಯಾಳ | ೪೭ |
| ಭಟಕಳ | ೧೩೮ | ಸುಪಾ | ೮೯ |
| ಸಿದ್ದಾಪುರ | ೯೫ | | |

ಒಂದು ಇಂಚು ಮಳೆಯೆಂದರೆ ಒಂದು ಪ್ರದೇಶದಲ್ಲಿ ಬಿದ್ದ ನೀರು ಭೂಮಿಯಲ್ಲಿ ಇಂಗದೆ, ಉಗಿಯಾಗದೆ, ಬೇರೆ ಕಡೆಗೆ ಹರಿದು ಹೋಗದೆ ಇದ್ದರೆ ಅದು ೧ ಇಂಚು ಎತ್ತರವಾಗಿ ಆ ಪ್ರದೇಶದ ಭೂಮಿಯಲ್ಲಿ ಸವನಾಗಿ ನಿಲ್ಲುವದೆಂಬ ಅರ್ಥವು. ಜುಲೈ ತಿಂಗಳಲ್ಲಿ ಎಲ್ಲಕ್ಕೂ ಹೆಚ್ಚು ಮಳೆಯಾಗುವದು. ಆ ತಿಂಗಳ ಸರಾಸರಿಯು ೫೦ ಇಂಚು ಅಂದರೆ ದಿನಾಲು ೧⅔ ಇಂಚಿಗಿಂತ ಹೆಚ್ಚು ಮಳೆಯಾಗುವದೆಂಬ ಅಭಿಪ್ರಾಯವು. ಅಕ್ಟೋಬರ, ನವಂಬರಗಳ ಸರಾಸರಿಯು ೩ ಇಂಚು ಮಾತ್ರ ಇರುವದು. ಅಂದರೆ ಈ ತಿಂಗಳಲ್ಲಿ ಮಳೆಯು ಈ ಜಿಲ್ಲೆಯಲ್ಲಿ ತೀರ ಕಡಿಮೆ ಎಂಬದು ಮೇಲೇ ತೋರುತ್ತದೆ.

ಗಾಳಿಗಳು ಬೀಸುವ ದಿಕ್ಕುಗಳು— ಈ ಜಿಲ್ಲೆಯಲ್ಲಿ ವಿಶೇಷವಾಗಿ ನೈಋತ್ಯ ಪಶ್ಚಿಮ ಗಾಳಿಗಳೇ ಹೆಚ್ಚು. ಯಾಕಂದರೆ ಉತ್ತರಪೂರ್ವಗಳಲ್ಲಿ ಗುಡ್ಡಗಳು ಗೋಡೆಗಳಂತೆ ಇರುವವು. ನವಂಬರ ದಶಂಬರ ಜನವರಿ ತಿಂಗಳುಗಳಲ್ಲಿ ಮೂಡಗಾಳಿಯು ಬೀಸುವದು. ಪಶ್ಚಿಮದಿಂದ ಬೀಸುವ ಗಾಳಿಗಳು ಸಮುದ್ರದಿಂದ ಬರುವ ಕಾರಣ ಬೇಸಿಗೆಯಲ್ಲಿ †ತಂಪಾಗಿಯೂ ಚಳಿಗಾಲದಲ್ಲಿ †ಬಿಸಿ

---

* ತಾಲೂಕ ಕಚೇರಿಗಳಲ್ಲಿಯೂ ಸರಕಾರೀ ದವಾಖಾನೆಗಳಲ್ಲಿಯೂ ಬೈಲೊಳಗೆ ಮಳೆಯನ್ನು ಅಳೆಯುವ ಬಾಟಲಿಯನ್ನು ಇಟ್ಟಿರುವರು. ಅದನ್ನು ವಿದ್ಯಾರ್ಥಿಗಳಿಗೆ ತೋರಿಸಿ ವಿವರಿಸಿ ಹೇಳಬೇಕು. ಅದಕ್ಕೆ ಇಂಗ್ಲಿಷದಲ್ಲಿ "ರೇನಗೇಜ" ಎಂದೆನ್ನುವರು.

† ಬಿಸಿಲಿನಿಂದ ನೆಲವು ನೀರಿಗಿಂತ ತೀವ್ರ ಕಾಯುವದು, ಆದರೆ ತಣ್ಣಗಾಗಲಿಕ್ಕೆ ಹೆಚ್ಚು ಅವಕಾಶವು ಬೇಕಾಗುವದು.

ಯಾಗಿಯೂ ಇರುವವು. ದಶಂಬರ, ಜನವರಿ, ಫೆಬ್ರುವರಿ ತಿಂಗಳುಗಳಲ್ಲಿ ಮಂಜು ಇಬ್ಬನಿಗಳು ಬೀಳುತ್ತವೆ.

ಎಪ್ರಿಲದಿಂದ ಜೂನದ ವರೆಗೆ ಎಲ್ಲಾದರೂ ಅಪ್ಪಿತಪ್ಪಿ ಮಳೆಯಾಗುವದುಂಟು. ಜೂನದಿಂದ ಅಕ್ಟೋಬರದ ವರೆಗೆ ಪಶ್ಚಿಮ ಗಾಳಿಯು ಬೀಸುವದು. ಇದು ನಿಜವಾದ ಮಳೆಗಾಲವು. ನವಂಬರದಿಂದ ಫೆಬ್ರುವರಿಯ ವರೆಗೆ ಚಳಿಗಾಲವು. ಆಗ ಬೀಸುವ ಮೂಡಗಾಳಿಯು ದಯವಿಲ್ಲದೆ ಜನರ ಶರೀರವನ್ನು ನಡುಗಿಸುವದು. ಮುಂದೆ ಮಾರ್ಚ, ಎಪ್ರಿಲ, ಮೇ ತಿಂಗಳುಗಳಲ್ಲಿ ಅದು ಕಡಿಮೆಯಾಗುವದು. ಆಗ ದಕ್ಷಿಣ ಪಶ್ಚಿಮ ಗಾಳಿಯು ಬೀಸುತ್ತದೆ. ಸಾಯಂಕಾಲದಲ್ಲಿ ಪಶ್ಚಿಮದಲ್ಲಿರುವ ಸಮುದ್ರದ ಕಡೆಯಿಂದ ತಂಗಾಳಿಯು ಸುಳಿಯುವದು. (ಆದರೆ ರಾತ್ರಿಯಲ್ಲಿ ಮಾತ್ರ ತುಸು ಬಿಸಿಯಾದ ಗಾಳಿಯು ಬರುವದು.) ಅದು ಹಗಲಿನ ಉಷ್ಣತೆಯನ್ನು ಕಡಿಮೆ ಮಾಡಿ ರಾತ್ರಿಯ ತಾಪವನ್ನು ಹಿಂಗಿಸುವದು.

ಒಟ್ಟಿನ ಮೇಲೆ ಕಾನಡಾ ಜಿಲ್ಹೆಯ ಹವೆಯು ಕರಾವಳೀ ಪ್ರಾಂತದ ಹೊರತು, ಉಳಿದ ಕಡೆಗೆ ರೋಗಕಾರಕವಾಗಿದೆ. ಆದ್ದರಿಂದಲೇ ಪರಜಿಲ್ಹೆಯವರು ಇದಕ್ಕೆ ಕಾಳಾಪಾಣಿಯ ಪ್ರದೇಶವೆಂದು ಅನ್ನುವರು.

## ೫ನೆಯ ಪ್ರಕರಣ.

### ಭೂಮಿಯ ಗುಣವೂ ಹುಟ್ಟುವಳಿಯೂ.

(ಅ.) ಭೂಮಿಯ ಗುಣ.—ಈ ಜಿಲ್ಹೆಯಲ್ಲಿ ನಾಲ್ಕು ಸ್ವಾಭಾವಿಕ ವಿಭಾಗಗಳನ್ನು ಮಾಡಿರುತ್ತದಷ್ಟೇ. ಸೂಕ್ಷ್ಮರೀತಿಯಿಂದ ನೋಡಿದರೆ ಮಣ್ಣಿನಲ್ಲಾದರೂ ನಾಲ್ಕು ಭಾಗಗಳಾಗಬಹುದು. ಆದಾಗ್ಯೂ ಸ್ಥೂಲದೃಷ್ಟಿಯಿಂದ ಕುಚ್ಚೀನಾಡು, ಅಡವೀಸೀಮೆ, ತೋಟದ ಸೀಮೆಗಳು ಬಹುತರ ಸಾಮ್ಯವನ್ನು ಪಡೆಯುವ ಮೂಲಕ ಕೆಲವರು ಎರಡು ಭಾಗಗಳನ್ನು ಮಾತ್ರ ಕಲ್ಪಿಸುವರು. ಹೇಗೇ ಇರಲಿ, ಕರಾವಳಿ ಭೂಮಿಯು ಮಾತ್ರ ಸಂಪೂರ್ಣ ಭಿನ್ನವಾಗಿದೆ. ಕರಾವಳೀ ಭೂಮಿಯು ಬಿಳೀ ಉಸುಬಿನದಿದ್ದು ಉಸುಬಿನ ಕಣಗಳು ಗಡುತರವಾಗಿರುವದರಿಂದ ಮಳೆಯ ನೀರು ಒಂದೊಂದು ಕಡೆಗೆ ನಾಲ್ಕು ಮಿನಿಟು ಸಹ ಮೇಲೆ ನಿಲ್ಲದೆ ಬೇಗ ಇಂಗಿಹೋಗುವದು.

ಕುಚ್ಚೀನಾಡು, ಅಡವೀಸೀಮೆಗಳ ಮಣ್ಣು ಕೆಂಪು; ಉಸುಬಿನ ಕಣಗಳು ಸ್ವಲ್ಪ ಸಣ್ಣವಾಗಿದ್ದು ಗಟ್ಟಿ ಇರುವವು. ನೀರು ಹಿಡಿಯುವ ಶಕ್ತಿಯು ಸಾಧಾರಣ ಅದೆ. ಆದರೆ ಅದರ ಉಪಯೋಗವೇನು? ಅಲ್ಲಲ್ಲಿ ಗುಡ್ಡಗಳೂ ಇಳಕಲುಗಳೂ ಇರುವದರಿಂದ ಮಳೆ ಬಿದ್ದ ಕೂಡಲೆ ತಗ್ಗಿದ್ದಲ್ಲಿ ನೀರು ಹರಿದು ಹೋಗುವದು.

ತೋಟದ ಸೀಮೆಯ ಮಣ್ಣು ಸ್ವಲ್ಪ ಕರೇ ಛಾಯೆಯಾಗಿ ಉಳಿದ ಮೂರು ಭಾಗಗಳಿಗಿಂತ ಸಣ್ಣ ಕಣವುಳ್ಳದ್ದು. ಆದ್ದರಿಂದ ಅದರಲ್ಲಿ ನೀರನ್ನು ಹಿಡಿದುಕೊಳ್ಳುವ ಶಕ್ತಿಯು ಹೆಚ್ಚಿರುತ್ತದೆ.

ಕರಾವಳಿಯ ಬಿಳೀ ಉಸುಬಿನ ಭೂಮಿಯಲ್ಲಿ ಗೊಬ್ಬರದ ಅಂಶವೂ ವನಸ್ಪತಿಗಳ ಆಹಾರಕ್ಕೆ ಬೇಕಾಗುವ ಪೋಷಕ ದ್ರವ್ಯಗಳೂ ಬಹು ಸ್ವಲ್ಪ. ಆದಕಾರಣ ಕಾಲಕ್ಕೆ ಸರಿಯಾಗಿ ಬಹಳ ಮಳೆ ಬಿದ್ದು ಗೊಬ್ಬರವೂ ಒಳಿತಾಗಿ ಬಿದ್ದರೆ ಮಾತ್ರ ಬೆಳೆಯು ಬರುವದು. ಸ್ವಲ್ಪಕಾಲ ವ್ಯತ್ಯಾಸವಾದರೆ ಬೀಜ ಸಹ ಬರುವದು ಕಠಿಣವಾಗುತ್ತದೆ. ಇವುಗಳಲ್ಲಿ ನದೀ ದಂಡೆಗೆ ಇರುವ ಕಪ್ಪು ಮಣ್ಣಿನ ತಗ್ಗಿನ (ಗಜನೀ) ಭೂಮಿಯಲ್ಲಿ ಗೊಬ್ಬರದ ಅಂಶವೂ ಪೋಷಕ ದ್ರವ್ಯವೂ ಹೆಚ್ಚಿರುತ್ತದೆ. ಆದಾಗ್ಯೂ ಸಮುದ್ರ ಸಾಮೀಪ್ಯದ ಮೂಲಕ ಉಪ್ಪು ನೀರು ಒಳಗೆ ಬರುವದರಿಂದ, ಮಳೆಯು ವ್ಯತ್ಯಾಸವಾದರೆ ಬೆಳೆಯು ಕೆಟ್ಟುಹೋಗುವದು.

ಕುಚ್ಚೇನಾಡಿನ ಕೆಂಪುಮಣ್ಣಿನ ಭೂಮಿಯಲ್ಲಿ ಉಸುಕು, ಕಲ್ಲು, ಹರಳು ಗಳು ಮಿಶ್ರವಾಗುವದರಿಂದಲೂ, ತೀರ ಇಳಿಜಾರಾದ ಭೂಮಿಯೇ ಹೆಚ್ಚು ಇರುವದರಿಂದಲೂ ಕಾಲಕ್ಕೆ ಸರಿಯಾಗಿ ಮಳೆಯಾಗದ ವರ್ಷ ಒಂದು ತೆನೆ ಯನ್ನು ಸಹ ಕಾಣುವದು ಅಪರೂಪ. ಈ ಭೂಮಿಗೆ ಗೊಬ್ಬರವು ವಿಶೇಷ ಬೇಕಾಗುತ್ತದೆ. ಅಲ್ಲಿ ದನಕರುಗಳನ್ನು ಸಾಕಲಿಕ್ಕೆ ಅನುಕೂಲವಿರುವದರಿಂದ ಗೊಬ್ಬರವನ್ನು ಮಾಡುವದು ಬಿಗಿಯಲ್ಲ.

ಅಡವೀಸೀಮೆಯಲ್ಲಿಯೂ ಕೆಂಪುಮಣ್ಣೂ ಪೋಷಕ ದ್ರವ್ಯಗಳೂ ಸಾಧಾ ರಣವಾಗಿ ಇರುವವು. ಗೊಬ್ಬರವನ್ನು ಹಾಕಿದರೆ ಹಾಗೂ ಮಳೆಯು ಸರಿ ಯಾಗಿ ಆದರೆ ಉತ್ತಮ ಬೆಳೆಯು ಬರುವದು.

ತೋಟದ ಸೀಮೆಯಲ್ಲಿ ಎಲ್ಲ ಭಾಗಗಳಿಗಿಂತ ಮಳೆ ಕಡಿಮೆ. ಆದರೆ ಮಣ್ಣಿನಲ್ಲಿ ಸಾರವು ಹೆಚ್ಚಿರುತ್ತದೆ. ನೀರು ಹರಿಯುತ್ತಿರುವ ಪ್ರದೇಶದಲ್ಲಿ ಅಡಿಕೆ, ಕಬ್ಬು, ಬಾಳೆ, ವೀಳ್ಯದೆಲೆಗಳ ತೋಟಗಳನ್ನು ಮಾಡುವರು. ಬತ್ತ, ರಾಗಿ, ಕಬ್ಬು ಇವೇ ಮುಖ್ಯ ಬೆಳೆಗಳು. ಹಲ್ಯಾಳ, ಮುಂಡಗೋಡ, ಸಿರಸಿ ತಾಲೂಕು ಗಳ ಪೂರ್ವಭಾಗದಲ್ಲಿ ಬೈಲಸೀಮೆಗೆ ಹೊಂದಿದ ಭೂಮಿಯಲ್ಲಿ ಕಡಲೆ, ನೆಲ ಗಡ್ಲೆ, ಔಡ್ಲ ಮುಂತಾದ ಕಾಳುಗಳನ್ನು ಬೆಳಿಸುವದುಂಟು.

ಅಡವೀಸೀಮೆಯಲ್ಲಿ ಅಡಿಕೆ, ಯಾಲಕ್ಕಿ, ಮೆಣಸು, ಬಾಳೆ, ಕಬ್ಬುಗಳು ತೋಟಗಳಲ್ಲಿಯೂ, ಬತ್ತವು ಗದ್ದೆಗಳಲ್ಲಿಯೂ ಚನ್ನಾಗಿ ಬೆಳೆಯುವದು. ಇವುಗಳಿಗೆ ಬಹಳ ನೀರೂ ತಂಪು ಹವೆಯೂ ಬೇಕು. ಆದರೆ ಉಷ್ಣ ಹವೆ ಯಿಂದ ಬೆಳೆಯುವ ತೆಂಗು ಇಲ್ಲಿ ಆಗುವದಿಲ್ಲ.

ಕುಚ್ಚೇನಾಡಿನಲ್ಲಿ ಬತ್ತದ ಭೂಮಿಯು ಸಾಧಾರಣ ಹೆಸರಾಗಿರುವದು. ಬೇಗ ಬೆಳೆಯುವ ನಾನಾ ಪ್ರಕಾರದ ಸಣ್ಣ ಬತ್ತವು ಉತ್ತಮವಾಗಿ ಬೆಳೆಯು ವದು. ಹಳ್ಳ-ಹರಿನೀರುಗಳು ಸಿಕ್ಕಲ್ಲಿ ಬಾಳೆ-ಎಲೆ-ಕಬ್ಬು-ಅಡಿಕೆ-ಮೆಣಸುಗಳ ತೋಟಗಳನ್ನು ಮಾಡುವರು. ಇಲ್ಲಿ ಇಳುಕಲಭೂಮಿ ಇರುವ ಕಾರಣ ಬತ್ತಕ್ಕಿಂತಲೂ ಇತರ ಬೆಳೆಗಳನ್ನೇ ಜನರು ನಂಬಿರುವರು. ಇಲ್ಲಿ ಸಮುದ್ರದ ಉಷ್ಣ ಹವೆಯ ಸಂಪರ್ಕವಾಗುವದರಿಂದ ನೀರಿನ ಆಶ್ರಯವಿದ್ದಲ್ಲಿ ತೆಂಗಿನ ತೋಟಗಳು ಚನ್ನಾಗಿ ಫಲಿಸುವವು. ಆದರೆ ಕೊಬ್ಬರಿಯು ಕರಾವಳಿಯಲ್ಲಿ ಬೆಳೆಯುವ ಕಾಯಿಗಳಷ್ಟು ರುಚಿಕರವಲ್ಲ.

ಕರಾವಳೀ ಸೀಮೆಯಲ್ಲಿ ಮುಖ್ಯವಾದ ಬೆಳೆಯೆಂದರೆ—ಬತ್ತ, ತೆಂಗು.

ಇಲ್ಲಿಯ ಭೂಮಿಯು ಹೆಚ್ಚಾಗಿ ಸಮನೆಲದ್ದು. ಮಳೆಯು ಬೇಕಾದ ಹಾಗೆ ಆಗುತ್ತದೆ. ಆದರೆ ಅಕಾಲದಲ್ಲಿ ಒಮ್ಮೆಲೆ ಮಳೆ ಬಿದ್ದು, ಒಮ್ಮೊಮ್ಮೆ ಮೇಲಿನಿಂದ ಬರುವ ಹೊಳೆಗಳು ತಿಂಗಳುಗಟ್ಟಲೆ ತುಂಬಿ ನಿಲ್ಲುವದರಿಂದ ಹೊಳೆಯ ದಂಡೆಗಿರುವ ತಗ್ಗಿನ ಭೂಮಿಗಳು ಕೆಡುವ ಭೀತಿ ಬಹಳ. ಕೆರೆ ಬಾವಿಗಳನ್ನು ಸುಲಭವಾಗಿ ತೋಡಬಹುದು; ಅವುಗಳೊಳಗಿಂದ ಶುದ್ಧ ನೀರು ವಿಪುಲವಾಗಿ ಬರುವದು. ಯಾತ ಮುಂತಾದ ಕಷ್ಟ-ಕೃಷಿಯಿಂದಲಾದರೂ ಬತ್ತ ತೆಂಗುಗಳನ್ನು ಬೆಳಿಸುವರು. ಕೆಲವು ಕಡೆಗೆ ಕಬ್ಬು ಬಾಳೆಗಳೂ ಆಗು ವದುಂಟು.

(ಬ.) **ಹುಟ್ಟುವಳಿ.** — ಮಳೆ-ಹವೆ-ನೆಲಗಳನ್ನು ಅನುಸರಿಸಿ ಹುಟ್ಟುವಳಿ ಇರುತ್ತದೆ. ಎಲ್ಲ ಬೆಳೆಗಳಿಗೆ ಒಂದೇ ತರದ ಮಳೆ-ಹವೆ-ನೆಲಗಳು ಬೇಡ. ಕಾನಡಾ ಜಿಲ್ಹೆಯ ಬಿಳೇ ಉಸುಬು, ಕೆಂಪು ಮಣ್ಣು, ಹೊಳೇ ದಂಡೆಯ ಕರೇ ಮಣ್ಣು, ಇವುಗಳಲ್ಲಿ ಯಾವ ಯಾವ ಬೆಳೆ ಬರುತ್ತದೆಂಬದನ್ನು ನೋಡುವ.

ಬತ್ತ. — ಈ ಬೆಳೆಗೆ ನೀರು ಬಹಳ ಬೇಕು; ಹವೆಯೂ ಉಷ್ಣವಿರಬೇಕು. ಬಿತ್ತಿದಂದಿನಿಂದ ಹೂವು ಬಿಡುವ ವರೆಗೂ ನೀರು ಆಗಾಗ್ಗೆ ಬೇಕೇ ಬೇಕು. ಮೊದಲು ಮೇ ತಿಂಗಳಲ್ಲಿ ಅಗಿಯನ್ನು ಹಾಕುವರು. ಮುಂದೆ ಮೃಗಪ್ರವೇಶದ ಸಮಯಕ್ಕೆ ಮಳೆ ಬೇಕು. ತರುವಾಯ ಆರು ನಕ್ಷತ್ರಗಳಲ್ಲಿಯೂ (ಸರಾಸರಿ ಮೂರು ತಿಂಗಳು) ಸರಿಯಾಗಿ ಮಳೆ ಬಿತ್ತೆಂದರೆ ಇದರ ಕೆಲಸವಾಯಿತು. ಕನಿಷ್ಠ ನಾಲ್ಕು, ಐದು ದಿವಸಕ್ಕೊಮ್ಮೆಯಾದರೂ ಗದ್ದೆ ತುಂಬುವಂಥ ಮಳೆಯು ಬರುತ್ತಿರಬೇಕು. ಇಲ್ಲದಿದ್ದರೆ ಉತ್ತಮ ಬೆಳೆಯು ಬರಲಾರದು. ಒಟ್ಟಿನ ಮೇಲೆ ಇಡೀ ಜಿಲ್ಹೆಯಲ್ಲಿ ಮಳೆಯು ಬಹಳ ಬೀಳುತ್ತದೆ; ಕರಾವಳಿಯ ಪ್ರದೇಶದಲ್ಲಿ ಉಷ್ಣ ಹವೆಯೂ ಅದೆ. ಆದಕಾರಣ ಮುಖ್ಯವಾಗಿ ಕರಾವಳಿಯಲ್ಲಿಯೂ ಸಾಮಾನ್ಯವಾಗಿ ಎಲ್ಲ ಕಡೆಗೂ ಇದರ ಬೆಳೆಯು ಬರುವದು. ಒಟ್ಟು ೧೭೩೭೮ ಎಕರೆ ಭೂಮಿಯಲ್ಲಿ ಬತ್ತವನ್ನು ಬೆಳಿಸುವರು; ಅಂದರೆ ಸಾಗುಭೂಮಿಯ ೩⁄೪ಕ್ಕಿಂತ ಹೆಚ್ಚು ಪ್ರದೇಶದಲ್ಲಿ ಬತ್ತವನ್ನು ಬೆಳಿಸುವರು.

ತೆಂಗು. — ಇದಕ್ಕಾದರೂ ನೀರು ಬಹಳ ಬೇಕು; ಉಷ್ಣ ಹವೆಯೂ ಅಷ್ಟೇ ಮಹತ್ವದ್ದು. ಕಾರಣ ಇದರ ಬೆಳೆಯು ಕರಾವಳಿ ಪ್ರಾಂತದಲ್ಲಿ ಬಂದಷ್ಟು ಮತ್ತೆಲ್ಲಿಯೂ ಬರುವದಿಲ್ಲ. ಕುಚ್ಚೇನಾಡಿನಲ್ಲಿ ನೀರಿನ ಅನು

ಕೂಲತೆಯಿಂದ ತೋಟಗಳು ಫಲದ್ರೂಪವಾದಾಗ್ಯೂ ಕಾಯಿಗಳಲ್ಲಿ ತೈಲಾಂಶವು ಕಡಿಮೆ. ಇವುಗಳ ತೋಟಗಳಿಗೆ ಚಳಿಗಾಲದ ಆರಂಭದಿಂದ ಮೇ ಕೊನೆಯ ವರೆಗೂ ೮ ತಿಂಗಳು ನೀರು ಬೇಕು. ಇದಲ್ಲದೆ ಸಪ್ಟೆಂಬರ ತಿಂಗಳಲ್ಲಿ ಬೀಳುವ ಮಘಾ-ಹುಬ್ಬಾ ನಕ್ಷತ್ರಗಳ ಮಳೆಯ ನೀರಿಗೆ ಬುಡವನ್ನು ಕಟ್ಟಿ ಕೊಂಡರೆ ಮತ್ತಿಷ್ಟು ಒಳ್ಳೆಯದು. ಬೇರು ಮೇಲೆ ಬಾರದಂತೆ ಆಗಾಗ್ಗೆ ಬುಡಕ್ಕೆ ಮಣ್ಣು-ಸೊಪ್ಪುಗಳನ್ನು ಹಾಕಬೇಕಾಗುತ್ತದೆ. ಅಡವೀಸೀಮೆ ತೋಟದ ಸೀಮೆಗಳಲ್ಲಿ ತಂಪು ಹವೆಯ ಮೂಲಕ ಇದರ ಫಲವೃದ್ಧಿಯಾಗು ವದಿಲ್ಲ. ಮತ್ತು ಅಲ್ಲಿಯ ಮಣ್ಣಿನಲ್ಲಿ ಸ್ನೇಹಾಕರ್ಷಣವೂ ಕಲ್ಲುಹರಳುಗಳೂ ಹೆಚ್ಚಿರುವ ಕಾರಣ ಈ ಮರದ ಗಡ್ಡೆ ಬೆಳೆಯಲಿಕ್ಕೆ ಅನುಕೂಲವಿರುವದಿಲ್ಲ. ಗಡ್ಡೆ ಬೆಳೆಯಲಿಕ್ಕೆ ಅನುಕೂಲವುಳ್ಳ ಉಸುಬಿನ ಭೂಮಿಯಲ್ಲಿ ನೀರಿನ ಆಶ್ರಯ ವಿದ್ದರೆ ಬೇಗ ಫಲಿಸುವದು. ಮೀನ, ಉಪ್ಪುಗಳ ಗೊಬ್ಬರದಿಂದ ಬೆಳೆಯು ಚನ್ನಾಗಿ ಬರುವದು. ಒಟ್ಟು ೧೧೫೧೧ ಎಕರೆ ಭೂಮಿಯಲ್ಲಿ ಇದರ ಬೆಳೆಯು ಬರುವದು.

ಕಬ್ಬು.—ಇದಕ್ಕಾದರೂ ನೀರೂ ಉಷ್ಣ ಹವೆಯೂ ಬೇಕು; ಆದರೂ ನೀರೇ ಪ್ರಾಧಾನ್ಯ. ಗೊಬ್ಬರವೂ ಚಲೋದು ಬೇಕಾಗುತ್ತದೆ. ಕಾರಣ ಕುಚ್ಚೇನಾಡು, ಅಡವೀಸೀಮೆಗಳು ಇದಕ್ಕೆ ಯೋಗ್ಯ ಸ್ಥಳಗಳು. ಸರಾಸರಿ ಜನವರಿಯಿಂದ ಐದು ತಿಂಗಳು ನೀರು ಬಿಡಬೇಕಾಗುತ್ತದೆ. ನೀರು ಹರಿದಷ್ಟು ಒಳ್ಳೇದು. ಇಂಥ ನೀರಿನ ಆಶ್ರಯವು ಸಿಕ್ಕರೆ ಕರಾವಳಿಯಲ್ಲಿಯೂ ಕಬ್ಬು ಬೆಳಿಸುವರು. ಆದರೆ ಕಟ್ಟಿಗೆಯ ಅಭಾವದಿಂದ ಮುಂದೆ ಬೆಲ್ಲವನ್ನು ಮಾಡು ವದಕ್ಕೆ ವೆಚ್ಚವು ಬಹಳ ಹತ್ತುವದರಿಂದ ಲಾಭವಿಲ್ಲ. ಉಳಿದ ಮೂರು ಭಾಗಗಳಲ್ಲಿ ಬಹುಶಃ ಕಬ್ಬು ಬೆಳಿಸುವರು. ಅಡವೀಸೀಮೆಯ ಯಲ್ಲಾಪುರ ತಾಲೂಕು ಬೆಲ್ಲಕ್ಕೆ ಹೆಸರಾಗಿದೆ. ಹೊನ್ನಾವರ, ಕುಮಟಾ ತಾಲೂಕುಗಳ ಕುಚ್ಚೇನಾಡ ಭಾಗದಲ್ಲಿರುವ ಗೆರಸಪ್ಪೆಯ ಸೀಮೆ, ಪಡುವಣೆ, ಉಪ್ಪಿನ ಪಟ್ಟಣ, ಮುರೂರು, ಕಲ್ಲಬ್ಬೆ, ವಾಲಗಳ್ಳಿ ಇವೆಲ್ಲ ಕಬ್ಬು ಬೆಳೆಯಲಿಕ್ಕೆ ತಕ್ಕ ಮಟ್ಟಿಗೆ ಹೆಸರಾಗಿವೆ. ಈ ಜಿಲ್ಲೆಯಲ್ಲಿ ಒಟ್ಟಿಗೆ ೩೦೭೫ ಎಕರೆ (ಐದು ಚೌ. ಮೈಲು) ಭೂಮಿಯಲ್ಲಿ ಕಬ್ಬು ಬೆಳಿಸುವರು.

ಅಡಿಕೆ.—ಇದಕ್ಕೆ ನೀರು ವಿಪುಲವಾಗಿದ್ದು ಹವೆಯು ತಂಪು ಇರಬೇಕು. ಸೊಪ್ಪಿನ ಗೊಬ್ಬರವೂ ಅವಶ್ಯವದೆ. ಕರಾವಳಿಯಲ್ಲಿ ಇವೆಲ್ಲ ದುರ್ಲಭ.

ಕುಚ್ಚೇನಾಡು, ಅಡವೀಸೀಮೆಗಳಲ್ಲಿ ಇವುಗಳ ಅನುಕೂಲತೆ ಇರುವದರಿಂದ ಅಲ್ಲಿ ಚನ್ನಾಗಿ ಬೆಳೆ ಬರುವದು. ಸಿರಸಿ-ಸಿದ್ದಾಪುರ-ಯಲ್ಲಾಪುರ ತಾಲೂಕುಗಳೂ, ಕುಮಟಾ-ಹೊನ್ನಾವರ ತಾಲೂಕುಗಳ ಕುಚ್ಚೇನಾಡೂ ಇದಕ್ಕೆ ಹೆಸರಾಗಿವೆ. ಮರದ ಸುತ್ತಲು ಬೇಸಿಗೆ-ಚಳಿಗಾಲಗಳಲ್ಲಿ ನೀರು ಹರಿಯುತ್ತಿದ್ದಷ್ಟು ಒಳ್ಳೇದು. ಅಗಸ್ಟ, ಸಪ್ಟೆಂಬರ ಮುಂತಾದ ಯಾವದೇ ತಿಂಗಳಲ್ಲಿ ಒಮ್ಮೆ ಬಿಸಿಲು, ಒಮ್ಮೆ ಮಳೆ ತುಸು ದಿವಸಗಳಲ್ಲಿ ಬಹಳ ಬೀಳಬಾರದು. ಒಟ್ಟು ೧೫೩೮ ಎಕರೆ ಅಥವಾ ೨½ ಚೌ. ಮೈಲು ಭೂಮಿಯಲ್ಲಿ ಅಡಿಕೆಯು ಬೆಳೆಯುವದು. ಈ ಜಿಲ್ಹೆಯಲ್ಲಿ ಅಡಿಕೆಯ ತೋಟಗಳು ದಿನೇ ದಿನೇ ವೃದ್ಧಿಯಾಗುತ್ತ ನಡೆದವೆ.

ಅಡಿಕೇ ಗಿಡವು ನೋಡಲಿಕ್ಕೆ ಬಲು ಚಂದ. ಇದು ಮೂವತ್ತು, ಮೂವತ್ತೈದು ಫೂಟು ಎತ್ತರವಾಗಿ ಬೆಳೆಯುವದು. ಹಿಂಗಾರಕ್ಕೆ ಕಾಯಿಗಳು ಹತ್ತಿ ಶ್ರಾವಣದಿಂದ ಕಾರ್ತಿಕ, ಮಾರ್ಗಶೀರ್ಷಗಳ ವರೆಗೆ ಬೆಳೆಯುತ್ತವೆ. ಆ ಮೇಲೆ ಅವುಗಳನ್ನು ಕೊಯಿದು ಒಣಗಿಸುವರು, ಇಲ್ಲವೆ ಕುಚ್ಚಿ, ಬಣ್ಣ ಕೊಟ್ಟು, ಬ್ಯಾಡಿಗಿ-ಹಾವೇರಿ-ಮುಂಬಯಿಗಳ ಕಡೆಗೆ ಕಳಿಸುವರು. ಇವುಗಳಲ್ಲಿ ಸಿಗುರು, ಗೋಟು, ಚಿಕಣಿ, ಬಟ್ಟಲ, ಲವಂಗಚೂರು, ಕೇಶರಿ ಎಂಬ ಅನೇಕ ತರಗಳಿರುವವು. ಗಿಡವು ಹಚ್ಚಿದ ಐದು ಆರು ವರ್ಷಕ್ಕೆ ಫಲಿಸಹತ್ತುವದು.

ಮೆಣಸು.—ಇದಾದರೂ ನೀರಿನ ಬಲುಮೆಯಿಂದ ಬೆಳೆಯುವದು. ಹವೆಯಂತೂ ತಂಪು ಬೇಕು. ಅಡಿಕೆಯ ಮರಗಳಿಗೆ ಇದರ ಬಳ್ಳಿಯನ್ನು ಹಬ್ಬಿಸಿದರೆ ಕೆಲಸವಾಗುತ್ತದೆ. ಇದರ ಬಳ್ಳಿಯು ಎಲೆಯ ಬಳ್ಳಿಯಂತೆ ಇರುವದು. ಇದನ್ನು ಅಡವೀಸೀಮೆಯಲ್ಲಿ ಬಹಳವಾಗಿಯೂ, ಕುಚ್ಚೇನಾಡಿನಲ್ಲಿ ಅಲ್ಪ ಸ್ವಲ್ಪವಾಗಿಯೂ ಬೆಳಿಸುವರು. ಒಟ್ಟು ೪೪೭೯ ಎಕರೆ (೭ ಚೌ. ಮೈ.) ಭೂಮಿಯಲ್ಲಿ ಇದು ಬೆಳೆಯುವದು.

ಯಾಲಕ್ಕಿ.—ಇದಕ್ಕೂ ತಂಪು ಹವೆ, ವಿಪುಲ ನೀರು ಬೇಕು. ಅದರಿಂದ ಇದು ಯಲ್ಲಾಪುರ-ಸಿರಸಿ ತಾಲೂಕುಗಳಲ್ಲಿ ಉತ್ತಮವಾಗಿ ಬೆಳೆಯುವದು. ಸಿರಸಿಯ ಯಾಲಕ್ಕಿಯು ಪ್ರಸಿದ್ಧ. ಈ ಗಿಡಗಳ ಗುಂಪಿನಲ್ಲಿ ಹಾವು ಬಹಳ. ಯಾಕಂದರೆ ಅವು ಯಾಲಕ್ಕೀ ಗಿಡಗಳ ಸುವಾಸನೆಗೆ ಮೆಚ್ಚಿರುವವು. ಯಾಲಕ್ಕಿಯನ್ನು ಬೆಳಿಸುವದು ಬಹು ತ್ರಾಸದ ಕೆಲಸವು. ೧೫೪೪ ಎಕರೆ ಭೂಮಿಯಲ್ಲಿ ಇದು ಬೆಳೆಯುವದು. ಇದು ಮಣಕ್ಕೆ ೪೦ ರೂಪಾಯಿಯ

ಮೇಲೆ ಬೆಲೆಬಾಳುವದು. ಇಲ್ಲಿಂದ ಮುಂಬಯಿಗೂ ವಿಲಾಯತಿಗೂ ಇದನ್ನು ಕಳಿಸುವರು. ಯಾಲಕ್ಕೀ ಗಿಡವು ಅರಿಶಿಣ ಗಿಡದಂತೆ ಇದ್ದು ಅದಕ್ಕೂ ಎತ್ತರವಾಗಿ ಬೆಳೆಯುವದು. ಕಾಯಿಗಳು ಬುಡದಲ್ಲಿ ಬೇರುಗಳಿಗೆ ಮಾತ್ರ ಆಗುವವು. ಆಶ್ವಿನ ಕಾರ್ತಿಕ ಮಾಸಗಳಲ್ಲಿ ಯಾಲಕ್ಕಿಯ ಸುಗ್ಗಿಯು. ಇವುಗಳನ್ನು ತೊಳೆಯಲಿಕ್ಕೆ ಸಿರಸಿಯಿಂದ ಹಾವೇರಿಗೆ ಕಳಿಸುವರು. ಅಲ್ಲಿ ಗಂಧಕದ ಹೊಗೆ ಕೊಟ್ಟು ಈ ಕಾಯಿಗಳನ್ನು ತೊಳೆಯುತ್ತಾರೆ. ಅದರಿಂದ ಅವು ಉಬ್ಬಿ ಬೆಳ್ಳಗೆ ಚಂದ ಕಾಣುವದರಿಂದ ಹೆಚ್ಚು ಬೆಲೆ ಬರುವದು.

ಬಾಳೆ.—ಇವುಗಳಿಗೂ ನೀರೂ ಗೊಬ್ಬರವೂ ಬಹಳ ಬೇಕು. ಅದರಿಂದ ಅಡವೀ ಸೀಮೆಗಳಲ್ಲಿ ಉತ್ತಮವಾಗಿ ಬೆಳೆಯುವದು. ಹೀಗೆ ತೋಟದ ಸೀಮೆ, ಬೈಲು ಸೀಮೆಗಳಿಗೆ ಬಾಳೇಕಾಯಿಗಳ ಪೂರೈಕೆಯಾಗುವದು. ಕುಚ್ಚೇನಾಡಿನಲ್ಲಿ ಬೆಳೆದ ಬಾಳೆಗಳು ಕರಾವಳೀ ಸೀಮೆಗೆ ಹೋಗುವವು. ಅಡಿಕೇ ಮರ, ಎಲೆಬಳ್ಳಿ, ಮೆಣಸಿನ ಬಳ್ಳಿಗಳಿಗೆ ಬಹಳ ತಂಪು ಬೇಕಾಗುವ ಕಾರಣ ಅಡಿಕೇ ಮರಗಳ ಮಧ್ಯದಲ್ಲಿ ಬಾಳೆಗಳನ್ನು ಹಾಕುವ ರೂಢಿ ಬಹಳ. ೫೮೭೫ ಎಕರೆ (೯ ಚೌ. ಮೈ.) ಭೂಮಿಯಲ್ಲಿ ಬಾಳೆಯು ಬೆಳೆಯುವದು.

ಎಲೆಬಳ್ಳಿ.—ಇದೂ ಮೆಣಸಿನ ಬಳ್ಳಿಯಂತೆ ಅಡಿಕೇ ಮರವನ್ನು ಆಶ್ರಯಿಸಿ ಅಲಂಕರಿಸುವದು. ಎಲೆಗಳನ್ನು ವೀಳ್ಯಕ್ಕಾಗಿ ಎಲ್ಲರೂ ಉಪಯೋಗಿಸುವರು. ಇವುಗಳಿಗೆ ನೀರೂ ತಂಪು ಹವೆಯೂ ಬೇಕು. ಕಾರಣ ಕುಚ್ಚೇನಾಡು ಅಡವೀ ಸೀಮೆಗಳಲ್ಲಿ ಬಹಳ ಬೆಳಿಸುವರು. ಆದಾಗ್ಯೂ ಹೊನ್ನಾವರ ತಾಲೂಕ ಕುಚ್ಚೇನಾಡಿನಲ್ಲಿರುವ ಹೊಸಾಕುಳಿ ಪಂಚಗ್ರಾಮಗಳು ಈ ಬೆಳೆಗೆ ಹೆಸರಾಗಿವೆ. ಅಲ್ಲಿಂದ ಇಡೀ ಕರಾವಳಿ ಸೀಮೆಗಷ್ಟೇ ಅಲ್ಲ, ಮುಂಬಯಿಯ ವರೆಗೆ ಎಲೆಗಳು ಹೋಗುತ್ತವೆ. ೪೪೭೯ ಎಕರೆ (೭ ಚೌ. ಮೈ.) ಭೂಮಿಯಲ್ಲಿ ಎಲೆಯು ಬೆಳೆಯುವದು.

ರಾಗಿ.—ಇದಕ್ಕೆ ನೀರು ಸಾಧಾರಣ ಇದ್ದರೆ ಸಾಕು. ಬುಡದಲ್ಲಿ ನೀರು ನಿಲ್ಲುವ ಕಾರಣವಿಲ್ಲ. ಅದರಿಂದ ಕುಚ್ಚೇನಾಡು ತೋಟದ ಸೀಮೆಗಳಲ್ಲಿ ರಾಗಿಯು ಚೆನ್ನಾಗಿ ಬೆಳೆಯುವದು.

ಇವಲ್ಲದೆ ಹಲ್ಯಾಳ-ಮುಂಡಗೋಡ-ಪಾಳಾ-ಮಳಗಿಗಳಲ್ಲಿ (ಮಳೆ ಕಡಿಮೆ ಬೀಳುವಂಥ, ಬೈಲುಸೀಮೆಯಂತೆ ನೆಲವೂ ಹವೆಯೂ ಇರುವಂಥ ಪ್ರದೇಶದಲ್ಲಿ) ತೊಗರಿ, ಕಡ್ಲಿ, ಗೋದಿ, ಜೋಳ, ಔಡಲ ಮುಂತಾದವುಗಳನ್ನು

ಬೆಳಿಸುವರು. ಒಟ್ಟಿಗೆ ೩೩೯೬ ಎಕರೆ ಪ್ರದೇಶದಲ್ಲಿ ಇವು ಬೆಳೆಯುವವು.

ಕರಾವಳಿಯ ಸೀಮೆಯಲ್ಲಿ ಚಳಿಗಾಲದಲ್ಲಿ ಉದ್ದು, ಹೆಸರು, ಎಳ್ಳುಗಳನ್ನೂ ಕುಚ್ಚೇನಾಡಿನಲ್ಲಿ ಮಳೆಗಾಲದೊಳಗೆ ನೆಲಗಡಲೆ, ಉದ್ದು, ಹುರಳಿಗಳನ್ನೂ ಬೆಳೆಯುವದುಂಟು. ಕುಚ್ಚೇನಾಡು ಅಡವೀಸೀಮೆಗಳಲ್ಲಿ ಹಲಸು, ಹುಣಸೆ, ಪೇರಲು, ಲಿಂಬಿ, ಕಂಚಿ, ಹುಳಿಮಾವುಗಳೂ, ಕರಾವಳಿಯಲ್ಲಿ ಅಂಕೋಲಾ, ಅವುಸರ್ಾ, ಕಡವಾಡ, ಕಾಗಾಲಬಾಡಗಳಲ್ಲಿ ತರತರದ ಕಲಮಿ ಮಾವಿನ ಮರಗಳೂ ಇದ್ದು, ಸಿರಸಿ, ಸಿದ್ದಾಪುರ, ಯಲ್ಲಾಪುರ, ಹಲ್ಯಾಳಗಳಿಗೂ ಧಾರವಾಡದ ಕಡೆಗೂ ಕಳುಹಿಸಲ್ಪಡುವವು. ಕರಾವಳಿ ಪ್ರಾಂತದ ಸಮುದ್ರದ ದಂಡೆಯಲ್ಲೆಲ್ಲ ಗೋಡಂಬಿ ಮರಗಳು ಇದ್ದು, ಅವುಗಳ ಬೀಜಗಳು ಮುಂಬಯಿ ವರೆಗೆ ಹೋಗುತ್ತವೆ. ಇತ್ತಲಾಗಿ ಎಲ್ಲ ಕರಾವಳಿಯವರು ಚಳಿಗಾಲದಲ್ಲಿ ಗೆಣಸುಗಳನ್ನು ಹೊಲದಲ್ಲಿ ಬೆಳೆದು ಮುಂಬಯಿಯ ವರೆಗೆ ಕಳಿಸುವರು. ಇಲ್ಲಿ ಹೊನ್ನೆ ಎಂಬ ಮರದ ಕಾಯಿಗಳಿಂದ ಉತ್ತಮ ದೀಪದೆಣ್ಣೆಯು ಹೊರಡುತ್ತದೆ.

ಕುಮಟೆಯ ಸಮೀಪದಲ್ಲಿ ವನ್ನಳ್ಳಿ-ದೀವಿಗೆಗಳೂ, ಗೋಕರ್ಣದ ಸಮೀಪದಲ್ಲಿ ಹನೆಹಳ್ಳಿ, ಮಾಸ್ಕೇರಿ ಮುಂತಾದ ಊರುಗಳೂ ಪಲ್ಲೆಕಾಯಿಗಳನ್ನು ಬೆಳಿಸುವದಕ್ಕೆ ಹೆಸರಾಗಿವೆ. ಒಂದೇ ವನ್ನಳ್ಳಿಯು ಕಾನಡಾ ಜಿಲ್ಹೆಯಲ್ಲಿ ಪಲ್ಲೆಯ ಜೀನಸುಗಳಿಗಾಗಿ ಬಹಳ ಹೆಸರಾಗಿರುವದು.

**ಅಡವಿಯ ಬೆಳೆಗಳು.**— ಅಡವಿಯೊಳಗೆ ಬೆಳೆಯುವ ಗಿಡಗಳು ಬಹಳ ಬೆಲೆಯುಳ್ಳವಿರುತ್ತವೆ. ಅವು ನಮಗೆ ಶ್ರಮವಿಲ್ಲದೆ ಸಿಗುವ ಅಗಾಧವಾದ ಬೆಳೆಗಳಾಗಿರುತ್ತವೆ.

ತೇಗು.— ಇದಕ್ಕೆ ವೃಕ್ಷರಾಜನೆನ್ನುವರು; ಯಾಕಂದರೆ ಇದಕ್ಕೆ ಹುಳವೂ ಗೆದ್ದಲೆಯೂ ಹತ್ತುವದಿಲ್ಲ. ಬೇಕಾದಷ್ಟು ಸರಳವಾಗಿಯೂ ಗಡುತರವಾಗಿಯೂ ಬೆಳೆಯುತ್ತದೆ; ತೊಲೆಗಳನ್ನೂ ಕಂಬಗಳನ್ನೂ ಮಾಡುವದಕ್ಕೆ ಕೆತ್ತಲು ಬಹು ಮೆತ್ತಗೆ. ೨೦೦೦ ಫೂಟುಗಳಿಗಿಂತ ಎತ್ತರ ಪ್ರದೇಶದಲ್ಲಿ ಮಳೆಯೊಂದು ಬಿದ್ದರೆ ಚನ್ನಾಗಿ ಬೆಳೆಯುವದು. ಬೀಜ ಬಿತ್ತಿ ಈ ಮರವನ್ನು ಬೆಳೆಯಬಹುದು. ಇದರಿಂದ ಚಲೋ ಎಣ್ಣೆಯು ಹೊರಡುತ್ತದೆ. ಎಲೆಯಿಂದ ಕೆಂಪು ಬಣ್ಣವು ಹುಟ್ಟುತ್ತದೆ. ಒಂದು ಖಂಡಿ ತೇಗಿನ ಕಟ್ಟಿಗೆಯ ಕ್ರಯ ೪೦ ರೂ. ಸುಮಾ

ಪೇಠೆಯೊಳಗಿನ ಗುಂದ ಎಂಬಲ್ಲಿಯ ತೇಗು ಬಹು ಪ್ರಸಿದ್ಧ. ಅಲ್ಲಿ ದರಿಯೊಳಗೆ ಈ ಗಿಡಗಳು ೧೦೦, ೧೫೦ ಫೂಟು ಎತ್ತರ ಬೆಳೆಯುವವು. ಅವುಗಳನ್ನು ಕಡಿದು ದೊಡ್ಡ ದೊಡ್ಡ ನಾಟುಗಳನ್ನು ಆನೆಗಳ ಸಹಾಯದಿಂದ ಮೇಲಕ್ಕೆ ತಂದು ಸಂಗ್ರಹಿಸುವರು. ಇವುಗಳ ಸಂಗ್ರಹವು (ಡಿಪೋ) ತಾವರಗಟ್ಟಿ ಸ್ಟೇಶನ ದಲ್ಲಿ ಅದೆ.

ಚಂದನ (ಶ್ರೀಗಂಧ)—ಇದರ ಎತ್ತರ ಸುಮಾರು ೩೦ ಫೂಟು. ಬುಡದ ಸುತ್ತಳತೆ ೪ ಫೂಟು. ಇದಕ್ಕಿಂತ ದೊಡ್ಡದಾಗುವದಿಲ್ಲ. ಹೊರಗಿನ ಕಟ್ಟಿಗೆ ಬಿಳಿದು; ಅದಕ್ಕೆ ಸುಗಂಧವಿಲ್ಲ. ಅದರೊಳಗಿನ ಗಂಡು ತುಸು ಹಳದೀ ಬಣ್ಣದ್ದಿರುತ್ತದೆ. ಮೇಲೆ ಸಣ್ಣ ಬಿರುಸು ಎಳೆಗಳು ಇರುತ್ತವೆ; ಅವು ಬಹು ಸುಗಂಧವುಳ್ಳವು. ಇದರಿಂದ ಪೆಟ್ಟಿಗೆ, ಮೂರ್ತಿ, ಬೀಸಣಿಗೆ, ಹಣಿಗೆ ಮುಂತಾದ ಶೋಭೆಯ ಒಡವೆಗಳನ್ನು ಮಾಡುವರು; ಮತ್ತು ಎಣ್ಣೆಯನ್ನು ತೆಗೆಯುವರು. ಇದು ಹೆಚ್ಚಾಗಿ ಸಿರಸಿ, ಸಿದ್ದಾಪುರ ತಾಲೂಕುಗಳಲ್ಲಿಯೂ ಮುಂಡಗೋಡ ಪೇಠಾದಲ್ಲಿಯೂ ಬೆಳೆಯುವದು.

ಮತ್ತಿ, ಹೊನ್ನಿ, ಸಿಸುವೆಗಳು ಇಮಾರತಿಯ ಕಟ್ಟಿಗೆಗಳು, ತಾಳಿಕೆ ಬಹಳ; ಆದರೆ ಬಿರಸು ಇರುತ್ತವೆ.

ಬೆತ್ತ.—ಇದು ಸಾಧಾರಣ ಗಡುತರವಾಗಿ ಎತ್ತರ ಹಬ್ಬುವದು. ಜವಳು ಅಡವಿಗಳಲ್ಲಿ ಬೆಳೆಯುವದು ಬಹಳ. ಹಲ್ಯಾಳ, ಎಲ್ಲಾಪುರ ತಾಲೂಕುಗಳಲ್ಲಿಯೂ ಕುಮಟಾ, ಹೊನ್ನಾವರ ತಾಲೂಕುಗಳೊಳಗಿನ ಯಾಣ, ಚಂದಾವರ, ಸಾಂತಗಲ್ಲುಗಳ ಅಡವಿಗಳಲ್ಲಿಯೂ ಬೆಳೆಯುವದು. ಇವುಗಳಿಂದ ನಾನಾ ತರದ ಪೆಟ್ಟಿಗೆ, ಬುಟ್ಟಿ, ತೊಟ್ಟಿಲು, ಬಡಿಗೆಗಳನ್ನು ಮಾಡುವರು. ಹಾಗು ಬಡವರು ಇದರ ಬಳ್ಳಿಯಿಂದಲೇ ಮನೆಯ ಹೆಗ್ಗಟ್ಟು ಬಿಗಿಯುವರು. ಈ ಬಳ್ಳಿಯಿಂದ ಅಕ್ಕಿಯ ಮುಡಿಗಳನ್ನು ಕಟ್ಟುವರು.

ಬಿದರುಗಳು.—ಇವು ಹೆಚ್ಚಾಗಿ ಹಲ್ಯಾಳ, ಎಲ್ಲಾಪುರ, ಸುಪೆಗಳ ಅಡವಿಗಳಲ್ಲಿ ಬಹಳ ಬೆಳೆಯುವವು. ಇವು ಮನೆಯ ಕೆಲಸಕ್ಕೆ ಬಹಳ ಉಪಯೋಗ ಬೀಳುವವು. ಇದರ ಮುಳ್ಳುಗಳಿಂದ ಭದ್ರವಾದ ಉತ್ತಮ ಬೇಲಿಯಾಗುವದು. ಇವು ಒಂದಕ್ಕೊಂದು ತಿಕ್ಕಾಡುವದರಿಂದ ಒಮ್ಮೊಮ್ಮೆ ಅರಣ್ಯಕ್ಕೆ ಬೆಂಕಿ ಹತ್ತುವದು. ಇದರೊಳಗಿನ ಸುಣ್ಣವು ಔಷಧಕ್ಕೆ ಬರುವದು.

ಇವಲ್ಲದೆ ಎಲ್ಲ ತರದ ಕರೇ ಮಸಿಗಳಿಗೆ ಉಪಯೋಗವಾಗುವ ಅಳಲೇ

ಕಾಯಿಯ ಮರಗಳೂ, ಸೀಗೇಕಾಯಿಯ ಮರಗಳೂ ಈ ಅಡವಿಗಳಲ್ಲಿ ತುಂಬಿರುತ್ತವೆ. ಮತ್ತು ದೊಡ್ಡ ದೊಡ್ಡ ಮರಗಳಿಗೆ ಜೇನು ಕಟ್ಟುವದರಿಂದ ತುಪ್ಪವೂ ಮೇಣವೂ ಬೇಕಾದಷ್ಟು ಸಿಗುವವು.

(೨) **ಪಶುಗಳು.**—ಈ ಜಿಲ್ಹೆಯ ಪಶುಗಳಲ್ಲಿ ಸಾಕಿದ ಪಶುಗಳೆಂತಲೂ ಅಡವೀ ಪಶುಗಳೆಂತಲೂ ಎರಡು ತರವು. ಸಾಕಿದ ಪಶುಗಳು ಜನರ ಸೌಖ್ಯಕ್ಕೆ ಕಾರಣವಾಗುತ್ತದೆ; ಆದರೆ ಅಡವೀ ಪಶುಗಳಿಂದ ಜನರಿಗೂ ದನಕರುಗಳಿಗೂ ಬೆಳೆಗಳಿಗೂ ಬಹಳ ತಾಪವಾಗುತ್ತದೆ.

**ಸಾಕಿದ ಪಶುಗಳು.**—ಎತ್ತು, ಆಕಳು, ಎಮ್ಮೆ, ಕೋಣಗಳು, ಕುರಿ, ಆಡುಗಳು, ಇವೇ ಮುಖ್ಯ. ಹೊಲದ ಕೆಲಸವನ್ನೂ, ಬಂಡಿ ನೇಗಿಲು ಮುಂತಾದವುಗಳನ್ನು ಎಳೆಯುವ ಕೆಲಸವನ್ನೂ ಎತ್ತು ಕೋಣಗಳು ಮಾಡುತ್ತವೆ. ಎಮ್ಮೆ, ಆಕಳುಗಳು ಹೈನದ ಸಲುವಾಗಿ ಉಪಯುಕ್ತವಾದವು.

ಕರಾವಳಿಯ ಭೂಮಿಯನ್ನು ಸಾಗುಮಾಡಲಿಕ್ಕೆ ಸಣ್ಣಸಣ್ಣ ಜವಾರಿ ಎತ್ತುಗಳೂ ತೆಂಕಲಿನ ಗೂಳಿಗಳೂ ಸಾಕಾಗುತ್ತವೆ. ಆದರೆ ಕುಚ್ಚೇನಾಡು, ಅಡವೀಸೀಮೆ, ತೋಟದ ಸೀಮೆಗಳ ಭೂಮಿಯನ್ನು ಹರಗಲಿಕ್ಕೂ ಬಂಡಿಗಳನ್ನು ಎಳೆಯಲಿಕ್ಕೂ ಹೆಚ್ಚು ಶಕ್ತಿಯುಳ್ಳ ಬೈಲುಸೀಮೆಯ ಎತ್ತುಗಳೇ ಬೇಕು. ಅದರಿಂದ ಅವುಗಳನ್ನು ಧಾರವಾಡ, ಬೆಳಗಾವಿಗಳ ಕಡೆಯಿಂದ ತರುವರು. ಅವುಗಳಿಗೆ ಹಿಂಡಿ, ಹತ್ತೀಕಾಳು, ಕಡ್ಲಿ, ಹುರಳಿಗಳ ಹೊರತು ನಡೆಯುವದಿಲ್ಲ. ಆದರೆ ಇಲ್ಲಿಯ ಜವಾರಿ ಎತ್ತು ಕೋಣಗಳು ಈ ಜಿಲ್ಹೆಯ ಬಡ ಆಹಾರವಾದ ಹುಲ್ಲು, ಬತ್ತದ ತೌಡುಗಳಿಂದಲೇ ಬೇಕಾದಷ್ಟು ದುಡಿಯುವವು. ಆಕಳ ಹಾಲು, ಮೊಸರು, ತುಪ್ಪ ಇವು ಆರೋಗ್ಯವಾದಾಗ್ಯೂ ಎಮ್ಮೆಯ ಹೈನದಷ್ಟು ಹೆಡಸು (ನೆಣವುಳ್ಳದ್ದು) ಅಲ್ಲ. ಅದರಿಂದ ಎಮ್ಮೆಗಳನ್ನು ಸಾಕುವದೇ ಹೆಚ್ಚು. ಆದರೆ ಹಿಂದೂಧರ್ಮದ ಪ್ರಕಾರ ಅವು ಪೂಜ್ಯಪ್ರಾಣಿಗಳಾದ್ದರಿಂದ ಬ್ರಾಹ್ಮಣರು ಬಹುತರವಾಗಿ ಆಕಳುಗಳನ್ನು ಸಾಕುವರು. ಮತ್ತು ಒಕ್ಕಲಿಗರು ಹೋರಿಗಳ ಸಲುವಾಗಿ ಆಕಳುಗಳನ್ನು ಜೋಪಾನ ಮಾಡುವರು. ಕರಾವಳಿಗಿಂತಲೂ ಉಳಿದ ಭಾಗಗಳಲ್ಲಿ ಈ ಪಶುಗಳನ್ನು ಸಾಕುವದಕ್ಕೆ ಅನುಕೂಲ ಬಹಳ. ಈ ಜಿಲ್ಹೆಗೆ ಆಲೂರು, ಹಾನಗಲ್ಲು, ಬ್ಯಾಡಗಿಗಳಿಂದ ಎಮ್ಮೆಗಳು ಬರುವವು.

ಕಾನಡಾ ಜಿಲ್ಹೆಯಲ್ಲಿ ಕುರಿಗಳನ್ನು ಸಾಕುವದು ಕಡಿಮೆ, ಆದಾಗ್ಯೂ

ಮುಸಲ್ಮಾನರು ವಾಸಿಸುವಲ್ಲಿ ಹುಲ್ಲು, ಎಲೆ, ಮೇವುಗಳ ಅನುಕೂಲತೆ ಇದ್ದರೆ ಮಾಂಸದ ಸಲುವಾಗಿ ಅವುಗಳನ್ನು ಸಾಕುವರು. ಇವುಗಳ ಹಾಲು ಸಣ್ಣ ಹುಡುಗರಿಗೆ ಬಹು ಆರೋಗ್ಯವು.

**ವನ್ಯಪಶುಗಳು.**— ಹುಲಿಗಳು ಸುಪಾ, ಯಲ್ಲಾಪುರ, ಸಿರಸೀ ತಾಲೂಕುಗಳ ಅಡವಿಗಳಲ್ಲಿ ಬಹಳ. ಕುಮಟಾ, ಹೊನ್ನಾವರ ತಾಲೂಕುಗಳ ಯಾಣ, ಕತ್ತಗಾಲು, ಸಾಂತಗಲ್ಲು, ಚಂದಾವರ ಮುಂತಾದ ಅಡವಿಗಳಲ್ಲಿಯೂ ಉಂಟು. ದೊಡ್ಡ ಹುಲಿಯು ಹದಿನಾರು ಮೆಟ್ಟು ಉದ್ದ ಇರುವದು. ಇದನ್ನು ನೋಡಿದರೆ ಮನುಷ್ಯನು ಹೆದರಿ ಎದೆ ಒಡಕೊಳ್ಳುವನು. ತಪ್ಪಿಸಿಕೊಂಡು ಹೋಗುವದೂ ಕಷ್ಟ. ಅದು ಎಮ್ಮೆ ಕೋಣಗಳನ್ನು ಸಹ ಹೊತ್ತುಕೊಂಡು ಹೋಗುವದು. ಇತ್ತಲಾಗಿ ಸರಕಾರದವರು ಇದರ ಬೇಟೆಗೆ ಉತ್ತೇಜನವನ್ನು ಕೊಟ್ಟಿರುವರು. ಸತ್ತ ಮೇಲೆ ಇದರ ಚರ್ಮ, ಉಗುರುಗಳನ್ನು ಮನುಷ್ಯರು ಉಪಯೋಗಿಸುವರು. ಇದರ ಚರ್ಮವು ಮೆತ್ತಗಿದ್ದು ಪರಿಶುದ್ಧವೆಂದು ಎಣಿಸಲ್ಪಡುತ್ತದೆ. ಉಗುರುಗಳಿಗೆ ಚಿನ್ನ ಬೆಳ್ಳಿಗಳನ್ನು ಕೂಡಿಸಿ ಸಣ್ಣ ಮಕ್ಕಳ ಆಭರಣವನ್ನು ಮಾಡುವರು.

ಹಂದಿ.—ಇವು ಹಿಂಡುಗಟ್ಟಲೆ ರಾತ್ರಿಯಲ್ಲಿ ಹೊರಬಿದ್ದು ಬತ್ತ, ಕಬ್ಬುಗಳನ್ನು ಹಾಳುಮಾಡುವವು. ತಾವಾಗಿ ಮನುಷ್ಯರ ಗೊಡವೆಗೆ ಹೋಗುವದಿಲ್ಲ. ಆದರೂ ಓಡಿಹೋಗುವಾಗ ಇವುಗಳ ಚರ್ಮವು ಸೋಂಕಿದರೂ ಮನುಷ್ಯನು ಕಡಕೊಂಡು ಬೀಳುವನು; ಇಷ್ಟು ಬಲವುಳ್ಳವು. ಇವು ಕುಚ್ಚೇನಾಡುಗಳಲ್ಲಿ ಸಹ ಅವೆ. ಇವುಗಳ ಕೂದಲು ಬಿರಸು ಇರುವದರಿಂದ ಅವುಗಳನ್ನು ಕಟ್ಟಿ ಅಕ್ಕಸಾಲಿಗರು ಆಭರಣಗಳನ್ನು ತೊಳೆಯಲಿಕ್ಕೆ "ವರಾಹಕೇಶ" ವನ್ನು ಬ್ರಶ್‌ದಂತೆ ಉಪಯೋಗಿಸುವರು.

ಚಿಗರಿ.— ಇವು ಸುಂದರ ಪ್ರಾಣಿಗಳು. ಇವುಗಳನ್ನು ಹುಲಿಗಳು ಹಿಡಿದು ತಿನ್ನುವವು. ಮನುಷ್ಯರು ಇವುಗಳನ್ನು ಸೊಗಸಿಗಾಗಿ ಮನೆಯಲ್ಲಿ ಸಾಕುವದುಂಟು. ಸುಂದರವಾದ ಕೋಡುಗಳುಳ್ಳ ಇದರ ಮುಖವನ್ನು ಚಂದಕ್ಕಾಗಿ ಶ್ರೀಮಂತರು ಗೋಡೆಗೆ ಹಚ್ಚುವರು. ಇವು ಎಲ್ಲ ಸಣ್ಣ ಅಡವಿಗಳಲ್ಲಿ ಸಹ ಇರುವವು.

ಕತ್ತಗ (ಹೊನಿಗ್ಯಾ)— ಇದರ ಒಂದು ಕಾಲು ಕುಂಟ ಇರುವದು. ಹೋಲಿಕೆಯಲ್ಲಿ ಹುಲಿಯಂತೆ ಕಾಣುವದು. ದನಕರುಗಳನ್ನು ಅನಾಯಾಸವಾಗಿ ಎಳೆದೊಯ್ಯುವದು.

ನರಿ.— ಇವು ನಾಯಿಯ ಜಾತಿಯ ಪ್ರಾಣಿಗಳು. ಇವುಗಳ ಬುದ್ಧಿ ಕುಶಲ, ಶರೀರದಲ್ಲಿ ಚಪಲ, ಸಣ್ಣಸಣ್ಣ ಗಿಡಗಳ ಮರೆಯಲ್ಲಿ ವಾಸಿಸುವವು. ರಾತ್ರಿಯಲ್ಲಿ ಹೊರಬಿದ್ದು ಪಲ್ಲೆಕಾಯಿ ಕಬ್ಬುಗಳನ್ನು ತಿಂದು ಹೋಗುವವು.

ಮಂಗಕೋಡಗಗಳು.— ಇವು ಸಾಧಾರಣವಾಗಿ ಮನುಷ್ಯರಂತೆ ಕಾಣುವವು. ಇವು ನೂರಾರು ಒಟ್ಟಾಗಿ ಬಾಳೇಕಾಯಿ, ಹುಣಸೆ, ನೆಲ್ಲಿ, ಪಲ್ಲೆಕಾಯಿಗಳನ್ನು ತಿಂದು ಹಾಳುಮಾಡುವವು. ಆದಕಾರಣ ಅಡವೀಸೀಮೆ ಕುಚ್ಚೇನಾಡುಗಳ ರೈತರು ಬಂದೂಕುಗಳಿಂದ ಇವುಗಳನ್ನು ಕೊಲ್ಲುವರು. ಆದರೆ ಬೈಲಸೀಮೆಯ ಜನರು ಇವು ಹನುಮಂತನ ವಂಶದವೆಂಬ ಭಾವನೆಯಿಂದ ಇವುಗಳನ್ನು ಕೊಲ್ಲುವದಿಲ್ಲ, ಹಾಗೇ ಅಂಜಿಸುವರು.

**ಖನಿಜಗಳು.**— ಈ ಜಿಲ್ಹೆಯಲ್ಲಿ ಚಿನ್ನ, ಬೆಳ್ಳಿ, ತಾಮ್ರ ಮುಂತಾದವುಗಳ ಶೋಧವು ಇನ್ನೂ ಆಗಿರುವದಿಲ್ಲ. ಬಿಣಗೆ ಗುಡ್ಡದ ಕಲ್ಲುಗಳು ಇಮಾರತಿಯ ಗೋಡೆ ಕಂಬಗಳಿಗೂ ರಾಮನಗುಂಡಿಯ (ಧಾರೇಶ್ವರ) ಶಿಲೆಗಳು ದೊಡ್ಡ ದೊಡ್ಡ ದೇವರ ಪ್ರಾಣಪೀಠ, ಮೂರ್ತಿ, ದೀಪಕಲ್ಲು, ಒರಳಕಲ್ಲು, ಕಲಬತ್ತು ಇವುಗಳನ್ನು ಮಾಡುವದಕ್ಕೂ ಪ್ರಸಿದ್ಧವಾಗಿವೆ. ಯಾಣದಲ್ಲಿ ಹೆಸರಾದ ಸುಣ್ಣದ ಕಲ್ಲುಗಳು ಸಿಗುತ್ತವೆ. ಅವುಗಳಿಂದ ಸುಣ್ಣವನ್ನು ಮಾಡುವರು. ಸಹ್ಯಾದ್ರಿಯ ಕೆಲವು ಭಾಗಗಳಲ್ಲಿಯೂ ಹೊನ್ನಾವರದ ಹತ್ತರಿರುವ ಬಸವರಾಜದುರ್ಗವೆಂಬ ನಡುಗಡ್ಡೆಯಲ್ಲಿಯೂ ಕಬ್ಬಿಣದ ಅದರುಗಳು ವಿಪುಲವಾಗಿ ದೊರೆಯುತ್ತವೆ.

ಸಾಣೇಕಟ್ಟೆಯಲ್ಲಿ ಅಘನಾಶಿನೀ ದಂಡೆಯ ತಗ್ಗುಭೂಮಿಯಲ್ಲಿ ಸಮುದ್ರದ ಉಪ್ಪುನೀರನ್ನು ಒಣಗಿಸಿ, ಉಪ್ಪು ಮಾಡುವರು. ಇಲ್ಲಿಯ ಒಂದೇ ಕಾರಖಾನೆಯಿಂದ ಆಗುವ ಉಪ್ಪು ಇಡೀ ಜಿಲ್ಹೆಗೆ ಪೂರೈಸುತ್ತದೆ. ಇಲ್ಲಿ ವರ್ಷಕ್ಕೆ ೧೫೪೬೭೭ ಮಣ ಉಪ್ಪು ತಯಾರಾಗುವದು.

**ನದಿ ಸಮುದ್ರಗಳ ಬೆಳೆ.**— ನದಿಯಲ್ಲಿಯೂ ಸಮುದ್ರದಲ್ಲಿಯೂ ನಾನಾ ಜಾತಿಯ ಮೀನುಗಳು ಸಿಗುತ್ತವೆ. ಇಲ್ಲಿ ಇವು ಬಡಜನರ ಮುಖ್ಯ ಆಹಾರವಾಗಿವೆ. ಬೇಲೆಕೇರಿ, ತದಡಿ, ಗಂಗಾವಳಿ, ಹಳ್ಕಾರ, ವನ್ನಳ್ಳಿ, ಹೊನ್ನಾವರ, ಕಾಸರಕೋಡ ಇವೆಲ್ಲ ಊರುಗಳಿಂದ ಘಟ್ಟದ ಕೆಳಗೂ ಮೇಲೂ ಮೀನುಗಳು ಪೂರೈಸಲ್ಪಡುತ್ತವೆ. ಉಪ್ಪಿನಲ್ಲಿ ಒಣಗಿಸಿದ ಮೀನುಗಳನ್ನು ಧಾರವಾಡ, ಬೆಳಗಾವ, ಹುಬ್ಬಳ್ಳಿ, ಮೈಸೂರು ಮುಂತಾದ ಅನೇಕ ಸ್ಥಳಗಳಿಗೆ ಇಲ್ಲಿಂದ ಕಳಿಸುವರು.

ಕಾರವಾರದ ಬಳಿಯಲ್ಲಿ ಸಿಗುವ ಸಿಂಪುಗಳನ್ನು ಸುಟ್ಟು ಉತ್ತಮವಾದ ಸುಣ್ಣವನ್ನು ಮಾಡುತ್ತಾರೆ.

ಈ ಜಿಲ್ಹೆಯಲ್ಲಿ ಭೂಮಿಯ ಒಡೆಯರು ಬಹುಶಃ ಬ್ರಾಹ್ಮಣರು. ನವಾಯಿತರಿಗೂ, ಲಿಂಗಾಯಿತರಿಗೂ ಕೆಲವು ಭೂಮಿಗಳುಂಟು. ರೈತರಲ್ಲಿ ಎರಡು ವಿಧವು. ವಂಶಪರಂಪರೆಯಾಗಿ ಭೂಮಿಯನ್ನು ಮಾಡುವ ಹಕ್ಕು ಪಡೆದವರಿಗೆ ಮೂಲಗೇಣಿಗಾರರೆನ್ನುವರು. ೩, ೪ ವರ್ಷದ ಪೂರ್ತಿಗೆ ಮಾಡುವವರಿಗೆ ಚಾಲಗೇಣಿಗಾರರೆನ್ನುವರು. ಈ ಬಗೆಯಾಗಿ ಭೂಮಿಯನ್ನು ಮಾಡುವ ಕುಲಗಳು ಯಾವವೆಂದರೆ:— ಹಳೇಪೈಕರು, ಕೊಮಾರಪೈಕರು, ನಾಡೋರರು, ಕುಣಬಿಗಳು, ಮುಸಲ್ಮಾನರು.

# ೭ನೆಯ ಪ್ರಕರಣ.

## ಜನಸಂಖ್ಯೆ.

ಈ ಜಿಲ್ಹೆಯಲ್ಲಿ ೧೮೯೧ರಲ್ಲಿ ೪,೪೬,೪೫೩ ಜನರಿದ್ದರು. ಈ ಜನಸಂಖ್ಯೆಯು ಬೆಳೆದು ೧೯೦೧ರಲ್ಲಿ ೪,೫೪,೪೯೦ ಜನಸಂಖ್ಯೆಯಾಯಿತು. ಮುಂದೆ ೧೯೧೧ ರಲ್ಲಿ ಅದು ಮೊದಲಿಗಿಂತ ಕಡಿಮೆಯಾಗಿ ೪,೩೦,೫೪೮ ಜನಸಂಖ್ಯೆಯಾಯಿತು. ಹೀಗೆ ಜನಸಂಖ್ಯೆಯು ಕಡಿಮೆಯಾಗಲಿಕ್ಕೆ ಮುಖ್ಯವಾಗಿ ೩ ಕಾರಣಗಳಿವೆ. (೧) ಈ ಜಿಲ್ಹೆಯ ಜನರಲ್ಲಿ ವ್ಯಾಪಾರ ಉದ್ಯೋಗ ನೌಕರಿ ಮುಂತಾದವುಗಳನ್ನು ಮಾಡುವ ಇಚ್ಛೆಯುಂಟಾದ್ದರಿಂದ ಎಷ್ಟೋ ಜನರು ಈ ಜಿಲ್ಹೆಯನ್ನು ಬಿಟ್ಟು ಬೇರೆ ಕಡೆಗೆ ಹೋಗಿರುವರು. (೨) ಅಡವೀಸೀಮೆ ಕುಚ್ಚೇನಾಡಿನಲ್ಲಿ ಮಲೇರಿಯಾ ಜ್ವರದಿಂದ ಮರಣದ ಸಂಖ್ಯೆಯು ಹೆಚ್ಚಾಗಿರುವದು. (೩) ಸಿರಸಿ ಹಲ್ಯಾಳಗಳಲ್ಲಿ ಇತ್ತಲಾಗಿ ಪ್ಲೇಗು ಪ್ರಾರಂಭವಾಗಿರುವದು. ಈ ಜಿಲ್ಹೆಯ ಜನಸಂಖ್ಯೆಯು ಚೌರಸ ಮೈಲಿಗೆ ೧೦೯ರಂತೆ ಬೀಳುವದು; ಅದೇ ಹುಬ್ಬಳ್ಳಿ ತಾಲೂಕಿನಲ್ಲಿ ೩೯೫ ಮತ್ತು ಧಾರವಾಡ ಜಿಲ್ಹೆಯಲ್ಲಿ ೨೨೩ ಜನಸಂಖ್ಯೆಯಿರುವದು. ಇಷ್ಟು ಕಡಿಮೆಯಾಗುವ ಕಾರಣವೇನೆಂದರೆ—ಇಲ್ಲಿ ಅಡವಿಯ ಕ್ಷೇತ್ರವೇ ವಿಶೇಷ. ಅಲ್ಲಿ ಜನವಸತಿಯು ತೀರಾ ಕಡಿಮೆ.

ಐದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಊರು ಪಟ್ಟಣವೆನಿಸುವದು. ಕಾನಡಾ ಜಿಲ್ಹೆಯ ಮುಖ್ಯ ಪಟ್ಟಣಗಳ ಜನಸಂಖ್ಯೆಯು ಕೆಳಗೆ ಬರೆದ ಪ್ರಕಾರ ಇರುವದು.

| | ಪಟ್ಟಣಗಳು | ೧೯೦೧ರಲ್ಲಿ | ೧೯೧೧ರಲ್ಲಿ |
|---|---|---|---|
| ೧. | ಕಾರವಾರ | ೧೬೮೪೭ | ೧೮೧೫೯ |
| ೨. | ಕುಮಟಾ | ೧೦೮೧೮ | ೧೦೩೪೩ |
| ೩. | ಹೊನ್ನಾವರ | ೬೯೨೯ | ೭೩೨೩ |
| ೪. | ಭಟಕಳ | ೬೯೬೪ | ೭೧೪೧ |
| ೫. | ಸಿರಸಿ | ೬೧೯೬ | ೬೩೭೬ |
| ೬. | ಹಲ್ಯಾಳ | ೪೯೯೨ | ೫೫೦೫ |
| ೭. | ಗೋಕರ್ಣ | ೪೮೩೪ | ೮೪೮೧ |
| ೮. | ಉಳವಿ | — | ೨೧೫ |

ಕಾನಡಾ ಜಿಲ್ಹೆಯೊಳಗಿನ ತಾಲೂಕವಾರ, ಕ್ಷೇತ್ರಫಲ, ಜನಸಂಖ್ಯೆ ಮುಂತಾದವುಗಳ ಮಾಹಿತಿ.—

| ಅನುಕ್ರಮ ನಂಬರು. | ತಾಲೂಕುಗಳ ಹೆಸರು. | ಕ್ಷೇತ್ರಫಲ ಚೌ. ಮೈಲು | ಜನಸಂಖ್ಯೆ ೧೯೦೧ | ಜನಸಂಖ್ಯೆ ೧೯೧೧ | ಪಟ್ಟಣ. | ಹಳ್ಳಿ. |
|---|---|---|---|---|---|---|
| ೧. | ಕಾರವಾರ | ೨೮೧ | ೫೮೪೬೦ | ೫೯೬೬೩ | ೧ | ೫೩ |
| ೨. | ಅಂಕೋಲಾ | ೩೭೫ | ೩೯೬೬೫ | ೩೯೦೦೦ | ೦ | ೯೦ |
| ೩. | ಕುಮಟಾ | ೨೨೪ | ೬೬೦೪೦ | ೬೪೪೭೬ | ೨ | ೧೦೮ |
| ೪. | ಹೊನ್ನಾವರ ಭಟಕಳ ಪೇಠಾ ಸಹಿತ | ೪೨೬ | ೬೨೪೦೨<br>೩೭೬೬೬ | ೬೧೯೬೨<br>೩೮೪೫೮ | ೧ | ೫೮ |
| ೫. | ಸಿದ್ದಾಪುರ | ೩೩೨ | ೪೧೩೪೨ | ೩೭೪೭೯ | ೦ | ೧೯೫ |
| ೬. | ಸಿರಸಿ | ೪೯೧ | ೫೩೨೩೨ | ೪೭೮೩೩ | ೧ | ೨೪೪ |
| ೭. | ಯಲ್ಲಾಪುರ ಮುಂಡಗೋಡ ಪೇಠಾ ಸಹಿತ | ೭೬೦ | ೨೨೮೧೪<br>೧೬೭೩೯ | ೨೦೩೧೪<br>೧೪೩೯೬ | ೦<br>೦ | ೧೧೭<br>೭೧ |
| ೮. | ಹಲ್ಯಾಳ ಸುಪಾ | ೧೦೫೭ | ೩೫೧೨೨<br>೨೧೦೦೮ | ೨೮೩೫೬<br>೧೮೬೧೧ | ೧<br>೦ | ೧೦೦<br>೧೨೯ |

ಕಾನಡಾ ಜಿಲ್ಹೆಯ ಪಟ್ಟಣಗಳ ಜನಸಂಖ್ಯೆಯು ಬಹಳ ಕಡಿಮೆ ಇರುವದು. ಪಟ್ಟಣಗಳೂ ಅದೇ ಪ್ರಮಾಣದಲ್ಲಿ ಕಡಿಮೆ ಇರುವವು. ಯಾಕಂದರೆ ಇಲ್ಲಿ ಕೃಷಿಕರ್ಮವೇ ಮುಖ್ಯ ಹೋರೆಯಾಗಿದೆ. ಜನರು ಹಳ್ಳಿಗಳಲ್ಲಿದ್ದು ಹೊಲ ತೋಟಗಳನ್ನು ಸಾಗುಮಾಡಿಕೊಳ್ಳಬೇಕಾಗುತ್ತದೆ. ಅಂದ ಮೇಲೆ ಪಟ್ಟಣಗಳಾಗುವದೂ ಜನಸಂಖ್ಯೆ ಬೆಳೆಯುವದೂ ಹೇಗೆ? ಈ ಜಿಲ್ಹೆಯಲ್ಲಿರುವ ಮುಖ್ಯ ಪಟ್ಟಣಗಳು ಆರೇ ಸರಿ. ಅವುಗಳಲ್ಲಿಯೂ ಕಾರಖಾನೆ, ಕೈಗಾರಿಕೆಗಳು ಏನೂ ಇರುವದಿಲ್ಲ. ಈ ಆರು ಪಟ್ಟಣಗಳೊಳಗೂ ಭಟಕಳ, ಹಲ್ಯಾಳ ಇವುಗಳಲ್ಲಿ ವ್ಯಾಪಾರವು ಬಹಳ ಕಡಿಮೆ, ಕಾರವಾರ ಹೊನ್ನಾವರಗಳಲ್ಲಿ ಸಾಧಾರಣ, ಕುಮಟಾ ಸಿರಸಿಗಳಲ್ಲಿ ತಕ್ಕಮಟ್ಟಿಗೆ ಇರುವದು.

ಕಾರವಾರವು ಜಿಲ್ಹೆಯ ರಾಜಧಾನಿಯು; ಮುಂಬಯಿ ಇಲಾಖೆಯಲ್ಲಿ ಮುಂಬಯಿಯ ಹೊರತಾಗಿ ಪಶ್ಚಿಮ ದಂಡೆಯಲ್ಲಿ ಸುರಕ್ಷಿತವಾದ ಬಂದರವು ಇದೇ ಆಗಿದ್ದು ತಾಲೂಕಿನಲ್ಲಿ ವ್ಯಾಪಾರಕ್ಕೆ ಮಧ್ಯಸ್ಥಳವಾಗಿರುವದು. ಅದರಿಂದ ಇಲ್ಲಿ ೧೫ ಸಾವಿರಕ್ಕೆ ಮಿಾರಿ ಜನಸಂಖ್ಯೆ ಇರುವದು. ಕುಮಟಾ, ಸಿರಸಿಗಳು ಬೈಲುಸೀಮೆಯಿಂದ ಸರಕು ಮುಂಬಯಿಗೆ ಹೋಗುವ ಮುಖ್ಯ ಮಾರ್ಗದಲ್ಲಿರುವದರಿಂದ ವ್ಯಾಪಾರಕ್ಕಾಗಿ ಹೆಚ್ಚು ಹೆಸರಾಗಿವೆ. ಕುಮಟಾದ ಜನಸಂಖ್ಯೆಯು ೧೦ಸಾವಿರಕ್ಕಿಂತ ಹೆಚ್ಚು ಇರುವದು. ಸಿರಸಿಯಲ್ಲಿ ಆರು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವದು. ಹೊನ್ನಾವರವು ಬಹು ಪುರಾತನ ರಾಜಧಾನಿಯು. ಈಗ ೭, ೮ ಸಾವಿರ ಜನರು ಇರುವರು. ಎಲ್ಲ ಕಡೆಯಿಂದ ಜನರೂ ಸರಕುಗಳೂ ಬರಹೋಗಲಿಕ್ಕೆ ಅನುಕೂಲತೆಯು ಸದ್ಯಕ್ಕೆ ಕುಮಟಾ, ಸಿರಸಿಗಳ ಹೊರತು ಬೇರೆ ಪಟ್ಟಣಕ್ಕೆ ಇಲ್ಲ. ಆದರೆ ಸಿರಸಿ ಪಟ್ಟಣಕ್ಕೆ ಹಾವೇರಿ ಹುಬ್ಬಳ್ಳಿ, ಧಾರವಾಡ ಮುಂತಾದ ಬೈಲುಸೀಮೆಯು ಹೆಚ್ಚು ಸಮಿಾಪವಾಗಿ ಜನರ ಸಂಬಂಧವು ಹೆಚ್ಚಾದದರಿಂದ ಇತ್ತಲಾಗಿ ಪ್ಲೇಗರೋಗವು ಪ್ರಾದುರ್ಭಾವವಾಗಿ, ಎರಡು ವರ್ಷಕ್ಕೊಮ್ಮೆಯಾದರೂ ಊರು ಬಿಡಿಸುತ್ತದೆ. ಅದರಿಂದ ಇದರ ಬೆಳವಣಿಗೆಗೆ ಕುಂದು ಬಂದಿರುತ್ತದೆ. ಗೋವೆಯ ಲೋಹಮಾರ್ಗವು ಮಾರ್ಮಾಗೋವಾಕ್ಕೆ ಬರುವ ಮೊದಲು ಅಂದರೆ ಸುಮಾರು ೩೦, ೪೦ ವರ್ಷಗಳ ಹಿಂದೆ, ಕುಮಟಾ ಪಟ್ಟಣವು ದಕ್ಷಿಣ ಮಹಾರಾಷ್ಟ್ರದಲ್ಲಿ ಹೆಸರಾಗಿತ್ತು. ಈಗಲಾದರೂ ಜವಾರೀ ಹತ್ತಿಗೆ ಕುಮಟಾ ಹತ್ತಿಯೆನ್ನುವರು.

ಈ ಜಿಲ್ಹೆಯು ಒಟ್ಟಿನ ಮೇಲೆ ಬಡ ಜಿಲ್ಹೆಯು, ಕಾರಣ ಪಟ್ಟಣಗಳು ಕಡಿಮೆ. ಇದ್ದವುಗಳ ಸೌಂದರ್ಯವೂ ಅಷ್ಟಕ್ಕಷ್ಟೇ ಸರಿ; ಆದಾಗ್ಯೂ ಮೇಲಂತಸ್ತಿನ ಮನೆಗಳು ತಕ್ಕಮಟ್ಟಿಗೆ ಇದ್ದು, ಮೇಲೆ ಹಂಚಿನ ಛಾವಣಿ ಇರುವದು. ಕುಮಟಾ, ಹೊನ್ನಾವರ, ಕಾರವಾರ ಪಟ್ಟಣಗಳು ತಕ್ಕಮಟ್ಟಿಗೆ ಚಂದ ಕಾಣುತ್ತವೆ. ಸಿರಸೀ ಪಟ್ಟಣವು ಸಾಂಪತ್ತಿಕ ಸ್ಥಿತಿಯಿಂದಲೂ ಸೌಂದರ್ಯದಿಂದಲೂ ಎಲ್ಲಕ್ಕೂ ಮೇಲಾಗಿರುವದು. ಪಟ್ಟಣಗಳ ಮನೆಗಳು ತಕ್ಕಮಟ್ಟಿಗೆ ಹವೆ, ಬೆಳಕು, ಗಾಳಿಗಳಿಗೆ ಅನುಕೂಲವಾಗಿಯೂ ಸೌಂದರ್ಯವರ್ಧಕವಾಗಿಯೂ ಇರುವವು. ಮಳೆಯು ಹೆಚ್ಚು ಬೀಳುವದರಿಂದ ಛಾವಣಿಗಳು ಹಂಚಿನವೇ ಇರುವವು.

ಹಳ್ಳಿಯ ಮನೆಗಳು ಮಾತ್ರ ಕತ್ತಲೆಯ ಕೋಣೆಗಳಂತೆ ಇರುವವು.

ಛಾವಣಿಗಳು ಬಹುತರ ಹುಲ್ಲಿನವು, ಇಲ್ಲವೆ ಅಡಿಕೇ ಸೋಗೆಯವು, ಇಲ್ಲವೆ ತೆಂಗಿನ ಗರಿಗಳವು; ಮಾಳಿಗೆಗಳು ಅಪರೂಪ. ಮೊದಲು ಕಳ್ಳರ ಭಯವು ಹೆಚ್ಚಾಗಿದ್ದದರಿಂದ ಶ್ರೀಮಂತರು ಸಹ ತಮ್ಮ ಮನೆಗಳಿಗೆ ಕಿಡಿಕೆಗಳನ್ನು ಹಚ್ಚುತ್ತಿದ್ದಿಲ್ಲ. ಆದರೆ ಇತ್ತಲಾಗಿ ಇಂಗ್ಲಿಷರ ರಾಜ್ಯಕಾರಭಾರದಲ್ಲಿ ಅಂಥ ಭೀತಿಯು ಅಡಗಿಹೋಗಿರುವದರಿಂದಲೂ ವಿದ್ಯೆಯ ಸಂಸ್ಕಾರದಿಂದ ಆರೋಗ್ಯದ ಮಹತ್ವವು ಎಲ್ಲರಿಗೂ ತಿಳಿದದರಿಂದಲೂ ಘಟ್ಟದ ಕೆಳಗಿನ ಕರಾವಳಿ ಪ್ರಾಂತದಲ್ಲಿ ಬಹುಶಃ ಸುಧಾರಿಸಿದ ರೀತಿಯಿಂದ ಮನೆಗಳನ್ನು ಕಟ್ಟುತ್ತಿರುವರು. ಒಟ್ಟಿನ ಮೇಲೆ ಕುಚ್ಚೇನಾಡು, ಅಡವೀಸೀಮೆ, ತೋಟದ ಸೀಮೆಗಳೇ ಕ್ಷೇತ್ರದ ಮಾನದಿಂದ ವಿಸ್ತಾರವಾಗಿದ್ದು ಅಲ್ಲಿಯ ಸಣ್ಣಸಣ್ಣ ಊರುಗಳು ಒಂದನ್ನೊಂದು ಬಿಟ್ಟು ಬಹಳ ದೂರ ದೂರ ಇರುವ ಕಾರಣ, ಅಲ್ಲಿಯ ಜನರನ್ನು ಸುಧಾರಿಸುವದು ಬಹು ಕಷ್ಟವಾಗಿದೆ.

# ೭ನೆಯ ಪ್ರಕರಣ.

## ಜನರೂ, ಜಾತಿಗಳೂ, ಉದ್ಯೋಗಗಳೂ.

ಕಾನಡಾ ಜಿಲ್ಹೆಯಲ್ಲಿ ಅನೇಕ ಧರ್ಮದ ಜನರು ವಾಸಿಸುವರು. ಅವರಲ್ಲಿ ಹಿಂದುಗಳು ೧೦೦ಕ್ಕೆ ೮೯ರಂತೆ ಇರುವರು. ಮುಸಲ್ಮಾನರು ೬.೫, ಕ್ರಿಶ್ಚಿಯನ್ನರು ೩.೮, ಉಳಿದವರು ಅತಿಸ್ವಲ್ಪ. ಅವರಲ್ಲಿ ಜೈನರು ಒಟ್ಟು ೧೨೫೧ ಜನರಿರುವರು.

ಹಿಂದುಗಳಲ್ಲಿ ಅನೇಕ ಜಾತಿಗಳುಂಟು. ಪ್ರಾಚೀನ ಕಾಲದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕೇ ಜಾತಿಗಳು ಮುಖ್ಯವಾಗಿದ್ದವು. ಬರಬರುತ್ತ ಬಹಳ ಭೇದಗಳಾಗಿ ಈಗ ಅಸಂಖ್ಯ ಜಾತಿಗಳಾಗಿವೆ. ಒಂದೇ ಧರ್ಮದವರಲ್ಲಿಯೂ ಅನೇಕ ಜಾತಿಗಳು ಅವೆ.

ಕೆಲವು ಜಾತಿಗಳು ಉದ್ಯೋಗದಿಂದ ಬಂದಿರುತ್ತವೆ; ಅವುಗಳಲ್ಲಿ ಮುಖ್ಯ ಮುಖ್ಯ ಜಾತಿಗಳನ್ನು ಕುರಿತು ವಿಚಾರಿಸುವ.

ಹವಿಕ ಬ್ರಾಹ್ಮಣರು.—ಇವರು ಕಾನಡಾ ಜಿಲ್ಹೆಯಲ್ಲಿ ೮೫೨೨೫ ಮಂದಿ ಇರುವರು. ಮಯೂರವರ್ಮರಾಜನ ತಂದೆಯಾದ ಶಕವರ್ಮನು ೩ನೇ ಶತಕದಲ್ಲಿ ಇವರ ಕೆಲವು ಕುಟುಂಬಗಳನ್ನು ಅಹಿಛತ್ರ (ಮಲಬಾರ)ವೆಂಬ ಪಟ್ಟಣದಿಂದ ತಂದು ಈ ಜಿಲ್ಹೆಯಲ್ಲಿ ಇಟ್ಟುಕೊಂಡಿದ್ದನು. ಇವರು ದಕ್ಷಿಣ-ಉತ್ತರವೆಂಬ ಎರಡೂ ಕಾನಡಾ ಜಿಲ್ಹೆಗಳಲ್ಲಿ ಇರುವರು. ಹಲ್ಯಾಳ, ಕಾರವಾರ ತಾಲೂಕುಗಳನ್ನು ಬಿಟ್ಟು ಉಳಿದ ಎಲ್ಲ ತಾಲೂಕುಗಳಲ್ಲಿ ಇವರದೇ ಪ್ರಾಬಲ್ಯ. ಆದಕಾರಣ ಇವರು ಸೋಮಾರಿಗಳಾಗಿ ಸ್ವಸ್ಥ ಉಂಡು ತಿಂದು, ತಮ್ಮ ಭೂಮಿಗಳ ಸಾಗುವಳಿಯನ್ನು ಲಕ್ಷಿಸದೆ ಇರುತ್ತಿದ್ದದರಿಂದ ಎಷ್ಟೋ ಜನರು ಭಿಕ್ಷುಕರಾದರು. ಆದಾಗ್ಯೂ ಪ್ರಾಚೀನಕಾಲದಿಂದ ಅಗ್ರಹಾರದಿಂದಲೇ ಉಪಜೀವಿಸುತ್ತಿದ್ದದರಿಂದ ಅತಿಥಿಗಳನ್ನು ಸತ್ಕರಿಸುವದೊಂದು ದೊಡ್ಡ ಗುಣವು ಅವರಲ್ಲಿ ಇನ್ನೂ ಚನ್ನಾಗಿ ಉಳಿದದೆ. ಕುಚ್ಚೇನಾಡು, ಅಡವೀಸೀಮೆಗಳಲ್ಲಿ ಈ ಜನರು ತಮ್ಮ ಕೃಷಿಕರ್ಮವನ್ನು ಬಿಡಲಿಲ್ಲ. ಆರ್ಯವಂಶೀಯರಲ್ಲಿ ಇವರು ಮಾತ್ರ ಮೂಲ ಉದ್ಯೋಗವನ್ನು ಕಾಯ್ದುಕೊಂಡಿರುವರು. ಇತರ ಎಲ್ಲ ಬ್ರಾಹ್ಮಣರು ಬೇರೆ ಬೇರೆ ಉದ್ಯೋಗಗಳಿಂದ ಭೂಸಂಪಾದನೆ ಮಾಡಿಕೊಂಡಾಗ್ಯೂ ಸ್ವತಃ ಸಾಗುವಳಿ ಮಾಡುವದಿಲ್ಲ. ಹವಿಕರು ವಿಶೇಷವಾಗಿ

ಹಳ್ಳಿಗಳಲ್ಲಿ ವಾಸಿಸುವರು. ಇವರಿಗೆ ಧೈರ್ಯ, ಸಾಹಸ, ಕಾಯಿದೆಗಳ ಜ್ಞಾನವು ಇಲ್ಲ. ಇವರ ಆಚಾರ ವಿಚಾರಗಳು ಇನ್ನೂ ಪುರಾತನ ಸ್ಥಿತಿಯಲ್ಲಿಯೇ ಅವೆ. ಬಹುಕಾಲದಿಂದ ಇಂದಿನ ವರೆಗೂ ಲಗ್ನಾದಿಕಾರ್ಯಗಳಲ್ಲಿ ದುಂದುಗಾರಿಕೆ ಬಹಳ.

ಇವರು ಅದ್ವೈತ ಮತದವರು; ಹಣೆಗೆ ಭಸ್ಮವನ್ನು ಹಚ್ಚುವರು. ಆದರೆ ವೈಷ್ಣವ ದೇವರನ್ನು ತಿರಸ್ಕರಿಸುವದಿಲ್ಲ. ಎಲ್ಲ ದೇವತೆಗಳನ್ನೂ ಆರಾಧಿಸುವರು. ಇವರಿಗೂ ಉಳಿದ ಗೌಡಸಾರಸ್ವತಾದಿ ಬ್ರಾಹ್ಮಣರಿಗೂ ಅನ್ನವ್ಯವಹಾರವಿಲ್ಲ. ಆದರೆ ಕೊಂಕಣಸ್ಥ, ದೇಶಸ್ಥ, ಕರ್ಹಾಡೆ ಬ್ರಾಹ್ಮಣರ ಕೂಡ ಊಟ ಉಪಚಾರಗಳು ನಡೆಯುತ್ತವೆ. ಶರೀರಸಂಬಂಧ ಮಾತ್ರ ಆಗುವದಿಲ್ಲ.

ಇವರಲ್ಲಿ ಭಟ್ಟರೂ (ವೈದಿಕರು), ಹೆಗಡೆಗಳೂ (ಗೃಹಸ್ಥರು) ಎಂಬ ಎರಡು ಭೇದಗಳಿವೆ. ಹವಿಕರಲ್ಲಿ ಹೆಣ್ಣು ಹುಡುಗೆಯರ ಸಂಖ್ಯೆ ಕಡಿಮೆ. ಮತ್ತು ತೋಟದ ಸೀಮೆಯಲ್ಲಿ ಹೆಂಗಸರು ಬಾಳುವದಿಲ್ಲ. ಆದದರಿಂದ ತೆರವು ತೆಗೆದುಕೊಳ್ಳುವ ಪರಿಪಾಠವು ಇವರಲ್ಲಿ ಕಂಡುಬರುವದು.

ಇವರು ವಿದ್ಯೆಯಲ್ಲಿ ಇತ್ತಲಾಗಿ ಸ್ವಲ್ಪ ಮುಂದರಿಸಿರುವರು. ಕೆಲವರು ಸರಕಾರೀ ನೌಕರಿಯಲ್ಲಿ ಸೇರಿರುವರು. ಕೆಲವರು ಪದವೀಧರರೂ ಆಗಿರುವರು. ಅಡವೀಸೀಮೆ, ಕುಚ್ಚೇನಾಡುಗಳಲ್ಲಿ ಮಾತ್ರ ಇನ್ನೂ ವಿದ್ಯಾಸುಧಾರಣೆಯು ಕಡಿಮೆ.

ಇವರು ಕನ್ನಡ ಭಾಷೆಯನ್ನು ಆಡುವರು. ಮಾತಿನಲ್ಲಿ ಅನೇಕ ಹಳೆಗನ್ನಡ ಶಬ್ದಗಳೂ ಕ್ರಿಯಾಪದಗಳೂ ಬರುವವು.

**ಗೌಡಸಾರಸ್ವತರು.**—ಜನಸಂಖ್ಯೆಯು ೨೪೪೭೯ ಇರುವದು. ಪಂಜಾಬದಲ್ಲಿ ಸರಸ್ವತೀ ತೀರದಲ್ಲಿರುವ ಗೌಡ ದೇಶವು ಇವರ ಮೂಲಸ್ಥಾನವು. ಅಲ್ಲಿಂದ ಪರಶುರಾಮನು ಇವರನ್ನು ತಂದು ಕೊಂಕಣದಲ್ಲಿ ಇಟ್ಟನೆಂಬ ಬಗ್ಗೆ ಆಧಾರವಿದೆ. ಇವರು ತಾವು ಸಾರಸ್ವತ* ಋಷಿಯ ವಂಶದವರೆಂದು ಅನ್ನುವರು. ಇವರು ಇತ್ತಲಾಗಿ ಗೋವೆಯಲ್ಲಿರುತ್ತಿದ್ದರು. ಆದರೆ ಪೋರ್ತುಗೀಸರು ಬಂದ ಮೇಲೆ ಧರ್ಮವನ್ನು ಕಾಯ್ದುಕೊಳ್ಳುವ ಸಲುವಾಗಿ ಹತ್ತರ ಇರುವ ಕಾರವಾರ, ಅಂಕೋಲಾ ತಾಲೂಕುಗಳಿಗೆ ಬಂದು, ಅಲ್ಲಿರುವ ಮೂಲನಿವಾಸಿಗಳನ್ನು ಗೆದ್ದು ಭೂಮಿಯನ್ನು ಆಕ್ರಮಿಸಿದರು. ಕೆಲವರು ಕುಮಟಾ, ಹೊನ್ನಾ

---

*ಈತನು ೧೨ ವರ್ಷ ಬರ ಬಿದ್ದಾಗ ಮೀನವನ್ನು ತಿಂದು ವೇದವನ್ನು ಕಾಪಾಡಿದನೆಂದು ಅನ್ನುವರು.

ವರ, ಸಿರಸಿ ಮುಂತಾದ ಬೇರೆ ಬೇರೆ ತಾಲೂಕುಗಳಿಗೆ ಹೋಗಿ ವ್ಯಾಪಾರೋದ್ಯೋಗಗಳನ್ನು ಮಾಡಿ ದೊಡ್ಡ ಜಮೀನದಾರರಾಗಿರುವರು. ಈ ಪ್ರಕಾರ ಇವರ ಮೂಲಸ್ಥಾನವು ಕೊಂಕಣ (ಗೋವಾ) ಆಗಿರುವದರಿಂದ ಮಹಾರಾಷ್ಟ್ರ ಭಾಷೆಯಿಂದ ವಿಕಾರವಾದ ಕೊಂಕಣೀ ಭಾಷೆಯನ್ನು ಆಡುವರು.

ಈ ಗೌಡಸಾರಸ್ವತರಲ್ಲಿ ಮಧ್ವಾಚಾರ್ಯರ ಶಿಷ್ಯರು ವೈಷ್ಣವರೆಂತಲೂ ಶಂಕರಾಚಾರ್ಯರ ಶಿಷ್ಯರು ಸ್ಮಾರ್ತರೆಂತಲೂ ಎರಡು ಭೇದಗಳಾಗಿವೆ. ವೈಷ್ಣವರು ಗೋಪೀ ಚಂದನವನ್ನೂ ಅಂಗಾರವನ್ನೂ ಹಚ್ಚುವರು. ಇವರಲ್ಲಿ ಸುಧಾರಣೆಯು ಕಡಿಮೆ, ದುಂದುಗಾರರಲ್ಲ, ವ್ಯಾಪಾರದಲ್ಲಿ ಬುದ್ಧಿ ಬಹಳ. ಇತ್ತಲಾಗಿ ಇವರಲ್ಲಿಯೂ ಪದವೀಧರರು ಆಗಿರುವರು. ಆದರೆ ಉಳಿದ ಸಾರಸ್ವತರಷ್ಟು ವಿದ್ಯೆಗೆ ಮೆಚ್ಚಿದವರಲ್ಲ, ವ್ಯವಸ್ಥೆ ಕಡಿಮೆ; ಆದರೆ ವಸ್ತ್ರಪ್ರಾವರಣಗಳಲ್ಲಿ ಅಪವ್ಯಯ ಮಾಡುವವರಲ್ಲ. ಇವರಲ್ಲಿ ಅನೇಕರು ದೊಡ್ಡ ದೊಡ್ಡ ವ್ಯಾಪಾರ, ದಲಾಲಿ, ಕಂಟ್ರಾಕ್ಟು ಮುಂತಾದವುಗಳನ್ನು ಮಾಡುವರು. ಇವರು ವಿಷ್ಣುವಿನ ಹೊರತು, ಬೇರೆ ದೇವರನ್ನು ಆರಾಧಿಸುವದಿಲ್ಲ. ವೈಷ್ಣವರ ಗುರುವು ಗೋವೇ ಪ್ರಾಂತದಲ್ಲಿ ಪರತ್ಕಾಳಿಯಲ್ಲಿರುವನು. ಅಂಕೋಲೆಯಲ್ಲಿಯೂ ಒಂದು ಮಠವದೆ. ಸ್ಮಾರ್ತರು ಅದ್ವೈತರು; ಇವರಿಗೆ ಕಾರಭಾರಿ ಎಂಬ ಅನ್ವರ್ಥಕ ನಾಮವೂ ಇರುವದು. ಈಗಲಾದರೂ ಸರಕಾರೀ ನೌಕರಿಯಲ್ಲಿ ಇವರಿಗೆ ಬುದ್ಧಿ ಬಹಳ. ಬಹುಶಃ ಇಂಗ್ಲಿಷ ಮುಂತಾದ ಉಚ್ಚ ವಿದ್ಯೆಯನ್ನು ಕಲಿಯದೆ ಉಳಿಯುವವರಲ್ಲ. ಸ್ತ್ರೀಶಿಕ್ಷಣದಲ್ಲಿಯೂ ಪ್ರೌಢವಿವಾಹದಲ್ಲಿಯೂ ಇವರು ಮುಂದರಿಸಿರುವರು.

ಇವರು ನೋಡಲಿಕ್ಕೆ ಸುಂದರರು. ವಸ್ತ್ರಭೂಷಣಗಳ ಕಡೆಗೆ ಇವರ ಲಕ್ಷ್ಯ ಬಹಳ.

ಸಾರಸ್ವತರು.— ಇವರಾದರೂ ಗೌಡಸಾರಸ್ವತರೇ ಸರಿ. ಇವರು ಸ್ಮಾರ್ತರು, ಭಸ್ಮವನ್ನು ಹಚ್ಚುವರು. ವಿದ್ಯೆಯಲ್ಲಿಯೂ ಸರಕಾರೀ ನೌಕರಿಯಲ್ಲಿಯೂ ಇವರು ಮುಂದಾಗಿರುವರು. ದೊಡ್ಡ ದೊಡ್ಡ ಪದವೀಧರರು ಇವರಲ್ಲಿ ಇರುವರು. ಕಾರಭಾರದಲ್ಲಿ ಎಲ್ಲರಿಗಿಂತ ಇವರೇ ಮುಂದೆ ಎಂದರೂ ಅಡ್ಡಿ ಇಲ್ಲ. ಇವರ ಹೆಣ್ಣು ಮಕ್ಕಳು ಸಹ ಚನ್ನಾಗಿ ಕಲಿಯುವರು. ಇವರೂ ಕೊಂಕಣೀ ಭಾಷೆಯನ್ನು ಆಡುವರು. ಕಾರವಾರ, ಬಂಕೀಕೊಡ್ಲ, ಚಂದಾವರ, ಮಲ್ಲಾಪುರ, ಹೊನ್ನಾವರ, ಕುಮಟಾ, ಶಿರಾಲಿಗಳಲ್ಲಿ ಇವರ ವಸತಿ ವಿಶೇಷ.

ಮುಂಬಯಿ, ಮದ್ರಾಸಗಳಲ್ಲಿ ಮೇಲಾದ ಉದ್ಯೋಗಗಳನ್ನು ಪಡೆದು ಹೆಸರಾದ ಕಾರವಾರಿಗಳು ಇವರೇ.

ಇವರ ಮೈಬಣ್ಣ ಬಿಳಿಸಸುಗೆಂಪು. ಅನ್ನ ವಸ್ತ್ರಾದಿಗಳು ಸ್ವಚ್ಛ, ಆರೋಗ್ಯದ ಮಹತ್ವವನ್ನರಿತಿರುವರು. ಇವರಲ್ಲಿ ವರದಕ್ಷಿಣೆಯು ಮಿತಿಮೀರಿ ಬೆಳೆದಿರುವದು.

ಸೊನಗಾರರು. — ಜನಸಂಖ್ಯೆ ೧೩೯೪೩೭. ಇವರಾದರೂ ಗೋವೆಯಿಂದ ಬಂದವರು. ಕಾರವಾರ, ಅಂಕೋಲಾ ತಾಲೂಕುಗಳಲ್ಲಿ ಇವರ ವಸತಿ ಬಹಳ. ಭಾಷೆ ಕೊಂಕಣಿ. ಇವರು ತಾವೂ ದೈವಜ್ಞ ಬ್ರಾಹ್ಮಣರೆಂದು ಹೇಳಿಕೊಳ್ಳುವರು. ಇವರಿಗೆ ವಿದ್ಯಾಭಿರುಚಿ ಇಲ್ಲ. ಚಿನ್ನ ಬೆಳ್ಳಿಗಳ ಆಭರಣಗಳನ್ನು ಮಾಡುವದೇ ಇವರ ಮುಖ್ಯ ಉದ್ಯೋಗವು. ಇದಕ್ಕಾಗಿ ಇವರು ದೂರ ದೂರ ದೇಶಗಳಿಗೆ ಹೋಗುವರು. ಲಗ್ನಾದಿಗಳಲ್ಲಿ ಇಲ್ಲದ ಶ್ರೀಮಂತಿಕೆಯನ್ನು ತೋರಿಸುವರು. ಇವರು ಸ್ವಾದಿವಾದಿರಾಜ ಸ್ವಾಮಿಗಳ ಶಿಷ್ಯರು. ಗೋಪೀಚಂದನದ ನಾಮವನ್ನೂ ಮುದ್ರೆಗಳನ್ನೂ ಧರಿಸುವರು. ಆದರೂ ಎಲ್ಲ ದೇವತೆಗಳನ್ನು ಆರಾಧಿಸುವರು. ಇವರಿಗೂ ಬೇರೆ ಯಾವ ಜಾತಿಯವರಿಗೂ ಅನ್ನ ವ್ಯವಹಾರವಿಲ್ಲ. ಇವರು ಘಟ್ಟದ ಮೇಲೆ ಹೋಗಿ ಪವನದ ಬಂಗಾರದಿಂದ ಸರಸಾದ ಆಭರಣಗಳನ್ನು ಮಾಡಿ ಬಹಳ ಹಣವನ್ನು ದೊರಕಿಸುವರು. ಆದರೆ ಜುಗಾರ ಆಟದ ವ್ಯಸನದಿಂದ ಇವರ ಏಳಿಗೆಯಾಗುವದಿಲ್ಲ.

ಲಿಂಗಾಯತರು. — ಜನಸಂಖ್ಯೆ ೮೨೩೨. ಇವರು ಶುದ್ಧ ವೀರಶೈವರು. ಶಿವನಲ್ಲದೆ ಮತ್ತೊಂದು ದೇವತೆಯನ್ನರಿಯರು. ವಿಭೂತಿಯನ್ನು ಹಚ್ಚುವರು. ಭಾಷೆ ಕನ್ನಡ. ಹಲ್ಯಾಳ, ಮುಂಡಗೋಡ, ಸಿರಸಿ, ಸಿದ್ದಾಪುರ ತಾಲೂಕುಗಳೊಳಗಿನ ತೋಟದ ಸೀಮೆಗಳಲ್ಲಿ ಇವರ ವಸತಿ ಬಹಳ. ಇವರು ಹೆಚ್ಚಾಗಿ ಒಕ್ಕಲತನವನ್ನು ಮಾಡುವರು.

ವಾಣಿ. — ಜನಸಂಖ್ಯೆ ೭೬೪೧. ಇವರು ಕಾರವಾರ, ಅಂಕೋಲಾ ತಾಲೂಕುಗಳಲ್ಲಿ ಇದ್ದು ವ್ಯಾಪಾರವನ್ನು ಮಾಡುವರು. ಇವರು ಉಪನಯನಾದಿಕರ್ಮಗಳನ್ನು ಮಾಡಿಕೊಳ್ಳುವರು; ಹವಿಕ ಬ್ರಾಹ್ಮಣರಲ್ಲಿ ಮಾತ್ರ ಉಣ್ಣುವರು.

ಓಲೇಕಾರರು (ಶೇರುಗಾರ) — ಇವರು ತಾವು ಕ್ಷತ್ರಿಯರ ವಂಶದವರೆಂದು ಹೇಳುವರು; ಭಾಷೆ ಕೊಂಕಣಿ. ಕುಮಟಾ, ಹೊನ್ನಾವರ ತಾಲೂಕುಗಳಲ್ಲಿ

ಇವರ ವಸತಿ ಬಹಳ. ಮೂಲ ಉದ್ಯೋಗ ಒಕ್ಕಲತನವು. ಇವರೂ ಹವಿಕರಲ್ಲಿ ಉಣ್ಣುವರು. ನಿಜವಾಗಿ ವೇದಾಧಿಕಾರವಿಲ್ಲದಿದ್ದರೂ ಇತ್ತಲಾಗಿ ಮುಂಜಿಯನ್ನು ಮಾಡಿಸಿಕೊಳ್ಳುವರು.

ಕೊಂಕಣಮರಾಠಿ.—ಜನಸಂಖ್ಯೆ ೪೮೭೫೯. ಇವರು ಹೋಲಿಕೆಯಲ್ಲಿ ಓಲೆಕಾರರಂತೆಯೇ ಸರಿ. ಉದ್ಯೋಗವು ಕೃಷಿ. ಕಾರವಾರ, ಹಲ್ಯಾಳ, ಅಂಕೋಲಾ ತಾಲೂಕುಗಳಲ್ಲಿ ಇವರ ವಸತಿ ಬಹಳ. ಭಾಷೆ ಕೊಂಕಣಿ, ಇವರೂ ಇತ್ತಲಾಗಿ ಮುಂಜಿಯನ್ನು ಮಾಡಿಸಿಕೊಳ್ಳುವರು. ಇವರಲ್ಲಿ ಕೆಲವರು ಪೊಲೀಸ ಕಸ್ಟಮ್, ಫಾರೆಸ್ಟ ಖಾತೆಗಳಲ್ಲಿ ಸಿಪಾಯಿಗಳಾಗಿರುವರು.

ನಾಡೋರ.—ಜನಸಂಖ್ಯೆ ೬೫೪೬. ಇವರು ಶೂದ್ರರಲ್ಲಿ ಮೇಲಾದವರು. ಅಂಕೋಲಾ, ಕುಮಟಾ ತಾಲೂಕುಗಳೊಳಗಿನ ತೊರ್ಕೆ, ವನ್ನಳ್ಳಿ, ಮಾಸಕೇರಿ, ಗಂಗಾವಳಿ ಮುಂತಾದ ಊರುಗಳಲ್ಲಿ ಇವರ ವಾಸವೇ ಬಹಳ. ಒಕ್ಕಲತನವು ಇವರ ಮುಖ್ಯ ಉದ್ಯೋಗವು; ಆದರೂ ಇತ್ತಲಾಗಿ ಕನ್ನಡ, ಇಂಗ್ಲಿಷ ಭಾಷೆಗಳನ್ನು ಚನ್ನಾಗಿ ಕಲಿತು ಸರಕಾರೀ ಕೆಲಸಗಳಲ್ಲಿ ಸೇರಿರುವರು. ಇವರು ಗಟ್ಟಿಗರೂ, ಉದ್ಯೋಗಿಗಳೂ, ದೂರದರ್ಶಿಗಳೂ, ಮಿತವ್ಯಯದಿಂದ ಜೀವಿಸುವವರೂ ಆಗಿರುವರು. ವನ್ನಳ್ಳಿಯ ನಾಡೋರರು ಪಲ್ಲೆಕಾಯಿಗಳನ್ನು ಬೆಳಿಸುವದರಲ್ಲಿ ಕುಶಲರು. ನಾಡೋರರು ಸುಸ್ಥಿತಿಯಲ್ಲಿದ್ದಾರೆ. ಇವರಲ್ಲಿ ಸಾಲಿಗರು ಕಡಿಮೆ.

ಹಾಲವಕ್ಕೀ ಒಕ್ಕಲು.—ಜನಸಂಖ್ಯೆ ೩೦೩೯. ಇವರು ನಿಜವಾದ ಅನಾರ್ಯರು; ಕಾನಡಾ ಜಿಲ್ಹೆಯ ಮೂಲನಿವಾಸಿಗಳು. ಒಕ್ಕಲತನವೇ ಇವರ ಮುಖ್ಯ ಉದ್ಯೋಗವು. ಹವಿಕ ಮೊದಲಾದ ಬ್ರಾಹ್ಮಣರ ಕಾಲದಲ್ಲಿ ಇವರು ಕುಚ್ಚೇನಾಡನ್ನು ಸೇರಬೇಕಾಯಿತು. ಇವರು ಬಹಳ ಸತ್ಯವಂತರೂ ಕೃಷಿಯಲ್ಲಿ ಕುಶಲರೂ ಇರುವರು. ಗ್ರಾಮ್ಯ ಕನ್ನಡ ಭಾಷೆಯನ್ನು ಆಡುವರು. ವಿದ್ಯೆಯಪ್ರವೇಶವು ಇನ್ನೂ ಇವರಲ್ಲಿ ಆಗಿರುವದಿಲ್ಲ. ಮೈಬಣ್ಣ ಬಹಳ ಕಪ್ಪು, ಗಟ್ಟಿಗರು. ದೈವಭೂತಗಳಿಗೆ ಹೆದರುವರು. ಅವುಗಳಿಗೆ ನಡಕೊಳ್ಳುವರು. ಇವರ ಹೆಂಗಸರು ಕರೇಮಣಿಗಳ ಝುಂಡಿಗೆ ಝುಂಡನ್ನೇ ಕೊರಳಲ್ಲಿ ಹಾಕಿರುವರು. ಇವರು ಹೆಂಡ ಮುಂತಾದ ಪದಾರ್ಥಗಳನ್ನು ಸೇವಿಸುವದಿಲ್ಲ.

ಗ್ರಾಮಒಕ್ಕಲು.—ಜನಸಂಖ್ಯೆ ೧೧೦೩೨. ಇವರು ಹಾಲವಕ್ಕಿ ಒಕ್ಕಲ ಪೈಕಿಯವರೇ ಸರಿ. ಹವಿಕರು ಹೇಳಿದಂತೆ ಕೆಲಸಗಳನ್ನು ಮಾಡಿಕೊಂಡು

ಗ್ರಾಮಗಳಲ್ಲಿದ್ದದರಿಂದ ಇವರಿಗೆ ಈ ಹೆಸರು ಬಂದಿರಬಹುದು. ಇವರಾದರೂ ಕೆಲಸಕ್ಕೆ ಗಟ್ಟಿಗರು. ಹಾಲವಕ್ಕಿ ಒಕ್ಕಲುಗಳಿಗಿಂತ ತುಸು ಸುಧಾರಿಸಿದ ಮಾತುಗಳನ್ನು ಆಡುವರು. ವಿದ್ಯೆಯಿಲ್ಲ; ಒಕ್ಕಲತನವನ್ನೇ ಮಾಡುವರು. ಬಡವರು ದೆವ್ವಭೂತಪಿಶಾಚಿಗಳಿಗೆ ನಡೆದುಕೊಳ್ಳುವರು.

ಹಳೆಪೈಕರು.—ಜನಸಂಖ್ಯೆ ೫೪೩೨. ಇವರೂ ಅನಾರ್ಯಕುಲದವರೇ; ಭಾಷೆ ಕನ್ನಡ. ವೈಷ್ಣವರಂತೆ ನಾಮಗಳನ್ನು ಧರಿಸುವರು; ಮತ್ತು "ನಾಮಧಾರಿ, ತ್ರಿನಾಮಧಾರಿ" ಎಂಬ ಹೊಸ ಜಾತಿಯ ಹೆಸರುಗಳನ್ನು ಹೇಳುವರು. ಇವರು ಮೊದಲಿನಿಂದಲೂ ಸರಾಯಿ ತೆಗೆಯುವದು, ಅದರ ಗುತ್ತಿಗೆ ಮತ್ತು ವ್ಯಾಪಾರ ಮಾಡುವದು ಮುಂತಾದ ಕೆಲಸಗಳನ್ನು ಮಾಡುತ್ತ ಬಂದದ್ದೇ ಇವರ ಕೀಳತನಕ್ಕೆ ಕಾರಣವು. ಆದರೂ ಇವರು ಶೂದ್ರರಲ್ಲಿ ತುಸು ಸುಧಾರಿಸಿದವರು. ವಿದ್ಯೆಯಲ್ಲಿ ನಾಡವರಿಗಿಂತ ಸ್ವಲ್ಪ ಕಡಿಮೆ ಮುಂದರಿದವರು. ಇವರು ದುರಹಂಕಾರಿಗಳೂ ದುರಾಚಾರಿಗಳೂ ಆಗಿರುವರು. ಇತ್ತಲಾಗಿ ಕೆಲವರು ಕೃಷಿಯನ್ನು ಮಾಡುವರು. ಕೆಲವರು ಕಡಿಮೇ ಪ್ರತಿಯ ನೌಕರಿಯನ್ನೂ, ವ್ಯಾಪಾರವನ್ನೂ, ಕಂಚುಗಾರರ ಕೆಲಸವನ್ನೂ ಮಾಡುವರು.

ಇವರಲ್ಲದೆ ಮೀನುಗಳನ್ನು ಹಿಡಿಯುವ ಹರಕಂತರ-ಅಂಬಿಗ ಜಾತಿಯವರೂ ಸಣ್ಣ ಪುಟ್ಟ ಸಾವಕಾರಿಕೆ-ನೌಕರಿಗಳನ್ನು ಮಾಡುತ್ತಿರುವ ಮೊಗೇರ-ಕೊಮಾರ ಪಂತ ಜಾತಿಯವರೂ ಅರ್ಲಗಷ್ಟಗಳನ್ನು ಮಾಡುವ ಮುಕ್ರಿ ಜಾತಿಯವರೂ ಮಡಿವಾಳರೂ ಕನ್ನಡ ಭಾಷೆಯವರಾಗಿ ಎಲ್ಲಕಡೆಗೆ ವಾಸಿಸುವರು. ಹಾಡುವ ಹಾಗೂ ಕುಣಿಯುವ ಹೋರೆಯನ್ನು ಮಾಡುವ ಕಲಾವಂತರೂ, ದೇವಸ್ಥಾನಗಳಲ್ಲಿ ಪಡಿಚಾಕರಿಯನ್ನು ಮಾಡುವ ದೇವಳಿಗಳೂ, ಭ್ರಷ್ಟರಾದ ಬಾಂದಿಗಳೂ ೧೫೦೦೦ ಜನರಾಗಬಹುದು.

ಮುಸಲ್ಮಾನರು.—ಜನಸಂಖ್ಯೆ ೨೮೭೩೧. ಇವರಲ್ಲಿ ನವಾಯಿತರ (ಹೊಸದಾಗಿ ಬಂದವರ) ಸಂಖ್ಯೆಯು ವಿಶೇಷವಾಗಿರುವದು. ಇವರು ೭ನೇ ಶತಕದಲ್ಲಿ ಅರಬಸ್ತಾನದಿಂದ ಇಲ್ಲಿಗೆ ಓಡಿಬಂದು ಮುರಡೇಶ್ವರ, ಭಟಕಳ, ಮಂಕಿ ಎಂಬ ಗ್ರಾಮಗಳಲ್ಲಿ ವಾಸವಾದರು. ಇವರು ಆಡುವ ಭಾಷೆಯು ಒಂದು ತರದ ವಿಕೃತವಾದ ಕೊಂಕಣಿ. ಇವರು ನಸುಗೆಂಪು ಬಣ್ಣದ ಲುಂಗಿಯನ್ನು ಉಡುವರು. ಉದ್ದವಾದ ಅಂಗಿಯನ್ನು ಹಾಕಿ ಅದರ ಮೇಲೆ ರೇಶಿಮೆಯ ಜಾಕೆಟು ತೊಡುವರು. ತಲೆಗೆ ಸಣ್ಣ ಜರ ಹಚ್ಚಿದ ಟೊಪ್ಪಿಗೆ ಹಾಕಿ ಮೇಲೆ

ಸಣ್ಣ ಕೆಂಪು ವಸ್ತ್ರ ಸುತ್ತುವರು. ಹೆಂಗಸರು ಶೀರೆ ಕುಬಸಗಳನ್ನು ಧರಿಸುವರು. ಈ ಜಿಲ್ಹೆಗೆ ಸಮೀಪವಾಗಿರುವ ಮೈಸೂರ, ವಿಜಾಪುರ ರಾಜ್ಯಗಳು ಕೆಲವು ವರ್ಷಗಳ ಹಿಂದೆ ಮುಸಲ್ಮಾನರ ಆಳಿಕೆಗೆ ಒಳಗಾಗಿದ್ದವು. ಆಗ್ಗೆ ಮುಸಲ್ಮಾನರ ಸ್ವಾರಿಗಳು ಈ ಜಿಲ್ಹೆಯ ಮೇಲೆ, ಮೇಲೆ ಮೇಲೆ ಆಗುತ್ತಿದ್ದವು. ಮತ್ತು ಅವರು ಸದಾಶಿವಗಡ-ಅಂಕೋಲಾ-ಮಿರ್ಜಾನ-ಕಾಗಾಲ-ಹೊನ್ನಾವರ-ಭಟಕಳ ಮುಂತಾದ ಪಟ್ಟಣಗಳಲ್ಲಿ ಕೋಟೆಗಳನ್ನು ಕಟ್ಟಿದ್ದರು. ಸದ್ಯಕ್ಕೆ ಇರುವ ಮುಸಲ್ಮಾನರು ಈ ಅಫಗಾನರಿಂದ ಕೆಡಿಸಲ್ಪಟ್ಟ ಹಿಂದುಗಳೇ. ಇವರು ಮುಸಲ್ಮಾನ ಧರ್ಮದಂತೆ ನಡೆಯುವರು. ಇವರಲ್ಲಿ ಸುನ್ನೀ, ಶಿಯಾ ಎಂಬ ಎರಡು ಪಂಥಗಳಿವೆ. ಇವರು ಅಧಿಕಾರಪ್ರಿಯರು; ಗಂಭೀರ ಮುದ್ರೆಯವರು. ಮೊದಲಿನಿಂದ ಇವರು ಸ್ವತಃ ಅರಸರಾಗಿ ಇಲ್ಲವೆ ಸರಕಾರೀ ದೊಡ್ಡ ಉದ್ಯೋಗಸ್ಥರಾಗಿ ಕೆಲಸ ಮಾಡುತ್ತಿದ್ದದರಿಂದ ಈಗಲೂ ಸರಕಾರದವರು ಇವರಿಗೆ ಸರಕಾರೀ ಉದ್ಯೋಗಗಳನ್ನು ಕೊಡುವರು. ಬಹಳ ಮಂದಿ ಪೋಲೀಸ, ಫಾರೆಸ್ಟ, ಕಸ್ಟಮ ಖಾತೆಗಳಲ್ಲಿರುವರು. ವಿದ್ಯಾಭಿರುಚಿಯು ಕಡಿಮೆ. ಕೈಗೆ ಸಿಕ್ಕ ನಾಲ್ಕು ದುಡ್ಡು ಮೊದಲು ವೆಚ್ಚಮಾಡಿ ಸೊಗಸಿನಿಂದ ಕಾಲಕಳೆಯುವರು. ಇತ್ತಲಾಗಿ ಕೆಲವರು ಪದವೀಧರರಾಗಿರುವರು, ಕೆಲವರು ಬಳಿಗಾರ-ಕಂಚುಗಾರ-ಕಲಾಯಿಗಾರರ ಉದ್ಯೋಗಗಳನ್ನೂ ಸಣ್ಣ ಪುಟ್ಟ ವ್ಯಾಪಾರಗಳನ್ನೂ ಮಾಡುವರು. ಇವರಿಗೆ ಹಿಂದೂ ಜನರು ಇನ್ನೂ ಹೆದರುವರು. ಹೆಂಗಸರು ಬುರಕೀ ಹಾಕಿಕೊಂಡು ತಿರುಗಾಡುವರು; ಅದರಿಂದ ಇವರು ಬೆಳ್ಳಗಿರುವದೇ ಬಹಳ. ಇವರು ತಮ್ಮ ಶಾಸ್ತ್ರಗಳನ್ನು ಓದುವಷ್ಟು ಬರಹವನ್ನು ಕಲಿಯದೆ ಇರುವದಿಲ್ಲ.

ಕ್ರಿಶ್ಚಿಯನ್ನರು.—ಜನಸಂಖ್ಯೆ ೧೬೮೮೪೩. ಸುಮಾರು ೩೦೦ ವರ್ಷಗಳ ಹಿಂದೆ, ಪೋರ್ತುಗೀಸರು ಗೋವೆಗೆ ಬಂದನಂತರ ಅಲ್ಲಿಯ ಹಿಂದೂ ಜನರನ್ನು ಕೆಡಿಸಿದ್ದರಿಂದ ಈ ಜಾತಿಯಾಯಿತು. ಅನಂತರ ಅವರು ಕಾರವಾರ ತಾಲೂಕಿನವರೆಗೂ ಹಬ್ಬಿರುವರು. ಕುಮಟಾ-ಹೊನ್ನಾವರಗಳ ಕಡೆಗೂ ಸಾಧಾರಣ ವಸತಿ ಇರುವದು. ಇವರು ಯೇಸುವಿನ ಮತವನ್ನು ಅನುಸರಿಸುವರು. ವಿದ್ಯಾಭಿರುಚಿಯು ಕಡಿಮೆ; ಸರಕಾರದವರು ಇವರಿಗೆ ಚಿಕ್ಕ ಪುಟ್ಟ ಉದ್ಯೋಗಗಳನ್ನು ಕೊಡುವರು. ಕೆಲವರು ಗಾಣಿಗ-ಬಡಿಗರ ಉದ್ಯೋಗಗಳನ್ನೂ ಒಕ್ಕಲತನವನ್ನೂ ಚನ್ನಾಗಿ ಮಾಡುವರು. ಕಾರವಾರದ ಕಡೆಯ ಕ್ರಿಶ್ಚಿಯನ್ನರು

ಕಟ್ಟಿಗೆಯ ಕೆಲಸಗಳಲ್ಲಿ ಬಹು ಕುಶಲರು. ಇವರ ಹೆಂಗಸರು ಮೈ ಚಳಿ ಬಿಟ್ಟು ಬೇಕಾದಲ್ಲಿ ಹೋಗಿ ವ್ಯಾಪಾರ ಮುಂತಾದ ಉದ್ಯೋಗಗಳನ್ನು ಮಾಡುವರು. ಹೆಂಗಸರು ಎಲ್ಲ ಕೆಲಸಗಳಲ್ಲಿ ಮುಂದೆ ಇರುವರು. ಸದಾಶಿವಗಡ-ಸುಂಕೇರಿ-ಕಾರವಾರ-ಚಂದಾವರ-ಹೊನ್ನಾಪರ-ಹೊನ್ನಾವ (ಕುಮಟಾ) ಮುಂತಾದ ಊರುಗಳಲ್ಲಿ ಇವರ ಪ್ರಾರ್ಥನಾಲಯಗಳೂ ಪಾದ್ರಿಸಾಹೇಬರೆಂಬ ಧರ್ಮ ಗುರುಗಳೂ ಇರುವರು.



ಹಬ್ಬು.— ಇವರು ಹವಿಕರಿಗೆ ಹೋಲುವರು. ಕಾರವಾರ-ಹೊನ್ನಾವರ ತಾಲೂಕುಗಳ ಕೆಲವು ಹಳ್ಳಿಗಳಲ್ಲಿ ವಾಸಿಸುವರು. ಭಾಷೆಯು ವಿಕಾರವಾದ ಕನ್ನಡ. ಆಚಾರವು ಬಹುಶಃ ಹವೀಗರಂತೆ ಇರುವದು. ಇವರು ಹವಿಕ ವರ್ಗದವರಲ್ಲಿ ಉಣ್ಣುವರು. ಇತ್ತಲಾಗಿ ವಿದ್ಯೆಯಲ್ಲಿ ಮುಂದರಿದಿರುವರು. ಕೆಲವರು ಸರಕಾರೀ ಉದ್ಯೋಗಸ್ಥರೂ ಇರುವರು.

ಕರ್ಹಾಡರು.— ಇವರ ವಾಸಸ್ಥಳವು ಸಾತಾರಾ ಜಿಲ್ಹೆಯ ಕರ್ಹಾಡ ಎಂಬ ಗ್ರಾಮವು. ನೋಡಲಿಕ್ಕೆ ಕೊಂಕಣಸ್ಥರಂತೆ ಕಾಣುವರು. ಕೊಂಕಣಸ್ಥ-ದೇಶಸ್ಥ ಹವಿಕರ ಸಂಗಡ ಇವರ ಅನ್ನವ್ಯವಹಾರವಾಗುವದು. ಕಾರವಾರ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಇವರು ಇರುವರು. ಈ ಜಿಲ್ಹೆಯಲ್ಲಿ ಇವರ ಉದ್ಯೋಗವು ವೈದಿಕವೇ ಸರಿ. ಶೇಜವಾಡ ಕ್ಷೇತ್ರದಲ್ಲಿ ಇವರೇ ಪೂಜಾರಿ ಗಳು. ಆಡುವ ಭಾಷೆ ಮರಾಠಿ.

ಕೊಂಕಣಸ್ಥರು.— ಜನಸಂಖ್ಯೆ ೪೮೯. ಸಹ್ಯಾದ್ರಿಯ ಮೂಲಕ ಮಹಾ ರಾಷ್ಟ್ರದಲ್ಲಿ ಎರಡು ಭಾಗಗಳಾಗಿರುವವಷ್ಟೇ. ಪಶ್ಚಿಮ ಭಾಗಕ್ಕೆ ಕೊಂಕಣ ವೆನ್ನುವರು; ಪೂರ್ವ ಭಾಗಕ್ಕೆ ದೇಶವೆಂಬ ಹೆಸರು. ಕೊಂಕಣದಲ್ಲಿರುವವರಿಗೆ ಈ ಹೆಸರು ಬಂದಿರುವದು; ಇದು ಅನ್ವರ್ಥಕನಾಮವು. ಮೂಲ ಜಾತಿಯ ಹೆಸರು ಚಿತ್ಪಾವನ. ಇವರು ಮಿತವ್ಯಯಿಗಳೂ, ಬುದ್ಧಿವಂತರೂ, ವಿದ್ಯಾ ವಂತರೂ, ನಾಗರಿಕರೂ, ರಾಜ್ಯಾಧಿಕಾರವಿಶಾರದರೂ ಆಗಿರುವರು. ಇವರ ಮೈಬಣ್ಣ ಬಿಳಿದು. ಕಣ್ಣು ಮಾತ್ರ ಬೆಕ್ಕಿನ ಕಣ್ಣಿನಂಥವು. ಸಿರಸಿ-ಸಿದ್ದಾಪುರ ತಾಲೂಕುಗಳಲ್ಲಿ ಇವರು ಬಹುಶಃ ರೈತರ ಕೆಲಸವನ್ನೇ ಮಾಡುತ್ತಿರುವರು. ಇವರ ಮೂಲಭಾಷೆಯು ಮರಾಠಿ, ಆದಾಗ್ಯೂ ಇಲ್ಲಿಯ ಕನ್ನಡಿಗರ ಸಂಸರ್ಗ ದಿಂದ ಕನ್ನಡವೇ ರೂಢವಾಗಿರುವದು.

ಉದ್ಯೋಗಗಳು.— ಮನುಷ್ಯನಿಗೆ ಕಾಳೂ ಅರಿವೆಗಳೂ ಬೇಕೇಬೇಕು.

ಆದರಿಂದ ಕೃಷಿಯೂ ನೇಕಾರಿಕೆಯೂ ಅವಶ್ಯವಾದ ಉದ್ಯೋಗಗಳು. ಆದರೆ ಈ ಜಿಲ್ಹೆಯಲ್ಲಿ ಹತ್ತಿಯ ಬೆಳೆಯು ಇಲ್ಲ. ಇಲ್ಲಿ ಲೋಹಮಾರ್ಗವು ಇಲ್ಲದ್ದರಿಂದ ಬೈಲು ಪ್ರದೇಶಗಳಿಂದ ಹತ್ತಿ-ನೂಲುಗಳನ್ನು ತರಿಸಿ ನೇಯುವ ಕೆಲಸ ಮಾಡಿದರೆ ಲಾಭವಾಗುವಂತೆ ಇಲ್ಲ. ಆದರೆ ಇಲ್ಲಿಯ ಆರ್ದ್ರ ಹವೆಯು ಉದ್ದ ಎಳೆಗಳನ್ನು ನೇಯಲಿಕ್ಕೆ ಅನುಕೂಲವಾದದ್ದು. ಕಾರವಾರ-ಕುಮಟಾ-ಹೊನ್ನಾವರ ತಾಲೂಕುಗಳ ಕೆಲವು ಹಳ್ಳಿಗಳಲ್ಲಿ ಮಾತ್ರ ಸಣ್ಣ ಮಗ್ಗಗಳು ಅವೆ.

ಕೃಷಿಕರ್ಮವು. — ಇದು ಇಲ್ಲಿಯ ಮುಖ್ಯ ಉದ್ಯೋಗವು. ೨೯೦೦೧೭ ಜನರು ಈ ಉದ್ಯೋಗವನ್ನು ಮಾಡುವರು. ಹವಿಕ ಬ್ರಾಹ್ಮಣರೂ, ಓಲೆ ಕಾರರೂ, ಕೊಂಕಣ ಮರಾಟರೂ, ಹಾಲವಕ್ಕಿ-ಗ್ರಾಮಒಕ್ಕಲು-ನಾಡೋರ ಮುಂತಾದವರೂ ಸ್ವತಃ ಸಾಗುವಳಿಯನ್ನು ಮಾಡುವರು. ಕುಚ್ಚೇನಾಡು-ಅಡವೀಸೀಮೆಗಳಲ್ಲಂತೂ ಅಡಿಕೆ-ಕಬ್ಬು-ಯಾಲಕ್ಕಿ-ಮೆಣಸುಗಳ ತೋಟ ಗಳನ್ನು ಹವಿಕರು ಸ್ವತಃ ಮಾಡುವರು. ಮರವನ್ನೇರಿ ತೊಟ್ಟೆಕಟ್ಟುವದು, ಕೊನೆಕೊಯ್ಯುವದು, ಅಡಿಕೆ-ಮೆಣಸು-ಯಾಲಕ್ಕಿಗಳನ್ನು ಮಾರಾಟಕ್ಕೆ ಸಿದ್ಧ ಮಾಡುವದು ಇವೆಲ್ಲ ಕೆಲಸಗಳನ್ನು ಅವರೇ ಮಾಡುವರು. ಗದ್ದೆ ಭೂಮಿ ಗಳಲ್ಲಿ ನೇಗಿಲ ಹೊಡೆಯುವದೊಂದರ ಹೊರತು ಉಳಿದ ಎಲ್ಲ ಕೆಲಸಗಳನ್ನು ಮಾಡುವರು. ಈ ಜಿಲ್ಹೆಯ ಭೂಮಿಯು ಗಟ್ಟದ ಕೆಳಗೆ ಫಲದ್ರೂಪವಲ್ಲದ್ದ ರಿಂದ ಬೆಳೆಯು ಚನ್ನಾಗಿ ಬರುವದಿಲ್ಲ. ಬಂದ ಬೆಳೆಯಿಂದ ಜನರಿಗೆ ವರ್ಷದಲ್ಲಿ ಆರು ತಿಂಗಳ ಉಪಜೀವನವಾಗುವದು. ಆದ್ದರಿಂದ ಇಲ್ಲಿಯ ಬಹು ಜನ ಒಕ್ಕಲಿಗರು ಘಟ್ಟದ ಮೇಲೆ ಒಂಭತ್ತು ತಿಂಗಳು ಹವಿಕರ ಯಾಲಕ್ಕಿ-ಅಡಿಕೆ ಗಳ ತೋಟಗಳಲ್ಲಿ ಕೆಲಸಮಾಡಿ, ತಮ್ಮ ಕುಟುಂಬ ಪೋಷಣಮಾಡಿಕೊಳ್ಳು ವರು. ಮೂರು ತಿಂಗಳು ವಿಶ್ರಾಂತಿ ತೆಗೆದುಕೊಳ್ಳುವರು.

ಜಿಲ್ಹೆಯ ತುಂಬಾ ಬತ್ತವು ಬೆಳೆಯುವದರಿಂದ ಅದನ್ನು ಕುಚ್ಚಲಕ್ಕೀ ಮಾಡುವದಕ್ಕೆ ಅಲ್ಲಲ್ಲಿ ಶೂದ್ರರ ಬೇರೆ ಬೇರೆ ಜಾತಿಗಳು ಇರುವವು. ತೆಂಗಿನ ಕಾಯಿಗಳ ಕೊಬ್ಬರಿಯಿಂದ ಎಣ್ಣೆ ತೆಗೆಯುವ ಗಾಣಿಗರೂ ಅಲ್ಲಲ್ಲಿ ಇರುವರು. ಇಲ್ಲಿಯ ಹುಟ್ಟುವಳಿಗಳನ್ನು ಬೇರೆ ಕಡೆಗೆ ಕಳಿಸಿ, ಇಲ್ಲಿಯವರಿಗೆ ಬೇಕಾಗುವ ಸರಕುಗಳನ್ನು ಪೂರೈಸುವ ವ್ಯಾಪಾರದ ಕೆಲಸವನ್ನು ಬಹುಶಃ ಇಡೀ ಜಿಲ್ಹೆ ಯಲ್ಲಿ ಅಲ್ಲಲ್ಲಿರುವ ಗೌಡಸಾರಸ್ವತ ವೈಷ್ಣವರು ಮಾಡುವರು. ಈ ಜಿಲ್ಹೆಯಲ್ಲಿ

ಪತೆಮಾರಿ, ಮಚವಾ, ಗಲಬತ, ಪಡಾವ ಮೊದಲಾದ ನಾವೆಗಳನ್ನು ಕಟ್ಟುವ ಕೆಲಸವೂ, ನದಿಯ ದಂಡೆಗೆ ಬೆಳೆಯುವ ಹುಲ್ಲಿನಿಂದ ಚಾಪೆಗಳನ್ನು ಹೆಣೆಯುವದೂ, ಚಂದನದಿಂದ ಅಂದವಾದ ಸಾಮಾನುಗಳನ್ನು ಮಾಡುವ ಉದ್ಯೋಗವೂ ನಡೆಯುತ್ತವೆ. ಜನರು ಬಡವರಾದ್ದರಿಂದ ತೆಂಗಿನಕಾಯಿಯ ಸಿಪ್ಪೆಯನ್ನು ಬಡಿದು ಕಾತಿಯನ್ನು ಮಾಡಿ ಹಗ್ಗಗಳನ್ನು ಹೊಸೆದು ಹೊಟ್ಟೆ ಹೊರಕೊಳ್ಳುವರು.

# ೮ನೆಯ ಪ್ರಕರಣ.

## ಮಾರ್ಗಗಳು.

ಮಾರ್ಗಗಳಲ್ಲಿ ಜಲಮಾರ್ಗಗಳು, ಲೈನಮಾರ್ಗಗಳು, ಲೋಹ (ರೈಲ) ಮಾರ್ಗಗಳು ಎಂಬ ಮೂರು ಪ್ರಕಾರಗಳುಂಟು. ಲೈನಮಾರ್ಗಗಳಲ್ಲಿ ಕೆಂಪ ಗುಣಿಗಲ್ಲು ಹಾಕಿ ಮುರಮು ಹರವಿದ ಪಕ್ಕಾಮಾರ್ಗಗಳು ಇಂಜಿನಿಯರ ಖಾತೆಯ ಆಧೀನದಲ್ಲಿರುವವು. ಇಂಥ ಮಾರ್ಗಗಳ ಮೇಲೆ ಮೋಟಾರಗಳು ಓಡ್ಯಾಡುವವು. ಬರೇ ಮುರಮು ಹಾಕಿದ ಮಾರ್ಗಗಳು ಕಚ್ಚಾಮಾರ್ಗ ಗಳು. ಇವು ಲೋಕಲ್ ಬೋರ್ಡಿನವರ ಕಡೆಗೆ ಆಗಲಿ ಫಾರೆಸ್ಟ ಖಾತೆಯ ವರ ಕಡೆಗೆ ಆಗಲಿ ಇರುವವು. ವೆಚ್ಚದ ದೃಷ್ಟಿಯಿಂದ ನೋಡಿದರೆ ಜಲಮಾರ್ಗ ಗಳು ಲಾಭಕರವಾದವು. ನದಿ-ಸಮುದ್ರ-ಕಾಲುವೆಗಳಲ್ಲಿ ಜಲಮಾರ್ಗಗಳು ಇರುತ್ತವೆ. ರೈಲಮಾರ್ಗದಿಂದ ಜನರ ಸಂಚಾರವೂ ವ್ಯಾಪಾರವೂ ಸುಗಮ ವಾಗಿ ಸಾಗುವದಲ್ಲದೆ ಬರದ ಬಾಧೆಯನ್ನಾದರೂ ಕೆಲವು ಮಟ್ಟಿಗೆ ಹಿಂಗಿಸ ಬಹುದು. ಈ ಮಾರ್ಗವು ಈ ಜಿಲ್ಹೆಯಲ್ಲಿ ಹೆಸರಿಗೆ ಮಾತ್ರ ಕ್ಯಾಸಲ್‌ರಾಕ ದಿಂದ ಸುಪಾ ಪೇಟೆಯ ಮೂಲೆಯಲ್ಲಿ ಹಾದು ಹೋಗಿರುವದು.

### (ಅ) ಜಲಮಾರ್ಗ.

೧. ಕಾರವಾರದಿಂದ ಭಟಕಳಕ್ಕೆ ಹೋಗುವದು.—ಇದು ಈ ಜಿಲ್ಹೆಯ ಪಶ್ಚಿಮ ದಂಡೆಗುಂಟ ಹೋಗಿರುವದು. ವ್ಯಾಪಾರಸ್ಥರು ದೊಡ್ಡ ದೊಡ್ಡ ಮಚವೆಗಳ ಮೇಲೆ ಸಾಮಾನುಗಳನ್ನು ತುಂಬಿಕೊಂಡು ಹೋಗುವರು. ಉಗಿಹಡಗ (ಆಗಬೋಟು)ಗಳು ಸಪ್ಟಂಬರ ೧೫ ರಿಂದ ಮೇ ೧೫ರ ವರೆಗೆ ಮುಂಬಯಿ ಯಿಂದ ಮಂಗಳೂರ ವರೆಗೆ ತಿರುಗುತ್ತವೆ. ಇವು ಮಚವೆಗಳಿಗಿಂತ ಬೇಗ ಹೋಗುವವು. ಕಾರಣ ವ್ಯಾಪಾರಸ್ಥರು ಇವುಗಳ ಮೇಲೆ ಸಾಮಾನು ಹಾಕಿ ದೂರದೂರದ ಬಂದರಗಳಿಗೆ ಕಳಿಸುವರು. ಜನರಂತೂ ಆಗಬೋಟುಗಳ ಮೇಲೆ ತಿರುಗುವದೇ ಬಹಳ. ಮುಂಬಯಿಯಿಂದ ಹೊರಟ ಬೋಟು ಮಾರ್ಮಾ ಗೋವಾದ ಮೇಲಿಂದ ಪ್ರತಿ ಶನಿವಾರ, ಮಂಗಳವಾರ ರಾತ್ರಿ ೧೨ ಗಂಟೆ ಸುಮಾರಕ್ಕೆ ಕಾರವಾರಕ್ಕೆ ಬರುವದು. ಅಲ್ಲಿಂದ ಬೆಳಗಾಗುವದರೊಳಗೆ ಗೋಕರ್ಣದ ಉತ್ತರಕ್ಕೆ ಅಘನಾಶಿನೀ ನದಿಯ ಮುಖದಲ್ಲಿರುವ ತದಡಿ

ಬಂದರಕ್ಕೆ ಮುಟ್ಟುವದು. ಆ ಮೇಲೆ ಒಂದು ತಾಸಿನೊಳಗೆ ಕುಮಟಾಕ್ಕೆ ಮುಟ್ಟಿ, ಅಲ್ಲಿಂದ ಹೊರಟು ೧೦ ಗಂಟೆಗೆ ಹೊನ್ನಾವರಕ್ಕೂ, ಅನಂತರ ಮಧ್ಯಾಹ್ನದ ಎರಡು ಮೂರು ಗಂಟೆಗೆ ಈ ಜಿಲ್ಹೆಯ ದಕ್ಷಿಣ ತುದಿಗಿರುವ ಭಟಕಳ ಬಂದರಕ್ಕೂ ತಲುಪುವದು. ಈ ಪ್ರಕಾರ ಈ ಜಿಲ್ಹೆಯ ಐದು ಮುಖ್ಯ ಬಂದರಗಳಿಗೆ ಆಗಬೋಟು ಓಡ್ಯಾಡುವ ಈ ಜಲಮಾರ್ಗದ ಉದ್ದಳತೆಯು ಸುಮಾರು ೭೫ ಮೈಲು ಇರುವದು.

೨. ಕೋಡೀಬಾಗದಿಂದ ಕದ್ರಾಕ್ಕೆ ಹೋಗುವದು.—ಇದು ಕಾಳೀ ನದಿಯೊಳಗಿಂದ ಹೋಗುವದು. ಕದ್ರಾದಿಂದ ಮುಂದೆ, ಸುಪಾ-ಹಲ್ಯಾಳ-ಯಲ್ಲಾಪುರಗಳಿಗೆ ಹೋಗುವ ಲೈನಮಾರ್ಗವು ಇರುವದರಿಂದ ಅತ್ತಕಡೆಗೆ ಹೋಗುವ ಜನರೂ ಸಾಮಾನುಗಳೂ ಬಹುಶಃ ಇಲ್ಲಿಂದಲೇ ಹೋಗುವವು. ದಿನಾಲು ಸಾಧಾರಣ ೧೦ ಗಂಟೆಗೆ ಹಡಗಗಳೂ ದೋಣಿಗಳೂ ಹೊರಟು, ರಾತ್ರಿ ಕದ್ರಾಕ್ಕೆ ಮುಟ್ಟಿ, ಅಲ್ಲಿಂದ ಬೆಳಗಾಗುವದರೊಳಗೆ ಕೋಡೀಬಾಗಕ್ಕೆ ಬರುವವು. ಕಾರವಾರದ ಕಡೆಗೆ ಬರುವ ಇಮಾರತಿಯ ಕಟ್ಟಿಗೆಗಳಂತೂ ಈ ಮಾರ್ಗದಿಂದಲೇ ಬರುವವು. ಇದರಲ್ಲಿ ಸುಂಕೇರಿ-ಕಿನ್ನರ ಹಳಗೆ-ಕೆರವಡಿ-ಮಲ್ಲಾಪುರ-ಕುನ್ನಿಪೇಟ ಇವೆಲ್ಲ ಬಂದರಗಳು ಹತ್ತುವವು. ಇದರ ಉದ್ದಳತೆ ಸುಮಾರು ೨೦ ಮೈಲು.

೩. ಗಂಗಾವಳಿಯಿಂದ ಗುಂಡಬಾಳೆಗೆ ಹೋಗುವದು.—ಇದು ಗಂಗಾವಳೀ ನದಿಯೊಳಗಿಂದ ಹೋಗಿರುವದು. ಮುಂದೆ ಗುಂಡಬಾಳೆಯಿಂದ ಯಲ್ಲಾಪುರ, ಸಿರಸಿಗಳಿಗೆ ಹೋಗುವ ಲೈನಮಾರ್ಗಗಳುಂಟು. ಆದರೆ ಅವು ಘೋರವಾದ ಅಡವಿಯಲ್ಲಿ ಇರುವದರಿಂದ ಈ ಮಾರ್ಗಗಳಲ್ಲಿ ತಿರುಗಾಡುವವರು ಕಡಿಮೆ. ಬೋಟು ದಿನಾ ಭರತೆಗೆ ಹೋಗಿ ಇಳತಕ್ಕೆ ತಿರುಗಿ ಬರುವದು.

೪. ತದಡಿಯಿಂದ ಉಪ್ಪಿನ ಪಟ್ಟಣಕ್ಕೆ ಹೋಗುವದು.—ಇದು ಅಘನಾಶಿನೀ ನದಿಯಲ್ಲಿ ಹೋಗುವದು. ಗಟ್ಟದ ಮೇಲಿನ ತಾಲೂಕುಗಳಲ್ಲಿ ಸಿರಸಿಯೇ ದೊಡ್ಡ ಪಟ್ಟಣವು. ಅಲ್ಲಿಗೆ ಹೋಗಬರುವ ಸಾಮಾನುಗಳೆಲ್ಲ ತದಡಿ-ಉಪ್ಪಿನ ಪಟ್ಟಣಗಳ ಮಾರ್ಗವಾಗಿಯೇ ಹೋಗುವವು. ಕಾರಣ ಈ ಮಾರ್ಗದಲ್ಲಿ ಸಾಮಾನುಗಳನ್ನು ಒಯ್ಯುವ ಕಟ್ಟಿಗೆಯ ಬೋಟುಗಳು ಯಾವಾಗಲೂ ಇರುವವು. ಇತ್ತಲಾಗಿ ಘಟ್ಟದ ಮೇಲಿಂದ ಮುಂಬಯಿಗೆ ಹೋಗುವ ಸರಕುಗಳು ಸಹ ನೆಟ್ಟಗೆ ತದಡಿಗೆ ಬಂದು ಬೋಟಿನಿಂದ ಮುಂದೆ ಹೋಗುವವು. ಅದರಿಂದ

ಕುಮಟೆಗೆ ಹೋಗುವದು ಕಡಿಮೆಯಾಗಿದೆ. ಇದರಲ್ಲಿ ಅಘನಾಶಿನಿ-ಕಾಗಾಲ-ಬಾಡ-ಮಾಸೂರು-ಹೆಗಡೆ-ಮಿರ್ಜಾನ-ಮಣಕೆ-ಕಲ್ಲಬ್ಬೆ ಇವೆಲ್ಲ ಬಂದರಗಳಿರುವವು. ಉದ್ದಳತೆ ೨೦ ಮೈಲು.

೫. ಸಾಣೇಕಟ್ಟೆಯಿಂದ ಹಳ್ಳಾರಿಗೆ ಹೋಗುವದು.—ಇದು ಅಘನಾಶಿನಿಯ ಸರಳಿನಲ್ಲಿಯೂ ಹಳ್ಳಾಕರ ಹೊಳೆಯಲ್ಲಿಯೂ ಹೋಗುವದು. ದಿನಾಲು ಎರಡು ಸಾರೆ ಹೋಗಿ ಬರುವದು. ಇಲ್ಲಿಯ ಬೋಟುಗಳಲ್ಲಿ ಪ್ರವಾಸಿಕರಿಗೆ ಬಿಸಿಲು ಮಳೆಗಳ ತ್ರಾಸವಾಗದಂತೆ ವ್ಯವಸ್ಥೆ ಮಾಡಿರುವರು. ಸಾಮಾನುಗಳಿಗಿಂತಲೂ ಗೋಕರ್ಣಕ್ಕೆ ಹೋಗಿ ಬರುವ ಜನರ ದಟ್ಟಣೆಯೇ ಬಹಳ. ಇದು ಪ್ರಸಿದ್ಧವಾಗಿ ೧೦-೧೨ವರ್ಷಗಳಾದವು. ಅಂದಿನಿಂದ ಕುಮಟೆಯಿಂದ ಗೋಕರ್ಣಕ್ಕೆ ಹೋಗಿಬರುವದು ಬಹು ಸುಲಭವಾಗಿದೆ. ಸಾಣೇಕಟ್ಟೆಯಿಂದ ಅಘನಾಶಿನಿ-ಕಾಗಾಲ-ಬಾಡ-ಮಾಸೂರು-ಉಕ್ಕೇರಿ-ಹಳ್ಳಾಕರ ಇವು ಬಂದರಗಳು. ಇದರ ಉದ್ದಳತೆ ೧೨ ಮೈಲು.

೬. ಹೊನ್ನಾವರದಿಂದ ಗೆರಸಪ್ಪೆಗೆ ಹೋಗಿಬರುವದು.—ಇದು ಶಿರಾವತೀ ನದಿಯಲ್ಲಿ ಹೋಗುವದು. ಇದಾದರೂ ದಿನಾಲು ಒಂದು ಸಾರೆ ಹಗಲು ೧೨ ಗಂಟೆಗೆ ಹೊರಟು, ಬೆಳಗಾಗುವದರೊಳಗೆ ತಿರುಗಿ ಬರುವದು. ಕೋಡೀಬಾಗದಿಂದ ಕದ್ರಾಕ್ಕೆ ಹೋಗಿ ಬರುವ ರಸ್ತೆಗೆ ಇದು ಸಮಾಂತರವದೆ. ಆದರೂ ಅದಕ್ಕಿಂತ ಹೆಚ್ಚು ಪ್ರಸಿದ್ಧವುಂಟು. ಹೊನ್ನಾವರವು ಪ್ರಸಿದ್ಧ ಆಗಬೋಟಿನ ಬಂದರವಿದ್ದು, ಜಿಲ್ಹೆಯ ಹಳೇ ರಾಜಧಾನಿಯಾಗಿದೆ. ಗೆರಸಪ್ಪೆಯಿಂದ ಸಿದ್ದಾಪುರ ಮೈಸೂರುಗಳಿಗೆ ಲೈನಮಾರ್ಗವು ಹೋಗಿದೆ. ಕೋಡೀಬಾಗದಿಂದ ಕದ್ರಾಕ್ಕೆ ಹೋಗುವ ರಸ್ತೆಯಲ್ಲಿದ್ದಷ್ಟು ಅಡವಿಗಳೂ ಇಲ್ಲಿ ಇಲ್ಲ. ಆದಕಾರಣ ಈ ಮಾರ್ಗದಿಂದಲೇ ಜನರೂ ಸಾಮಾನುಗಳೂ ತಿರುಗಾಡುವದು ಬಹಳ. ಇದಲ್ಲದೆ ಗೆರಸಪ್ಪೆಯ ಧಬಧಬೆಯನ್ನು ನೋಡುವದಕ್ಕೆ ಹೋಗುವ ಜನರ ತಿರುಗಾಟವೂ ವಿಶೇಷ. ಈ ಮಾರ್ಗವು ಸರಾಸರಿ ೧೮ ಮೈಲು ಉದ್ದ ಇರುವದು. ಹಾದಿಯಲ್ಲಿ ಇಡಗುಂಜಿ, ಮಾವಿನ ಕುರುವೆ ಇವು ಇರುವವು.

## (ಬ) ಲೈನಮಾರ್ಗಗಳು.

೧. ಕಾರವಾರ ಭಟಕಳ ರಸ್ತೆ.—ಇದು ಗೋವಾಪ್ರಾಂತದಲ್ಲಿ ಮಡಗಾಂವದಿಂದ ಹೊರಟು ಕಾಣಕೋಣದ ಮೇಲಿಂದ ಗೋವೆಯನ್ನು ದಾಟಿ ಮಾಜಾ

ಳಿಯ ಹತ್ತರ ಕಾರವಾರ ತಾಲೂಕನ್ನು ಸೇರುವದು. ಅಲ್ಲಿಂದ ಸದಾಶಿವಗಡಕ್ಕೆ ಐದು ಮೈಲು ಬಂದ ಕೂಡಲೆ ಸದಾಶಿವಗಡದ ತಾರಿಯನ್ನು ದಾಟಿ, ಕೋಡೀಬಾಗ ದಿಂದ ಕಾರವಾರ-ಬಿಣಗೆ-ಅರಗೆ-ಚಂಡಿಯೆ-ಅಮದಳ್ಳಿ-ಅವುರ್ಸಾ-ಅಂಕೋ ಲಾ-ಮಿರ್ಜಾನ ವರೆಗೆ, ಕೋಡೀಬಾಗದಿಂದ ೩೫ ಮೈಲು ಹೋದ ಬಳಿಕ ಹೆಗಡೆ ತಾರಿಯನ್ನು ದಾಟಿ, ಹೆಗಡೆ-ಕುಮಟೆಗಳ ವರೆಗೆ ನಾಲ್ಕು ಮೈಲು ಬಂದು, ಬಡಗಣಿ ಹೊಳೆಯನ್ನು ದಾಟಿ, ಅಲ್ಲಿಂದ ಧಾರೇಶ್ವರ ಹೊಳೆ ಗದ್ದೆಗೆ ಆರು ಮೈಲು ಬಂದು, ಬಡಗಣಿ ಹೊಳೆಯನ್ನು ದಾಟಿ, ಅಲ್ಲಿಂದ ಹಳದೀಪುರ-ಕರ್ಕಿ-ಹೊನ್ನಾವರಗಳ ವರೆಗೆ ಆರು ಮೈಲು ಬಂದು, ಹೊನ್ನಾವರ ತಾರಿ ಯನ್ನು ದಾಟಿ, ಅಲ್ಲಿಂದ ಕಾಸರಕೋಡ-ಬೈಲೂರು-ಮುರಡೇಶ್ವರ-ಶಿರಾಲಿಗಳ ಮೇಲಿಂದ (ಹೊನ್ನಾವರದಿಂದ ೨೫ ಮೈಲು ನಡೆದು) ಭಟಕಳ ಪಟ್ಟಣವನ್ನು ಮುಟ್ಟುವದು. ಇದೇ ಟಪಾಲ ಮಾರ್ಗವು.

ಕುಮಟೆಯಿಂದ ಹೆರವಟ್ಟಿ-ವಾಲಗಳ್ಳಿ-ಚಂದಾವರ-ಹೆಬ್ಬಾನಕೆರೆಗಳ ಮೇಲಿಂದಲೂ ಹೊನ್ನಾವರಕ್ಕೆ ೧೬ ಮೈಲಿನಲ್ಲಿ ಬರಬಹುದು. ಅಲ್ಲಿ ಹೊಳೆ ದಾಟುವ ಅವಶ್ಯಕತೆಯೂ ಇಲ್ಲ. ಆದರೂ ಧಾರೇಶ್ವರ-ಹಳದೀಪುರ-ಕರ್ಕಿ ಪೋಸ್ಟುಗಳ ಸಲುವಾಗಿ, ಆದನ್ನೇ ಟಪಾಲರಸ್ತೆಯನ್ನಾಗಿ ಮಾಡಿರುವರು.

೨. ಕುಮಟಾ-ಸಿರಸಿರಸ್ತೆ.— ಕುಮಟೆಯಿಂದ ಪೂರ್ವಕ್ಕೆ ೨ ಮೈಲು ಹೋದ ತರುವಾಯ ಮಣ್ಕೆ ತಾರಿಯನ್ನು ದಾಟಿ, ಅಲ್ಲಿಂದ ದಿವಗಿ-ಉಪ್ಪಿನಪಟ್ಟಣ-ಕತ ಗಾಲು-ಆನೇಗುಂಡಿ-ದೇವೀಮನೆ-ಬಂಡ್ಲ-ಸಂಪಖಂಡಗಳ ಮೇಲಿಂದ (ಕುಮಟೆ ಯಿಂದ ೩೮ ಮೈಲು) ಹೋಗಲು, ಸಿರಸೀಪಟ್ಟಣವು ಹತ್ತುವದು. ಇದೇ ಮಾರ್ಗವು ಇಸಳೂರು-ದಾಸನಕೊಪ್ಪ-ಆಡೂರು-ಆಲೂರುಗಳಿಂದ ಹಾವೇರಿಗೆ ಹೋಗುವದು. ಇದಾದರೂ ಟಪಾಲಮಾರ್ಗವೇ ಸರಿ.

೩. ಸಿದ್ದಾಪುರ-ಹಲ್ಯಾಳರಸ್ತೆ.— ಸಿದ್ದಾಪುರದಿಂದ ಉತ್ತರಕ್ಕೆ ತಿರುಗಿ, ತ್ಯಾಗ್ಲಿ ಕಾನಗೋಡಗಳ ಮೇಲಿಂದ ಸಿರ್ಸಿಗೆ ಸುಮಾರು ೨೩ ಮೈಲು ನಡೆದು, ಅಲ್ಲಿಂದ ಹಾಗೇ ಉತ್ತರಕ್ಕೆ ಇರುವ ಬೊಮ್ಮನಹಳ್ಳಿ-ಸ್ವಾದಿ-ಮಂಚೀಕೇರಿ-ಯಲ್ಲಾಪುರಗಳಿಗೆ ಸುಮಾರು ೩೦ ಮೈಲು ಹೋಗಿ, ಅಲ್ಲಿಂದ ಭಾಗವತಿ-ಸಾವಿಮ್ರಾಣಿಗಳ ಮೇಲಿಂದ ಸುಮಾರು ೨೬ ಮೈಲು ನಡೆಯಲು, ಹಲ್ಯಾಳಪಟ್ಟ ಣವು ಬರುವದು.

೪. ಸಿದ್ದಾಪುರ-ಗೇರಸಪ್ಪಾ ರಸ್ತೆ.— ಇದು ಸಿದ್ದಾಪುರದಿಂದ ದಕ್ಷಿಣಕ್ಕೆ

ಹೊರಳಿ, ೧೦ ಮೈಲು ನಡೆದು ಕೋಡಕಣಿಗೆ ಮುಟ್ಟಿ, ಅಲ್ಲಿಂದ ಪಶ್ಚಿಮಕ್ಕೆ ಮಲ್ಲೀಮನೆ ಘಟ್ಟ ಇಳಿದು, ೧೮ ಮೈಲು ನಡೆದು ಗೆರಸಪ್ಪೆಗೆ ತಲುಪುವದು.

೫. ಕುಮಟಾ-ಸಿದ್ದಾಪುರ ರಸ್ತೆ.—ಕುಮಟೆಯಿಂದ ಆಗ್ನೇಯಕ್ಕೆ ತಿರುಗಿ, ಹೆರವಟ್ಟೆ-ವಾಲಗಳ್ಳಿ-ಚಂದಾವರ-ಸಾಂತಗಲ್ಲುಗಳ ವರೆಗೆ ೮ ಮೈಲು ನಡೆದು, ಅಲ್ಲಿಂದ ಬಡಹಳ್ಳಕ್ಕೆ ೭ ಮೈಲು ಹೋಗಿ, ಆ ಮೇಲೆ ಎರಡು ಶಾಖೆಗಳಾಗುವವು. ಒಂದು, ದೊಡ್ಡಮನೆ ಘಟ್ಟವನ್ನೇರಿ, ಕ್ಯಾದಗಿ-ಬಿಳಗಿ-ಬೇಡಕಣಿಗಳಲ್ಲಿ ಹಾದು, ಬಡಹಳ್ಳದಿಂದ ೨೯ ಮೈಲಿನ ಮೇಲೆ ಸಿದ್ದಾಪುರಕ್ಕೆ ಮುಟ್ಟುವದು. ಮತ್ತೊಂದು ನಿಲಕುಂದಘಟ್ಟವನ್ನೇರಿ, ಹೊಸತೋಟ-ಬಾಳೇಕೊಪ್ಪ-ಹಾರ್ಶಿಕಟ್ಟೆಗಳ ಮೇಲಿಂದ, ಬಡಹಳ್ಳದಿಂದ ೩೨ ಮೈಲಿನ ಮೇಲೆ ಸಿದ್ದಾಪುರಕ್ಕೆ ತಲುಪುವದು.

೬. ಸಿರಸಿ-ಧಾರವಾಡ ರಸ್ತೆ.—ಈ ಮಾರ್ಗವು ಈಶಾನ್ಯಕ್ಕೆ ಒಲಿದು, ಇಸಳೂರ-ಮಳಗಿ-ಪಾಳಾಗಳ ವರೆಗೆ ಬಂದು, ಅಲ್ಲಿ ಎರಡು ಶಾಖೆಗಳಾಗಿ, ಒಂದು ಪೂರ್ವಕ್ಕೆ ಒಲಿದು, ಹಾನಗಲ್ಲ ಮೇಲಿಂದಲೂ, ಮತ್ತೊಂದು ಉತ್ತರಕ್ಕೆ ತಿರುಗಿ, ಚಿಗಳ್ಳಿ-ಮುಂಡಗೋಡಗಳ ಮೇಲಿಂದ ಧಾರವಾಡಕ್ಕೆ ಹೋಗುವದು.

೭. ಸಾಣೇಕಟ್ಟೆಯಿಂದ ಸಿರಸಿಗೆ ಹೋಗುವ ರಸ್ತೆ.—ಅಡವಿ ಬಹಳ. ಪೂರ್ವಕ್ಕೆ ಹಿರೇಗುತ್ತಿ-ಮಾದನ್ಗೇರಿ-ಹಿಲ್ಲೂರು-ಅಚವೆ-ಶಿವಳ್ಳಿ-ಶಿರಳಗಿಗಳ ಮೇಲಿಂದ ಹೋಗುವದು.

೮. ಅಂಕೋಲಾದಿಂದ ಯಲ್ಲಾಪುರಕ್ಕೆ ಹೋಗುವದು.—ಅಂಕೋಲಾದಿಂದ ಪೂರ್ವಕ್ಕೆ ಅಗಸೂರು-ಸುಂಕಸಾಳಗಳ ಮೇಲಿಂದ ಅರಬೈಲಘಟ್ಟವನ್ನೇರಿ, ಇಡಗುಂದಿಯ ಮೇಲಿಂದ ಯಲ್ಲಾಪುರಕ್ಕೆ ಮುಟ್ಟುವದು.

೯. ಕಾರವಾರ-ಯಲ್ಲಾಪುರ ರಸ್ತೆ.—ಪೂರ್ವಕ್ಕೆ ಶೇಜವಾಡ-ಕಡವಾಡ-ಕಿನ್ನರ-ಖಾರಗೆ-ಮಲ್ಲಾಪುರಗಳಿಂದ ಮುಂದೆ ಗಣೇಶಗುಡಿ ಘಟ್ಟವನ್ನೇರಿ ಮಾವಿನಮನೆ-ಹೊನ್ನಗದ್ದೆ-ಇಡಗುಂದಿಗಳ ಮೇಲಿಂದ ಯಲ್ಲಾಪುರಕ್ಕೆ ಹೋಗುವದು. ಈ ಮಾರ್ಗದಿಂದ ಪ್ರವಾಸಮಾಡುವ ರೂಢಿಯು ಕಡಿಮೆ.

೧೦. ಕಾರವಾರ ಸದಾಶಿವಗಡದಿಂದ ಹಳ್ಯಾಳಕ್ಕೆ ಹೋಗುವ ರಸ್ತೆ.—ಸದಾಶಿವಗಡದಿಂದ ಪೂರ್ವಕ್ಕೆ ಹೊರಳಿ, ಹಣಕೋಣ-ಕದ್ರಾಗಳ ಮೇಲಿಂದ ಅಣಸಿ

ಘಟ್ಟವನ್ನೇರಿ, ಸುಜ್ಜಿ-ಚೋಯಿಡಾಗಳ ಮೇಲಿಂದ ಸುಪೆಗೂ ಅಲ್ಲಿಂದ ಹಲ್ಯಾಳಕ್ಕೂ ಹೋಗಿರುವದು.

ಇವಲ್ಲದೆ ಇನ್ನೂ ಅನೇಕ ಮಾರ್ಗಗಳು ಅಲ್ಲಲ್ಲಿ ಜೋಡಿಸಲ್ಪಟ್ಟವೆ. ಅವುಗಳನ್ನು ನಕಾಶದ ಮೇಲಿಂದ ಕಲಿಸಬಹುದು.

## ೮ನೆಯ ಪ್ರಕರಣ.

### ವ್ಯಾಪಾರವು.

ಕಾನಡಾ ಜಿಲ್ಹೆಯವರ ಮುಖ್ಯ ಉದ್ಯೋಗವು ಕೃಷಿಯೇ ಸರಿ; ವ್ಯಾಪಾರವು ತಕ್ಕ ಮಟ್ಟಿಗೆ ಇರುವದು; ಕೈಗಾರಿಕೆಗಳೂ ಕಡಿಮೆ.

ವ್ಯಾಪಾರವೆಂದರೇನು?—ಒಂದು ಪ್ರಾಂತದವರು ತಮ್ಮಲ್ಲಿ ಹೆಚ್ಚಾಗಿ ಹುಟ್ಟುವ ಕಚ್ಚಾಮಾಲನ್ನೂ, ತಮ್ಮಲ್ಲಿ ತಯಾರಾಗುವ ಕೈಗಾರಿಕೆಯ ಸರಕುಗಳನ್ನೂ, ಬೇರೆಯವರಿಗೆ ಕೊಟ್ಟು, ತಮಗೆ ಅವಶ್ಯವಿದ್ದು ತಮ್ಮಲ್ಲಿ ಹುಟ್ಟದೆ ಇದ್ದ ಇಲ್ಲವೆ ತಯಾರಾಗದೆ ಇದ್ದ ಸರಕುಗಳನ್ನು ಅವರಿಂದ ತೆಗೆದುಕೊಳ್ಳುವದು ವ್ಯಾಪಾರವು. ತಾವು ಸರಕು ಹೆಚ್ಚಾಗಿ ಮಾರಿ, ಕಡಿಮೆ ತರಿಸಿದರೆ ಹಣವನ್ನು ಪ್ರತಿಯಾಗಿ ತೆಗೆದುಕೊಳ್ಳುವದು ಸ್ವಾಭಾವಿಕವಾದದ್ದು. ಮನುಷ್ಯರಿಗೆ ಅವಶ್ಯವಾದ ಎಲ್ಲ ಪಾದಾರ್ಥಗಳು ಒಂದೇ ಕಡೆಗೆ ಹುಟ್ಟುವದಿಲ್ಲ; ಹಾಗೂ ತಯಾರಾಗುವದಿಲ್ಲ; ಹಾಗೂ ಕೆಲವುಗಳನ್ನು ತರಿಸಲಿಕ್ಕೆ ಅನುಕೂಲವೂ ಇರುವದಿಲ್ಲ. ಆದ್ದರಿಂದ ನಮ್ಮಲ್ಲಿ ಬೆಳೆಯುವ ಇಲ್ಲವೆ ತಯಾರಾಗುವ ಸರಕುಗಳನ್ನು ಅವಶ್ಯವಿದ್ದವರಿಗೆ ಕಳಿಸಿ, ಅವರಲ್ಲಿ ಹುಟ್ಟುವ ಇಲ್ಲವೆ ತಯಾರಾಗುವ ಪದಾರ್ಥಗಳನ್ನು ನಾವು ತರಿಸಿಕೊಳ್ಳುವದು ಇಬ್ಬರಿಗೂ ಲಾಭಕರವು.

ಇನ್ನು, ಒಂದು ಸೀಮೆಯ ವ್ಯಾಪಾರವು ಹೆಚ್ಚಾಗಿ ನಡೆಯಬೇಕಾದರೆ, ಅದಕ್ಕೆ ಹಲವು ಅನುಕೂಲಗಳು ಇರಬೇಕಾಗುವವು. ಅವು ಯಾವವೆಂದರೆ:—

೧. ದೇಶದಲ್ಲಿ ಹೆಚ್ಚಾಗಿ ಹುಟ್ಟುವ ಕಚ್ಚಾಮಾಲಾಗಲಿ, ತಯಾರಾಗುವ ಕೈಗಾರಿಕೆಯ ಸರಕುಗಳಾಗಲಿ, ಸುತ್ತಲಿರುವ ಪ್ರದೇಶದವರಿಗೆ ಬೇಕಾಗಿರಬೇಕು.

೨. ದೇಶದಿಂದ ದೇಶಗಳಿಗೆ ಹೋಗಲಿಕ್ಕೆ ಮಾರ್ಗಗಳಿರಬೇಕು.

೩. ದೇಶವು ಸುತ್ತಲಿರುವ ದೇಶಗಳ ಸರಕುಗಳನ್ನು ಖರೀದಿಮಾಡಿ, ನಾಲ್ಕೂ ಕಡೆಗೆ ಕಳಿಸುವಂಥ ಸ್ಥಳದಲ್ಲಿರಬೇಕು.

ಇನ್ನು, ಈ ಜಿಲ್ಹೆಯಲ್ಲಿ ಹುಟ್ಟುವ ಸಾಮಾನುಗಳಲ್ಲಿ ಪರಸ್ಥಳಕ್ಕೆ ಹೋಗುವಂಥವು:—ತೆಂಗಿನಕಾಯಿ, ಎಣ್ಣೆ, ಅಡಿಕೆ, ಯಾಲಕ್ಕಿ, ಮೆಣಸು, ಮಾವಿನ ಹಣ್ಣು, ವೀಳ್ಯದೆಲೆ, ಬೆಲ್ಲ, ಗೋವೇಬೀಜ (ಗೋಡಂಬಿ), ಕಗ್ಗನ ಅಕ್ಕಿ* ಇವೇ ಮುಖ್ಯ.

---

* ಕರಾವಳಿ ಸೀಮೆಯ ಕರೇ ಬತ್ತದಿಂದ ಮಾಡಿದ್ದು; ಇದಕ್ಕೆ ಕುಚ್ಚಲಕ್ಕಿ ಎಂತಲೂ ಅನ್ನುವರು.

ಕೈಗಾರಿಕೆಯ ಸಾಮಾನುಗಳಲ್ಲಿ ಗಂಧದ ಬೀಸಣಿಕೆ-ಮೂರ್ತಿ-ಪೆಟ್ಟಿಗೆ ಹಾಗೂ ಬೇರೆ ಚಿತ್ರ ವಿಚಿತ್ರ ಸಾಮಾನುಗಳೂ, ಕಾತಿಯೂ ಅದರ ಹಗ್ಗಗಳೂ, ಬೆತ್ತದ ಸಾಮಾನುಗಳೂ ಇವೇ ಮುಖ್ಯ.

ಇತರ (ಮನುಷ್ಯ ಪ್ರಯತ್ನವಿಲ್ಲದ) ಸಾಮಾನುಗಳಲ್ಲಿ ಇಮಾರತಿಯ ಕಟ್ಟಿಗೆ-ಉಪ್ಪು-ಒಣಮೀನು-ಅಳಲೇಕಾಯಿ-ಸೀಗೇಕಾಯಿ-ಜೇನತುಪ್ಪ-ಮೇಣ ಇವೇ ಮುಖ್ಯ.

ಮೇಲೆ ಹೇಳಿದ ಎಲ್ಲ ಸಾಮಾನುಗಳು ಬಹುಶಃ ಮುಂಬಯಿ-ಧಾರವಾಡ-ಹುಬ್ಬಳ್ಳಿ ಮುಂತಾದ ಪಟ್ಟಣಗಳಿಗೆ ಹೋಗುವದೇ ಬಹಳ; ಆದರೆ ಕಗ್ಗನ ಅಕ್ಕಿಯು ಮಾತ್ರ ಗೋವೇ ಸೀಮೆಗೆ ಹೋಗುವದು.

ಅಡಿಕೆ-ಯಾಲಕ್ಕಿ-ಮೆಣಸುಗಳನ್ನು ಸಿರಸಿ-ಯಲ್ಲಾಪುರ-ಸಿದ್ದಾಪುರ ತಾಲೂಕುಗಳಿಂದ ಒಟ್ಟುಮಾಡಿ ಕಳಿಸುವರು. ಈ ಕೆಲಸಕ್ಕೆ ಘಟ್ಟದ ಮೇಲೆ ಯಲ್ಲಾಪುರ ತಾಲೂಕಿನಲ್ಲಿ ಯಲ್ಲಾಪುರ-ಮಂಚೀಕೇರಿಗಳೂ, ಸಿರಸೀ ತಾಲೂಕಿನಲ್ಲಿ ಹುಳೀಕಲ್ಲು-ಸಿರಸಿಗಳೂ, ಸಿದ್ದಾಪುರ ತಾಲೂಕಿನಲ್ಲಿ ಸಿದ್ದಾಪುರ-ಬೀಳಗಿಗಳೂ, ಘಟ್ಟದ ಕೆಳಗೆ-ಕುಮಟಾ-ಉಪ್ಪಿನ ಪಟ್ಟಣ-ಹೊನ್ನಾವರ-ಭಟಕಳ-ಗೆರಸಪ್ಪಾ ಪಟ್ಟಣಗಳೂ ಇರುವವು. ಇವುಗಳಲ್ಲಿ ಘಟ್ಟದ ಮೇಲೆ ಸಿರಸಿ, ಕೆಳಗೆ ಕುಮಟಾ ಮಧ್ಯ ಸ್ಥಳಗಳಾದದರಿಂದ ಅಲ್ಲಿ ದೊಡ್ಡ ದೊಡ್ಡ ದಲಾಲರೂ ವ್ಯಾಪಾರಸ್ಥರೂ ಬಹಳ ಮಂದಿ ಇರುವರು. ಇವರ ಕೈಕೆಳಗೆ ಉಳಿದ ಪಟ್ಟಣಗಳಲ್ಲಿ ಚಿಕ್ಕ ಪುಟ್ಟ ವ್ಯಾಪಾರಸ್ಥರಿದ್ದು, ಹಳ್ಳಿಯೊಳಗಿನ ಸರಕುಗಳನ್ನು ಒಟ್ಟುಗೂಡಿಸಿ ತಂದುಕೊಡುವರು. ಮುಂಬಯಿ-ಧಾರವಾಡ-ಹುಬ್ಬಳ್ಳಿಗಳಿಂದ ಕಾರವಾರ ಜಿಲ್ಹೆಗೆ ಸರಕುಗಳನ್ನು ತಂದುಕೊಡುವದಕ್ಕೆ ಮೇಲೆ ಹೇಳಿದ ದಲಾಲರ ಕಡೆಯ ವ್ಯಾಪಾರಿಗಳು ಇರುವರು. ಇದಕ್ಕಾಗಿ ವ್ಯಾಪಾರದ ಹಂಗಾಮಿನಲ್ಲಿ ದೊಡ್ಡ ದೊಡ್ಡ ಮುಸಲ್ಮಾನರು ಸಿರಸಿಯಲ್ಲಿ ವಾಸಮಾಡುವರು. ಘಟ್ಟದ ಮೇಲಿನ ಹವಿಕ ಜನರೆಲ್ಲ ಮಂದಬುದ್ಧಿಯವರಾಗಿರುವದರಿಂದ ಸಿರಸಿ-ಮಂಚೀಕೇರಿ-ಹುಳೀಕಲ್ಲು-ಬೀಳಗಿಗಳಲ್ಲಿ ಕರಾವಳಿಯ ಹವಿಕರೂ ಗೌಡಸಾರಸ್ವತರೂ ವಾಣೀ ಜನರೂ ವ್ಯಾಪಾರ ದಲಾಲಿಗಳನ್ನು ಮಾಡಿಕೊಂಡು ಇರುವರು.

ಈ ಜಿಲ್ಹೆಯಲ್ಲಿ ವ್ಯಾಪಾರದ ಸಲುವಾಗಿ ಕೆಳಗೆ ಬರೆದ ೧೦ ಪಟ್ಟಣಗಳು ಹೆಸರಾಗಿವೆ. ಅವುಗಳಲ್ಲಿ ೮ ಘಟ್ಟದ ಕೆಳಗೆ ೨ ಘಟ್ಟದ ಮೇಲೆ ಇರುವವು. ಇವು ಪ್ರಸಿದ್ಧವಾಗಿರುವ ಕಾರಣವು ಕೆಳಗೆ ವಿವರಿಸಲ್ಪಟ್ಟಿರುವದು.

೧. ಕುಮಟಾ.—ದಕ್ಷಿಣ ಮಹಾರಾಷ್ಟ್ರದಲ್ಲಿ ಲೋಹಮಾರ್ಗವು ಆಗುವದಕ್ಕೆ ಮುಂಚೆ ಅಂದರೆ ೫೦ ವರ್ಷಗಳ ಮುಂಚೆ ಧಾರವಾಡ ಜಿಲ್ಹೆಯ ವ್ಯಾಪಾರವು ಹುಬ್ಬಳ್ಳಿಯಿಂದ ಕುಮಟೆಗೆ ಬಂದು, ಮುಂದೆ ಆಗಬೋಟಿನಿಂದ ಮುಂಬಯಿಗೆ ಹೋಗುತ್ತಿತ್ತು. ಹಾಗೂ ಮುಂಬಯಿಯಿಂದ ಬಂದ ಸರಕುಗಳು ಅಲ್ಲಿಂದಲೇ ದಕ್ಷಿಣಮಹಾರಾಷ್ಟ್ರದ ದೊಡ್ಡ ದೊಡ್ಡ ಪಟ್ಟಣಗಳಿಗೆ ಕಳುಹಿಸಲ್ಪಡುತ್ತಿದ್ದವು. ಆಗ್ಗೆ ದೊಡ್ಡ ದೊಡ್ಡ ಗುಜ್ಜರ ವ್ಯಾಪಾರಸ್ಥರೂ ದಲಾಲರೂ ಇಲ್ಲಿ ವಾಸಮಾಡಿ, ಭವ್ಯವಾದ ವಖಾರಗಳನ್ನೂ ಸುಂದರವಾದ ಮನೆಗಳನ್ನೂ ಕಟ್ಟಿಸಿಕೊಂಡು ಇದ್ದರು. ಇತ್ತಲಾಗಿ ಇಲ್ಲಿಯ ವ್ಯಾಪಾರವು ಕಡಿಮೆಯಾಗಿದೆ. ಈಗ ಹವಿಕರೂ ಗೌಡಸಾರಸ್ವತರೂ ವ್ಯಾಪಾರಕ್ಕಾಗಿ ಹೆಸರಾಗಿರುವರು. ಕುಮಟಾದ ಹತ್ತರ ಮಣಿಕಿ ಎಂಬಲ್ಲಿ ಮಂಗಳೂರ ಹಂಚುಗಳು ಆಗುತ್ತವೆ. ವರ್ಷಕ್ಕೆ ಆಗುವ ಹಂಚುಗಳು ೩ ಲಕ್ಷ. ಉತ್ಪನ್ನ ರೂಪಾಯಿ ೧೦,೦೦೦.

೨. ಭಟಕಳ.—ಇಲ್ಲಿ ನವಾಯತರೆಂಬ ಮುಸಲ್ಮಾನರೇ ವ್ಯಾಪಾರದ ಸಲುವಾಗಿ ಪ್ರಸಿದ್ಧರು. ಕಾರವಾರದಿಂದ ಇಲ್ಲಿಗೆ ಇರುವ ಜಲಮಾರ್ಗದ ಕಡೆಯ ತುದಿಯು ಇದೇ. ಆಗಬೋಟು ವಾರಕ್ಕೆ ಎರಡು ಸಾರೆ ಇಲ್ಲಿಗೆ ಬರುವದು.

೩. ಹೊನ್ನಾವರ.—ವ್ಯಾಪಾರಸ್ಥರು ಹೆಚ್ಚಾಗಿ ಇರುವರು. ಅವರಲ್ಲಿ ಗೌಡಸಾರಸ್ವತರೇ ವಿಶೇಷ. ಇಲ್ಲಿ ಗುಲಾಲುಮಾಡುವ ಒಂದು ಕಾರಖಾನೆಯುಂಟು. ಹಾಗೂ ಮಾವಿನಹಣ್ಣಿನ ವಡಿಗಳನ್ನು ಮಾಡುವ ಉದ್ಯೋಗವೂ ನಡೆದದೆ. ಈಗ ಈ ಕಾರಖಾನೆಯನ್ನು ಅಂಕೋಲೆಗೆ ಒಯ್ದಿರುವರು.

೪. ಕಾರವಾರ.—ಮುಂಬಯಿ ಇಲಾಖೆಯಲ್ಲಿ ಹೆಸರಾದ ಬಂದರವು. ಹಿಂದುಸ್ತಾನದ ಪಶ್ಚಿಮದಂಡೆಗಿರುವ ಬಂದರಗಳಲ್ಲಿ ಇದು ಹೆಚ್ಚು ಸುರಕ್ಷಿತವಾಗಿರುವದು.

೫. ತದಡಿ.—ಇಲ್ಲಿ ಅಕ್ಕಿ-ಕಟ್ಟಿಗೆಗಳ ವ್ಯಾಪಾರವು ಬಹಳ. ಇದು ದೊಡ್ಡ ವ್ಯಾಪಾರಸ್ಥಳವಿರುವದು. ಇದು ಗೋಕರ್ಣಕ್ಕೆ ಸಮೀಪವಾದ ಬಂದರವಾಗಿರುವದರಿಂದ ಇದರ ಮಹತ್ವವು ಬೆಳೆದಿದೆ. ಸಿರಸಿಯಿಂದ ಬಂದ ಯಾಲಕ್ಕಿ, ಅಡಿಕೆಗಳು ಇಲ್ಲಿಂದ ಮುಂಬಯಿಗೆ ಹೋಗುತ್ತವೆ.

೬. ಸಾಣೇಕಟ್ಟೆ.—ಇಲ್ಲಿ ಉಪ್ಪು ತಯಾರಮಾಡುವ ಸರಕಾರೀ ಕಾರ

ಖಾನೆಯದೆ. ಆದ್ದರಿಂದ ಇಲ್ಲಿ ಉಪ್ಪಿನ ವ್ಯಾಪಾರವೇ ಬಹಳ. ವರ್ಷಕ್ಕೆ ೧೫೮೬೭೭ ಮಣ ಉಪ್ಪು ಹುಟ್ಟುವದು. ಮಣಕ್ಕೆ ೧⅔ ರೂಪಾಯಿ ಕರ ಕೊಡಬೇಕಾಗುವದು.

೭. ಉಪ್ಪಿನ ಪಟ್ಟಣ.— ಸಾಣೇಕಟ್ಟೆಯಲ್ಲಿ ತಯಾರಾದ ಉಪ್ಪು ಇಲ್ಲಿಗೆ ಬಂದು ಘಟ್ಟದ ಮೇಲೆ ಹೋಗುವದರಿಂದ ಇದಕ್ಕೆ ಈ ಹೆಸರು ಬಂದದೆ. ಬತ್ತ, ತಂಬಾಕ, ಮೆಣಸಿನಕಾಯಿಗಳು ಈ ಊರಮಾರ್ಗವಾಗಿ ಘಟ್ಟದ ಕೆಳಗೆ ಬರುತ್ತವೆ.

೮. ಗೆರಸಪ್ಪೆ.— ಮೈಸೂರಪ್ರಾಂತದಲ್ಲಿ ಬೆಳೆಯುವ ಸರಕುಗಳ ಅಂದರೆ ಬತ್ತ, ಮೆಣಸಿನಕಾಯಿಗಳ ವ್ಯಾಪಾರವು ಇಲ್ಲಿ ಬಹಳ ಆಗುತ್ತದೆ.

೯. ಸಿರಸಿ.— ಇದು ಘಟ್ಟದ ಮೇಲಿನ ದೊಡ್ಡ ಶಹರವಾದುದರಿಂದಲೂ, ಈ ಊರ ಸುತ್ತಲೂ, ಅಡಿಕೆ, ಮೆಣಸು, ಯಾಲಕ್ಕಿಗಳು ಹೇರಳವಾಗಿ ಬೆಳೆಯುವದರಿಂದಲೂ, ವ್ಯಾಪಾರಕ್ಕೆ ಅನುಕೂಲವಾದ ಮಾರ್ಗಗಳಿರುವದರಿಂದಲೂ ಇಲ್ಲಿ ವ್ಯಾಪಾರವು ಬಹಳ ನಡೆಯುವದು. ಈ ಊರಲ್ಲಿ ದಲಾಲರು ಕೆಲವರಿರುವರು. ಈ ಪಟ್ಟಣದ ಹತ್ತರ ನಿಲೇಕಣಿಯಲ್ಲಿ ಬತ್ತ ಒಡೆದು ಅಕ್ಕಿಯನ್ನು ಮಾಡುವ ಕಾರಖಾನೆ ಇರುವದು.

೧೦. ಮಂಚಿಕೇರಿ.— ಯಲ್ಲಾಪುರ ತಾಲೂಕಿನಲ್ಲಿರುವದು. ಇಲ್ಲಿಂದ ಯಾಲಕ್ಕಿ, ಅಡಿಕೆ, ಮೆಣಸುಗಳನ್ನು ಪರಸ್ಥಳಕ್ಕೆ ಕಳುಹಿಸುವರು.

ಬ್ಯಾಡಗಿ, ಆಲೂರ, ಹಾನಗಲ್ಲಗಳ ಕಡೆಯಿಂದ ಲಿಂಗಾಯಿತರು ಎಮ್ಮೆಗಳನ್ನೂ, ದಕ್ಷಿಣಕಾನಡಾದಿಂದ ನಾಡವರು ಎತ್ತುಗಳನ್ನೂ ಪ್ರತಿವರ್ಷ ತಂದು, ಸಿರಸಿ, ಮಿರ್ಜಾನ್, ಗೋಕರ್ಣ, ಕುಮಟಾ, ಅಂಕೋಲಾ, ಕದ್ರಾ ಮುಂತಾದ ಊರುಗಳಲ್ಲಿ ಮಾರಾಟಮಾಡುವರು.

ಈ ಜಿಲ್ಲೆಯಲ್ಲಿ ವ್ಯಾಪಾರೀ ಜನರ ಸಂಖ್ಯೆಯು ಒಟ್ಟು ೩೪,೪೦೭ ಇರುವದು.

# ೧೦ನೆಯ ಪ್ರಕರಣ.

## ಸರಕಾರವು.

ಪ್ರಜೆಗಳನ್ನು ಕ್ಷೇಮದಿಂದಲೂ ಸುಖದಿಂದಲೂ ಇಡುವದು ಸರಕಾರದ ಕರ್ತವ್ಯವಾಗಿರುತ್ತದೆ. ಮೊದಲು ಆಗಾಗ್ಗೆ ದಂಗೆಗಳೂ ಯುದ್ಧಗಳೂ ಆಗಿ ಭೂಮಿಗಳು ಹಾಳು ಬಿದ್ದು, ಲಕ್ಷಾವಧಿ ಜನರು ಮಡಿಯುತ್ತಿದ್ದರು. ಆದರೆ ಇಂಗ್ಲಿಷ ಸರಕಾರವಾದಂದಿನಿಂದ ಕ್ರಮೇಣ ಅವು ನಾಶವಾಗಿ, ಜನರು ಸುಖಿ ಗಳೂ ಉದ್ಯೋಗಿಗಳೂ ಆಗುತ್ತ ನಡೆದಿರುವರು.

ಸರಕಾರವು ಬೇರೆ ಬೇರೆ ಕೆಲಸಗಳನ್ನು ಮಾಡಲಿಕ್ಕೆ ಅಧಿಕಾರಸ್ಥರನ್ನು ನಿಯಮಿಸಬೇಕಾಯಿತಷ್ಟೇ? ಅವರಿಗೆ ಸಂಬಳ ಕೊಡಲಿಕ್ಕೆ ಹಣವು ಬೇಕಾ ಯಿತು. ಅದನ್ನು ತೆರಿಗೆಗಳ ರೂಪದಿಂದ ಜನರಿಂದಲೇ ಎತ್ತಬೇಕಾಯಿತು ಇದನ್ನು ಎತ್ತುವದೇ ಮಹತ್ವದ ಕೆಲಸವು. ಯಾಕಂದರೆ ಅದು ಇಲ್ಲದಿದ್ದರೆ ಯಾವ ಮಹತ್ವದ ಕೆಲಸಗಳೂ ನಡೆಯಲಾರವು.

ಜಿಲ್ಹೆಯೊಳಗಿನ ತೆರಿಗೆಗಳನ್ನು ಎತ್ತಲಿಕ್ಕೆ ರಾಜಪ್ರತಿನಿಧಿಯಾದ ಒಬ್ಬ ಅಧಿಕಾರಿಯಿರುವನು. ಅವನಿಗೆ “ಕಲೆಕ್ಟರ” ಎಂದೆನ್ನುವರು. ಅವನಿಗೆ ತಿಂಗ ಳಿಗೆ ೧೮೦೦ರಿಂದ ೨೫೦೦ ರೂಪಾಯಿಗಳ ವರೆಗೆ ಸಂಬಳವಿರುವದು. ಈತನು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನೂ ಆಗಿರುತ್ತಾನೆ. ಇದಲ್ಲದೆ ಅಗ್ರಿಕಲ್ಚರಲ್ (ಒಕ್ಕಲತನದ) ಹಾಗು ಅಬಕಾರೀ ಖಾತೆಗಳು ಸಹ ಇವನ ಮೇಲ್ವಿಚಾರಣೆಗೆ ಒಳಗಾಗಿರುವವು. ಪೊಲೀಸ ಖಾತೆಯು ಬೇರೆ ಇದ್ದಾಗ್ಯೂ ಅದರ ಮೇಲೆ ಇವನ ಅಮಲು ನಡೆಯುತ್ತದೆ. ಹೀಗೆ ಬಹುಶಃ ಎಲ್ಲ ಖಾತೆಗಳ ಮೇಲ್ವಿಚಾರ ಣೆಯನ್ನು ಕಲೆಕ್ಟರನು ಮಾಡುತ್ತಿರುವನು.

ಕಲೆಕ್ಟರನು ಪ್ರತಿಯೊಂದು ತಾಲೂಕಿಗೆ ಹೋಗಿ, ಸ್ವತಃ ಕೆಲಸ ಮಾಡು ವದು ಅಸಂಭವವೂ ಅಸಾಧ್ಯವೂ ಆಗಿರುವದು. ಆದಕಾರಣ ಕೆಲವು ತಾಲೂ ಕುಗಳಿಗೆ ಒಬ್ಬರಂತೆ ಈ ಜಿಲ್ಹೆಗೆ ಇಬ್ಬರು ಅಸಿಸ್ಟಂಟ ಕಲೆಕ್ಟರರು ಇದ್ದು ಅವರು ಕಲೆಕ್ಟರನಿಗೆ ಸಹಾಯ ಮಾಡುವರು. ಅವರು ತಮ್ಮ ತಮ್ಮ ಭಾಗಗಳ ಮೇಲ್ವಿಚಾರವನ್ನು ಮಾಡುವರು. ಕಾರವಾರ, ಅಂಕೋಲಾ, ಯಲ್ಲಾಪುರ, ಹಲ್ಯಾಳ, ಸುಪಾ ಪೇಠಾ ಸಹಿತವಾದ ಭಾಗಕ್ಕೆ “ಕಾರವಾರ” ಇಲ್ಲವೆ

"ಹಲ್ಯಾಳ" ಡಿವ್ಹಿಜನ್ ಅನ್ನುವರು. ಕುಮಟಾ, ಹೊನ್ನಾವರ, ಸಿದ್ದಾಪುರ, ಸಿರಸಿ, ಭಟಕಳ ಪೇಠಾ ಸಹಿತವಾದ ಭಾಗಕ್ಕೆ "ಸಿರಸಿ" ಡಿವ್ಹಿಜನ್ ಅನ್ನುವರು. ಇವರು ವರ್ಷಕ್ಕೆ ಏಳು ತಿಂಗಳು ಫಿರತೀ ಮಾಡಲೇ ಬೇಕು. ಕಲೆಕ್ಟರನು ಸಹ ನಾಲ್ಕು ತಿಂಗಳು ತಿರುಗಬೇಕು. ಇದರಿಂದ ಹಳ್ಳಿಯ ಜನರಿಗೆ ಅನಾಯಾಸವಾಗಿ ವರಿಷ್ಠಾಧಿಕಾರಿಗಳ ಭೆಟ್ಟಿಯಾಗುವದು. ಸರಕಾರಕ್ಕೂ ಜನರ ಕೋರಿಕೆಗಳು ಚನ್ನಾಗಿ ತಿಳಿಯುವವು. ಇವರು ತಮ್ಮ ಕೈಕೆಳಗಿನ ಮುಲಕೀಖಾತೆಯ ಮೇಲ್ವಿಚಾರಣೆಯನ್ನು ಮಾಡುವದಲ್ಲದೆ, ಒಂದನೇ ವರ್ಗದ ಮ್ಯಾಜಿಸ್ಟ್ರೇಟರಾಗಿ ಫೌಜದಾರೀ ಅಪರಾಧಗಳನ್ನು ವಿಚಾರಿಸುವರು. ಇವರೆಲ್ಲರು ತಿರುಗುತ್ತಿರುವದರಿಂದ ಜಿಲ್ಹೆಯ ಜಮಾ ಖರ್ಚು, ನಗದು ಶಿಲಕುಗಳನ್ನು ಲೆಕ್ಕಮಾಡಿ ಜವಾಬದಾರಿಯಿಂದ ಕಾಯಲಿಕ್ಕೆ "ಹುಜೂರ ಡೆಪುಟಿ ಕಲೆಕ್ಟರ" ಎಂಬ ಇನ್ನೊಬ್ಬ ಅಧಿಕಾರಿಯು ಇರುವನು. ಇವನಿಗೂ ಒಂದನೇ ವರ್ಗದ ಮ್ಯಾಜಿಸ್ಟ್ರೇಟನ ಅಧಿಕಾರವಿರುವದು. ಈತನಿಗೆ ಖಜಾನೆಯ ಜವಾಬದಾರಿ ಇರುವ ಕಾರಣ ಫಿರತೀ ಇಲ್ಲ. ಅಸಿಸ್ಟಂಟ ಕಲೆಕ್ಟರರಿಗೆ ೫೦೦ರಿಂದ ೧೨೦೦ ರೂಪಾಯಿಗಳ ವರೆಗೆ ಸಂಬಳ ಇರುವದು.

ಇವರಲ್ಲದೆ ತಾಲೂಕಿಗೆ ಒಬ್ಬೊಬ್ಬ ಅಧಿಕಾರಿಯು ಇರುವನು. ಅವನಿಗೆ "ಮಾಮಲೇದಾರ" ಎನ್ನುವರು. ಇವರಿಗೆ ೧೫೦ರಿಂದ ೪೫೦ ರೂಪಾಯಿಗಳ ವರೆಗೆ ಸಂಬಳವಿರುವದು. ಈ ಜಿಲ್ಹೆಯಲ್ಲಿ ಎಂಟು ತಾಲೂಕುಗಳನ್ನು ಮಾಡಿ, ಒಂದೊಂದಕ್ಕೆ ಒಬ್ಬೊಬ್ಬ ಮಾಮಲೇದಾರರನ್ನು ನೇಮಿಸಿರುವರು. ಇವರು ತಾಲೂಕಿನ ಖಜಾನೆಯ ಬಗ್ಗೆ ಜವಾಬದಾರರು. ಹಳ್ಳಿಯ ಜನರಿಂದ ತೆರಿಗೆಯನ್ನು ಒಟ್ಟುಗೂಡಿಸುವ ಕೆಲಸವು ಇವರದೇ ಸರಿ. ಇವರು ಗ್ರಾಮದ ಲೆಕ್ಕಗಳನ್ನು ನೋಡಬೇಕಾಗುತ್ತದೆ. ರೈತರು ಕೊಟ್ಟ ಹಣಕ್ಕೆ ಅವರಿಗೆ ಗ್ರಾಮಸ್ಥರಿಂದ ಪಾವತಿ ದೊರೆಯುವದೋ ಇಲ್ಲವೋ ಎಂಬದನ್ನು ನೋಡಬೇಕಾಗುತ್ತದೆ. ಹೊಲಗಳ ಮೇರೆಯ ಕಲ್ಲುಗಳನ್ನೂ ಒಡ್ಡುಗಳನ್ನೂ ಸರಿಯಾಗಿ ಇಟ್ಟಿರುವರೋ ಇಲ್ಲವೋ ಎಂಬದನ್ನೂ ನೋಡಬೇಕಾಗುತ್ತದೆ. ಇವರು ತಮ್ಮ ತಾಲೂಕಿನ ಲೋಕಲ್ ಬೋರ್ಡಿನ ಮೇಲಧಿಕಾರಸ್ಥರು; ಹಾಗೂ ತಾಲೂಕಿನ ಮುಲಕೀ, ಫೌಜದಾರೀ ವ್ಯಾಜ್ಯಗಳನ್ನು ನಿರ್ಣಯಿಸಬೇಕಾಗುತ್ತದೆ. ಇವರಿಗೆ ಒಂದನೇ ಅಥವಾ ಎರಡನೇ ವರ್ಗದ ಮ್ಯಾಜಿಸ್ಟ್ರೇಟನ ಅಧಿಕಾರವಿರುತ್ತದೆ. ಮಾಮಲೇದಾರರು ತಿಂಗಳಲ್ಲಿ ೧೫ ದಿವಸ ತಾಲೂಕಿನೊಳಗೆ ಫಿರತೀ ಮಾಡ

ಬೇಕಾಗುವದು. ಕಾರಣ ಖಜಾನೆಯ ಜವಾಬದಾರಿಯ ಬಗ್ಗೆ ಜಿಲ್ಹೆಯ ಹುಜೂರ ಡೆಪುಟಿ ಕಲೆಕ್ಟರನಂತೆ ತಾಲೂಕಿನಲ್ಲಿ ಶಿರಸ್ತೇದಾರನಿರುವನು.

ಜಿಲ್ಹೆಯಲ್ಲಿ ತಾಲೂಕುಗಳೆಂಬ ಭಾಗಗಳನ್ನು ಮಾಡಿದಂತೆ ತಾಲೂಕಿನಲ್ಲಿ ಕೆಲವು ಭಾಗಗಳನ್ನು ಮಾಡಿ, ಅವುಗಳಿಗೆ ಮಾಮಲೇದಾರರಿಗೆ ಅಂಕಿತರಾದ ಸರ್ಕಲ್ ಇನ್‌ಸ್ಪೆಕ್ಟರರನ್ನು ನೇಮಿಸಿರುವರು. ಇವರಿಗೆ ಮ್ಯಾಜಿಸ್ಟ್ರೇಟ ಅಧಿಕಾರವಿರುವದಿಲ್ಲ.

ಮಾಮಲೇದಾರರ ಕಂದಾಯದ ವಸೂಲೀ ಕೆಲಸಕ್ಕೆ ಪ್ರತಿ ಹಳ್ಳಿಯಲ್ಲಿ ಗೌಡನು (ಪಾಟೀಲ) ಸಹಾಯ ಮಾಡುವನು. ಇವನಿಗೆ ಮುಲಕೀ, ಫೌಜದಾರೀ ಎರಡೂ ಅಧಿಕಾರಗಳು ಇರುವವು. ಕೆಲವು ಕಡೆಯಲ್ಲಿ ಮುಲಕೀ ಪಾಟೀಲ ಬೇರೆ, ಪೊಲೀಸ ಪಾಟೀಲ ಬೇರೆ ಇರುವದೂ ಉಂಟು. ಕೆಲವು ಕಡೆಗೆ ಒಬ್ಬನೇ ಗೌಡನ ಕಡೆಗೆ ಒಂದಕ್ಕಿಂತ ಹೆಚ್ಚು ಹಳ್ಳಿಗಳನ್ನು ಕೊಡುವದೂ ಉಂಟು. ಇವನ ಕೈಕೆಳಗೆ ಲೆಕ್ಕವನ್ನು ಬರೆಯುವದಕ್ಕೆ ಶಾನಭೋಗನಿರುವನು. ಇವನು ಪಾಟೀಲನ ಕೈಕೆಳಗಿನ ಅಧಿಕಾರಿಯಾದಾಗ್ಯೂ ಯಾವತ್ತೂ ಸರಕಾರೀ ಕಾಗದಪತ್ರಗಳಿಗೆ ಗೌಡನಂತೆ ಶಾನಭೋಗನ ಸಹಿಯಾಗಲಿಕ್ಕೇ ಬೇಕು. ವಿದ್ಯೆ ಕಲಿತ ಪಾಟೀಲರು ವಿರಳ; ಶಾನಭೋಗರು ಕಲಿತವರಿರುವರು. ಕಾರಣ ಊರೊಳಗೆ ಪಾಟೀಲನಿಗಿಂತ ಶಾನಭೋಗನ ವರ್ಚಸ್ಸು ಬಹಳ ಇರುವದು. ಇವರ ಸಹಾಯಕ್ಕೆ ಇಬ್ಬರು ಮೂವರು ಉಗ್ರಾಣಿಗಳು ಇರುವರು. ಇವರೆಲ್ಲರಿಗೂ ಸರಕಾರದಿಂದ ಸಂಬಳ ಸಿಗುವದು.

ದೇಶದಲ್ಲಿ ಶಾಂತತೆಯನ್ನು ಕಾಯ್ದುಕೊಳ್ಳುವ ಕೆಲಸವನ್ನು ಇಲಾಖೆಯ ಅಧಿಕಾರಸ್ಥರು ನೋಡಿಕೊಳ್ಳುವರು. ಈ ಜಿಲ್ಹೆಯಲ್ಲಿ ದಂಡಿನ ಸ್ಥಳಗಳು ಇಲ್ಲ. ಆದರೂ ಕಳವು, ದರೋಡೆ, ಕೊಲೆ, ಸುಲಿಗೆಗಳು ಆಗದಂತೆ ಪೊಲೀಸಖಾತೆಯವರು ನೋಡುವರು. ಜಿಲ್ಹೆಗೊಬ್ಬ ಪೊಲೀಸ ಸುಪರಿಂಟೆಂಡೆಂಟನಿರುವನು. ಇವನ ಕೈಕೆಳಗೆ ಒಬ್ಬ ಡೆಪುಟೀ ಪೊಲೀಸ ಸುಪರಿಂಟೆಂಡೆಂಟನೂ, ಇನ್‌ಸ್ಪೆಕ್ಟರ, ಸಬ್ ಇನ್‌ಸ್ಪೆಕ್ಟರ (ಫೌಜದಾರ)ರೂ, ಅವರ ಕೈಕೆಳಗೆ ಪೊಲೀಸ ಸಿಪಾಯಿಗಳೂ ಇರುವರು.

ಕೊಡಕೊಳ್ಳುವ ವ್ಯವಹಾರವನ್ನೂ ವ್ಯಾಜ್ಯಗಳನ್ನೂ ತೀರಿಸಲಿಕ್ಕೆ ಜಿಲ್ಹೆಗೊಬ್ಬ ಡಿಸ್ಟ್ರಿಕ್ಟ ಜಜ್ಜಸಿರುವನು. ಇವನು ಮಹತ್ವದ ದಿವಾಣೀ, ಫೌಜದಾರೀ ವ್ಯಾಜ್ಯಗಳನ್ನು ತೀರಿಸುವನು. ಮತ್ತು ಕೆಳಕೋರ್ಟಿನ ನಿಕಾಲೆಯ ಮೇಲಿನ

ಅಪೀಲುಗಳನ್ನೂ ತೀರಿಸುವನು. ಇವನ ಕೈಕೆಳಗೆ ಸದರ ಅಮೀನರೂ ಸಬ್ ಜಜ್ಜರೂ ಇರುವರು. ಸಬ್ ಜಜ್ಜನು ೫೦೦೦ ರೂಪಾಯಿಗಳ ಒಳಗಿನ ವ್ಯಾಜ್ಯಗಳನ್ನು ತೀರಿಸುವನು. ಈ ಜಿಲ್ಹೆಯಲ್ಲಿ ಕಾರವಾರ, ಕುಮಟಾ, ಹೊನ್ನಾವರ, ಸಿರಸಿಗಳಲ್ಲಿ ಸಬ್ ಜಜ್ಜ್ ಕೋರ್ಟುಗಳಿರುವವು.

ದೇಶದಲ್ಲಿ ಶಾಂತತೆಯನ್ನು ಇಡುವದು, ಜನರಿಗೆ ನ್ಯಾಯವನ್ನು ಕೊಡುವದು, ವಸೂಲಿಯ ಕೆಲಸವನ್ನು ಮಾಡುವದು, ಇವುಗಳನ್ನು ಸರಕಾರದವರು ಆಯಾ ಖಾತೆಯ ಅಧಿಕಾರಸ್ಥರಿಂದ ಮಾಡಿಸುವರು. ವ್ಯಾಪಾರ ಕಲಾವೃದ್ಧಿಗಳಿಗೆ ಅನುಕೂಲ ಮಾಡಿಕೊಟ್ಟು, ಜನರ ಆರೋಗ್ಯಗಳನ್ನು ಹೆಚ್ಚಿಸುವ ಕೆಲಸವನ್ನು ಕೆಲವಂಶದಲ್ಲಿ ಲೋಕಲ ಬೋರ್ಡು, ಮ್ಯುನಿಸೀಪಾಲಿಟಿಗಳೆಂಬ ಸ್ಥಾನಿಕ ಸಂಸ್ಥೆಗಳಿಗೊಪ್ಪಿಸಿ, ಸರಕಾರದವರು ಈ ಸಂಸ್ಥೆಗಳ ವ್ಯವಸ್ಥೆಯನ್ನು ಮೇಲ್ವಿಚಾರಿಸುತ್ತ ಅವುಗಳಿಗೆ ತಮ್ಮ ಹದ್ದಿನೊಳಗಿನ ಜನರ ಆರೋಗ್ಯ, ವಿದ್ಯೆ ಮೊದಲಾದವುಗಳ ಬಗ್ಗೆ ತಾವೇ ಏರ್ಪಾಡುಗಳನ್ನು ಮಾಡುವದಕ್ಕೆ ಕಲಿಸುತ್ತಿದ್ದಾರೆ. ಈ ಸಂಸ್ಥೆಗಳು ಮಾಡುವ ಖರ್ಚಿನ ಕೆಲಭಾಗವನ್ನು ಸರಕಾರದವರು ಕೊಡುತ್ತಾರೆ. ಈ ಜಿಲ್ಹೆಯಲ್ಲಿ ಒಂದು ಡಿಸ್ಟ್ರಿಕ್ಟ ಲೋಕಲ್ ಬೋರ್ಡೂ, ಒಂದೊಂದು ತಾಲೂಕಿಗೆ ಒಂದರಂತೆ ಎಂಟು ತಾಲೂಕ ಬೋರ್ಡುಗಳೂ ಇವೆ. ಭೂಮಿಯ ತೆರಿಗೆಯ ಮೇಲೆ ರೂಪಾಯಿಗೊಂದಾಣೆಯಂತೆ ಸರಕಾರದವರು ತೆಗೆದುಕೊಳ್ಳುವ ಹಣವು ಲೋಕಲ್ ಫಂಡು ಅಂದರೆ ಸ್ಥಾನಿಕ ಹಣವಿರುತ್ತದೆ. ಲೋಕಲ್ ಫಂಡಿನ ಉತ್ಪನ್ನದಲ್ಲಿ ಇದೂ, ಟೋಲನಾಕೆಯ ಉತ್ಪನ್ನವೂ, ಶಾಲೆಯ ಫೀಯೂ ಬರುತ್ತವೆ. ಈ ಒಟ್ಟು ಉತ್ಪನ್ನದಲ್ಲಿ ಕನಿಷ್ಠ $\frac{1}{3}$ ಭಾಗವನ್ನು ಶಿಕ್ಷಣದ ಬಗ್ಗೆ ಖರ್ಚು ಮಾಡಬೇಕೆಂಬ ನಿರ್ಬಂಧವದೆ. ಉಳಿದ ಹಣವನ್ನು ಹೊಸ ಮಾರ್ಗ, ನೀರಿನ ಪೂರೈಕೆ, ಧರ್ಮಶಾಲೆ, ವೈದ್ಯಶಾಲೆ ಮುಂತಾದ ಸಾರ್ವಜನಿಕ ಹಿತದ ಕೆಲಸಗಳ ಬಗ್ಗೆ ಖರ್ಚು ಮಾಡತಕ್ಕದ್ದಿರುತ್ತದೆ. ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನವರು ತಮ್ಮ ಆದಾಯದ ಕೆಲವೊಂದು ಭಾಗವನ್ನು ಆಯಾ ತಾಲೂಕುಗಳಲ್ಲಿ ನಡೆಯುವ ಕೆಲಸಗಳಿಗೋಸ್ಕರ ತಾಲೂಕ ಲೋಕಲ್ ಬೋರ್ಡುಗಳ ವಶಕ್ಕೆ ಕೊಡುತ್ತಾರೆ.

ತಾಲೂಕ ಬೋರ್ಡುಗಳಲ್ಲಿ ಜನರಿಂದ ಆರಿಸಲ್ಪಟ್ಟ ಸಭಾಸದರ ಮತ್ತು ಸರಕಾರದವರು ನೇಮಿಸಿದ ಸಭಾಸದರ ಸಂಖ್ಯೆಯು ಸರಿ ಇರುವದು. ಜಿಲ್ಹೆಯ ಬೋರ್ಡಿನಲ್ಲಿಯೂ ಕೆಲವರನ್ನು ಸರಕಾರದವರು ನೇಮಿಸುವರು. ಕೆಲವರನ್ನು

ತಾಲೂಕ ಬೋರ್ಡಿನವರು ತಮ್ಮೊಳಗಿಂದ ಆರಿಸಿ ಕಳುಹಿಸುವರು. ಜಿಲ್ಹೆಯ ಬೋರ್ಡಿನ ಪ್ರೆಸಿಡೆಂಟನನ್ನು ಮೆಂಬರರು ಆರಿಸುವರು. ತಾಲೂಕ ಬೋರ್ಡು ಗಳ ಪ್ರೆಸಿಡೆಂಟರನ್ನು ಸರಕಾರದವರು ಜನರಿಂದ ಆರಿಸಲ್ಪಟ್ಟ ಮೆಂಬರರೊಳಗಿಂದ ನೇಮಿಸುವರು. ಇಲ್ಲವೆ ತಾಲೂಕಿನ ಮಾಮಲೇದಾರರೇ ಪ್ರೆಸಿಡೆಂಟರಾಗು ವರು. ವ್ಹಾಯಿಸ್ ಪ್ರೆಸಿಡೆಂಟನನ್ನು ಲೋಕಲ್ ಬೋರ್ಡಿನವರೇ ಆರಿಸುವರು. ಜಿಲ್ಹೆಯಲ್ಲಿ ಬರ ಬಿದ್ದರೆ, ಇಲ್ಲವೆ ಸ್ಪರ್ಶಜನ್ಯರೋಗಗಳು ಬಂದರೆ, ಈ ಸಂಘ ದವರು ಸರಕಾರಕ್ಕೆ ಕೈಲಾದಷ್ಟು ಸಹಾಯಮಾಡಬೇಕಾಗುವದು.

ದೊಡ್ಡ ಊರುಗಳಲ್ಲಿ ಆಯಾ ಊರುಗಳ ಹಿತದ ಬಗ್ಗೆ ವ್ಯವಸ್ಥೆಯನ್ನು ಮಾಡುವ ಸಂಘಗಳಿರುವವು. ಅವುಗಳಿಗೆ ಮ್ಯುನಿಸೀಪಾಲಿಟಿಯೆನ್ನುವರು. ಆರೋಗ್ಯ, ಬೀದಿಗಳ ಸ್ವಚ್ಛತೆ, ದೀಪ, ಮಾರ್ಗ, ಪ್ರಾಥಮಿಕ ಶಿಕ್ಷಣ ಮುಂತಾದ ಜನರ ಹಿತದ ಕೆಲಸಗಳನ್ನು ಮಾಡುವ ಭಾರವು ಇವುಗಳ ಕಡೆಗಿರುವದು. ಮನೆತೆರಿಗೆ, ಗಾಡೀ ತೆರಿಗೆ, ಹೊರಗಿನಿಂದ ಬರುವ ಸಾಮಾನುಗಳ ಮೇಲಿನ ಜಕಾತಿ ಮುಂತಾದವುಗಳನ್ನು ಇವರೇ ತೆಗೆದುಕೊಳ್ಳುವರು. ಇವರಿಗೆ ಸರ ಕಾರದವರು ಕೆಲವು ಹಣವನ್ನು ಸಹಾಯಾರ್ಥವಾಗಿ ಕೊಡುವರು. ಇಂಥ ಮ್ಯುನಿಸೀಪಾಲಿಟಿಗಳು ಈ ಜಿಲ್ಹೆಯಲ್ಲಿ ಕಾರವಾರ, ಕುಮಟಾ, ಹೊನ್ನಾವರ, ಭಟಕಳ, ಸಿರಸಿ, ಹಲ್ಯಾಳ ಎಂಬ ಆರು ಪಟ್ಟಣಗಳಲ್ಲಿರುವವು. ಗೋಕರ್ಣ, ಉಳವಿಗಳಲ್ಲಿ ಮೂರು ತಿಂಗಳು ಹಂಗಾಮೀ ಮ್ಯುನಿಸೀಪಾಲಿಟಿ ಇರುವದು. ಗೋಕರ್ಣದ ಬೆಳವಣಿಗೆಯು ದಿನೇದಿನೇ ಹೆಚ್ಚಾಗಹತ್ತಿದ್ದರಿಂದ ಅಲ್ಲಿಯ ಮ್ಯುನಿಸೀಪಾಲಿಟಿಯೂ ಕಾಯಂ ಆಗಬಹುದೆಂದು ತೋರುತ್ತದೆ.

ಸರಕಾರದವರು ಜನರಿಗೆ ಸಾರ್ವಜನಿಕ ಕೆಲಸಗಳಲ್ಲಿ ಶಿಕ್ಷಣ ದೊರೆಯು ವದಕ್ಕಾಗಿ ಇಂಥ ಸಂಘಗಳನ್ನು ನಿರ್ಮಿಸಿದಾಗ್ಯೂ ಸ್ಥಾನಿಕ ವ್ಯವಸ್ಥೆಯನ್ನು ಸರಿಯಾಗಿ ಮಾಡಿಕೊಳ್ಳಲಿಕ್ಕೆ ಸಾಕಷ್ಟು ಉತ್ಸಾಹವು ಇನ್ನೂ ಉಂಟಾದಂತೆ ತೋರುವದಿಲ್ಲ. ಆದರೂ ಈ ಸಂಘಗಳನ್ನು ಸೇರುವ ಜನರು ತಾವು ವಹಿಸಿ ಕೊಂಡ ಕೆಲಸಗಳನ್ನು ಮನಃಪೂರ್ವಕವಾಗಿ ಮಾಡಿ, ಸಾರ್ವಜನಿಕ ಕೆಲಸ ಗಳನ್ನು ಮಾಡುವ ತಮ್ಮ ಯೋಗ್ಯತೆಯನ್ನು ಕ್ರಮೇಣ ಬೆಳೆಯಿಸುವರೆಂಬ ನಂಬಿಗೆಗೆ ಆಧಾರವದೆ.

ಸರಕಾರದವರು ತಮಗೆ ಅವಶ್ಯವಾದ ಹೊಸ ಇಮಾರತುಗಳನ್ನು ಕಟ್ಟಿಸುವ ದಕ್ಕೂ ಲೈನಮಾರ್ಗ ಮುಂತಾದವುಗಳನ್ನು ಭದ್ರವಾಗಿಡಲಿಕ್ಕೂ ಪಬ್ಲಿಕ್ ವರ್ಕ್ಸ

(ಸಾರ್ವಜನಿಕ ಕೆಲಸ) ಖಾತೆಯನ್ನು ಇಟ್ಟು, ೨-೩ ತಾಲೂಕುಗಳಿಗೆ ಒಬ್ಬ ಓವ್ಹರಸಿಯರನೆಂಬ ಅಧಿಕಾರಸ್ಥನನ್ನು ನೇಮಿಸಿರುವರು. ಇವನ ಮೇಲೆ ಜಿಲ್ಹೆಗೊಬ್ಬ ಎಂಜಿನಿಯರನಿರುವನು. ಅವನು ಬಹುಶಃ ಯುರೋಪಿಯನ್ನನಿರುವನು.

ಸಣ್ಣ ದೊಡ್ಡ ಊರುಗಳಲ್ಲಿ ಶಾಲೆಗಳನ್ನಿಟ್ಟು ಜನರಿಗೆ ವಿದ್ಯೆಯನ್ನು ಕಲಿಸುವರು. ಶಾಲಾ ಮಾಸ್ತರರ ಕೆಲಸವನ್ನು ತಪಾಸಮಾಡಲಿಕ್ಕೆ ಜಿಲ್ಹೆಗೊಬ್ಬ ಡೆಪುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನಿರುವನು. ಅವನಿಗೆ ಜಿಲ್ಹೆಯಲ್ಲಿರುವ ಶಾಲೆಗಳ ಮಾನದಿಂದ ತಕ್ಕಷ್ಟು ಅಸಿಸ್ಟಂಟ ಡೆಪುಟಿಗಳಿರುವರು. ಇಲ್ಲಿ ನಾಲ್ವರು ಅಸಿಸ್ಟಂಟ ಡೆಪುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು ಅವನಿಗೆ ಸಹಾಯಕರಿರುವರು.

ಹಳ್ಳಿಯ ಜನರಿಗೆ ಕಾಗದಪತ್ರ, ಮನಿಆರ್ಡರ, ವಸ್ತ್ರ ಮುಂತಾದವುಗಳ ಪಾರಸಲನ್ನು ಮುಟ್ಟಿಸುವ ಬಗ್ಗೆ ಪೋಸ್ಟಮನ್ನರೂ, ಆಯಾ ಊರುಗಳಲ್ಲಿ ಟಪಾಲಿನ ವ್ಯವಸ್ಥೆಯನ್ನು ಮಾಡುವದಕ್ಕೆ ಪೋಸ್ಟಮಾಸ್ತರರೂ, ಅವರ ಕೆಲಸಗಳ ತಪಾಸಣೆಗೆ ಪೋಸ್ಟಲ್ ಇನ್‌ಸ್ಪೆಕ್ಟರರೂ ಟಪಾಲಖಾತೆಯಿಂದ ಇಡಲ್ಪಟ್ಟಿರುವರು. ತಾರಿನ ಕೆಲಸವನ್ನು ಟಪಾಲಖಾತೆಯವರೇ ಮಾಡುವರು.

ಜನರ ರೋಗಗಳನ್ನು ನಿವಾರಿಸಲಿಕ್ಕೆ ಜಿಲ್ಹೆಯಲ್ಲಿ ಒಂದು ದೊಡ್ಡ ಆಸ್ಪತ್ರಿಯನ್ನೂ, ತಾಲೂಕುಗಳಲ್ಲಿ ಸಣ್ಣ ದವಾಖಾನೆಗಳನ್ನೂ ಕಟ್ಟಿಸಿ, ಅಲ್ಲಿ ಡಾಕ್ಟರರನ್ನು ಇಟ್ಟು ಜನರಿಗೆ ಔಷಧೋಪಚಾರವು ಸಿಗುವಂತೆ ಮಾಡಿರುವರು. ಕೆಲವು ಮಹತ್ವದ ಊರುಗಳಲ್ಲಿ ದನಗಳ ಆಸ್ಪತ್ರಿಯನ್ನು ಇಟ್ಟಿರುವರು. ಹಳ್ಳಿಹಳ್ಳಿಗೆ ಹೋಗಿ ಮೈಲಿ ತೆಗೆಯಲಿಕ್ಕೆ ವ್ಹಾಕ್ಸಿನೇಟರರೆಂಬ ಅಧಿಕಾರಸ್ಥರು ಇರುವರು. ಈ ಜಿಲ್ಹೆಯಲ್ಲಿ ಎಲ್ಲ ತಾಲೂಕು ಹಾಗು ಪೇಠಾ ಸ್ಥಳಗಳಲ್ಲಿ ೧೧ ದವಾಖಾನೆಗಳಿರುವವಲ್ಲದೆ, ಮಂಚಿಕೇರಿ, ಕುಂಬಾರವಾಡಾ ಎಂಬಲ್ಲಿ ಸಹ ದವಾಖಾನೆಗಳಿರುವವು. ಸಿರಸಿಯಲ್ಲಿ ದನಗಳ ಆಸ್ಪತ್ರಿಯೊಂದು ಇರುವದು.

ಜನರ ಸೌಖ್ಯಕ್ಕೆ ಮುಖ್ಯವಾಗಿ ಮಳೆ-ಬೆಳೆಗಳು ಬೇಕು. ಮಳೆಗೆ ಅಡವಿ ಬೇಕು. ಅಜ್ಞಾನಿಗಳು ಅಡವಿಯನ್ನು ನಾಶಮಾಡದಂತೆ ಕಾಯುವದಕ್ಕೆ ಗಾರ್ಡ ಜನರನ್ನು ಇಟ್ಟಿರುವರು. ಅವರ ತಪಾಸಣೆಗೆ ಫಾರೆಸ್ಟರ, ರೇಂಜರ, ಕಾನ್‌ಸರ್ವೇಟರ ಮುಂತಾದ ಅಧಿಕಾರಸ್ಥರನ್ನು ಇಟ್ಟಿರುವರು.

ಇದಲ್ಲದೆ, ಈ ಜಿಲ್ಹೆಯಲ್ಲಿ "ಕಸ್ಟಮ್" ಎಂಬ ಒಂದು ಖಾತೆಯು ಇರುವದು. ಅದು ಬೇರೆ ಜಿಲ್ಹೆಗಳಲ್ಲಿರುವದಿಲ್ಲ. ಈ ಖಾತೆಯವರು ಸಮುದ್ರ

ಹೊಳೆಗಳಲ್ಲಿಯ ಹಡಗ ಡೋಣಿಗಳನ್ನು ತಪಾಸಮಾಡುವದನ್ನೂ, ಉಪ್ಪಿನ ಆಗರಗಳ ಮೇಲ್ವಿಚಾರಣೆಮಾಡುವದನ್ನೂ, ಆ ಸಂಬಂಧದ ಸುಂಕ ವಸೂಲ ಮಾಡುವದನ್ನೂ ತಮ್ಮ ಕಡೆಗೆ ಇಟ್ಟುಕೊಂಡಿರುವರು. ಜಿಲ್ಹೆಯಲ್ಲಿ ಈ ಖಾತೆಯ ಮುಖ್ಯ ಅಧಿಕಾರಿಯು ಕಸ್ಟಮ್ ಅಸಿಸ್ಟಂಟ ಕಲೆಕ್ಟರನು. ಮಾಮಲೇದಾರ ರಂತೆ ಅವನ ಕೈಕೆಳಗೆ ಸರಕಾರಕೂನರಿರುವರು. ಅವರು ಕಾರವಾರ, ಸಾಣೆ ಕಟ್ಟೆ, ಹೊನ್ನಾವರಗಳಲ್ಲಿರುವರು. ಇದಲ್ಲದೆ ಮಾಜಾಳಿ, ಅಂಕೋಲಾ ಕುಮಟಾ ಮೊದಲಾದ ಊರುಗಳಲ್ಲಿ ಕಸ್ಟಮ್ ನಾಕೆಗಳಿರುವವು. ಪ್ರತಿ ಯೊಂದು ಆಗಬೋಟಿನಲ್ಲಿ ಹೋಗುವ ಮಾಲನ್ನು ಈ ಖಾತೆಯುವರೇ ತಪಾಸ ಮಾಡುವರು. ಇನ್ನು ಕಸ್ಟಮ್ ಇನ್‌ಸ್ಪೆಕ್ಟರರು ಗೋವೆ, ಕಾನಡಾ ಜಿಲ್ಹೆಗಳ ಹದ್ದಿನಲ್ಲಿದ್ದು, ಜನರು ಸುಂಕ ತಪ್ಪಿಸದಂತೆ ನೋಡುವರು.

## ೧೧ನೇ ಪ್ರಕರಣ.

### ರಾಜಕೀಯ ವಿಭಾಗಗಳು.

ಈ ಜಿಲ್ಹೆಯಲ್ಲಿ ೮ ತಾಲೂಕುಗಳೂ ೩ ಪೇಠೆಗಳೂ ಇರುವವು. ಅವುಗಳ ಕ್ಷೇತ್ರ ಜನಸಂಖ್ಯೆಗಳ ಪಟ್ಟಿಯನ್ನು ಮುಂದೆ ಕೊಟ್ಟದೆ. ಇವುಗಳಲ್ಲಿ ಹಲ್ಯಾಳ ತಾಲೂಕು ದೊಡ್ಡದಿದ್ದರೂ ಅದರ ೫/೬ ಕ್ಷೇತ್ರವು ಅಡವಿಯಿಂದ ತುಂಬಿದೆ. ಸುಪಾಪೇಠೆಗೆ ಒಬ್ಬ ಮಹಾಲಕರಿಯು ಇರುವನು. ಇದರಂತೆ ಹೊನ್ನಾವರ ತಾಲೂಕಿನ ದಕ್ಷಿಣದಲ್ಲಿ ಭಟಕಳ ಪೇಠೆಯೂ, ಯಲ್ಲಾಪುರ ತಾಲೂಕಿನ ಪೂರ್ವಕ್ಕೆ ಮುಂಡಗೋಡ ಪೇಠೆಯೂ ಇರುವವು.

ಈ ಜಿಲ್ಹೆಯ ಕ್ಷೇತ್ರ, ಸಾಗುಭೂಮಿ, ಅಡವಿ ಉತ್ಪನ್ನ ಮುಂತಾದವುಗಳನ್ನು ಮುಂದಿನ ಪಟ್ಟಿಯಲ್ಲಿ ಕೊಟ್ಟದೆ.

ಈ ಜಿಲ್ಹೆಯಲ್ಲಿ ಜಂಗಲಖಾತೆಯ ಉತ್ಪನ್ನವು ವಿಶೇಷವಾಗಿರುವದು. ಉತ್ಪನ್ನವು ೧೫ ಲಕ್ಷ; ಮತ್ತು ಖರ್ಚು ೭ ೧/೨ ಲಕ್ಷ ಇರುವದು.

ಕಸ್ಟಮ ಖಾತೆಯ ಉತ್ಪನ್ನವು ೪ ಲಕ್ಷ ಇರುವದು.

# ಈ ಜಿಲ್ಹೆಯ ಕ್ಷೇತ್ರ, ಸಾಗುಭೂಮಿ, ಅಡವಿ ಉತ್ಪನ್ನ ಮುಂತಾದದ್ದು.

| ತಾಲೂಕು ಹಾಗು ಪೇಟೆಗಳ ಹೆಸರು | ಒಟ್ಟು ಕ್ಷೇತ್ರ ಚೌರಸ ಮೈಲು | ಸಾಗುಭೂಮಿ ಚೌ. ಮೈ. | ಅಡವಿ ಚೌ. ಮೈ. | ಜನಸಂಖ್ಯೆ. | ಚೌ. ಮೈಲಿಗೆ ಜನರು. | ಶೀರ್ವೆ. |
|---|---|---|---|---|---|---|
| ಕಾರವಾರ | ೨೮೧ | ೪೧ | ೧೨೭ | ೫೯೬೬೩ | ೨೧೨ | ೧೧೦೫೬೩ |
| ಅಂಕೋಲಾ | ೩೭೫ | ೩೦ | ೩೧೨ | ೩೯೦೦೦ | ೧೦೪ | ೮೮೨೧೧ |
| ಕುಮಟಾ | ೨೨೪ | ೩೭ | ೧೬೫ | ೬೪೪೭೬ | ೨೫೮ | ೧೨೩೨೫೬ |
| ಹೊನ್ನಾವರ } | ೪೨೬ | ೫೧ | ೩೨೧ | ೬೧೯೬೨ | ೬೨೩ | ೧೮೮೦೨೯ |
| ಭಟಕಳ } | | | | ೩೮೪೬೮ | | |
| ಸಿದ್ದಾಪುರ | ೩೩೨ | ೩೧ | ೨೧೫ | ೩೭೪೭೯ | ೧೧೩ | ೧೪೯೭೭೩ |
| ಸಿರಸಿ | ೪೯೧ | ೪೩ | ೩೩೯ | ೪೭೮೩೩ | ೯೭ | ೧೪೦೮೪೯ |
| ಯಲ್ಲಾಪುರ } | ೭೬೦ | ೪೨ | ೬೪೮ | ೨೦೩೧೮ | ೪೬ | ೬೬೦೨೦ |
| ಮುಂಡಗೋಡ } | | | | ೧೪೩೯೬ | | ೩೫೭೪೦ |
| ಹಲ್ಯಾಳ } | ೧೦೫೭ | ೬೭ | ೭೩೯ | ೨೮೩೫೬ | ೪೪ | ೬೭೬೧೨ |
| ಸುಪಾ } | | | | ೧೮೬೧೧ | | ೩೧೦೪೭ |
| ಅಂತು | ೩೯೪೬ | ೩೪೨* | ೩೨೫೨* | ೪೩೦೫೪೮ | | ೧೦೦೧೧೦೦ |

* ಜನರಿಗಾಗಿ ಬಿಟ್ಟ ಗುಡ್ಡ ಅಡವಿ ಮೊದಲಾದವುಗಳ ಕ್ಷೇತ್ರ ೨೫೨ ಮೈಲು ಇರುವದು.

## ೧೨ನೆಯ ಪ್ರಕರಣ.

### ಮಹತ್ವದ ಊರುಗಳು.

೧. **ಅಜಾದ್ವೀಪ.** — ಉತ್ತರ ಅಕ್ಷಾಂಶ ೧೪°, ೪೪′; ಪೂರ್ವ ರೇಖಾಂಶ ೭೪°, ೧೦′. ಜನಸಂಖ್ಯೆ ೧೮೭೨ರಲ್ಲಿ ೫೨೭. ಈಗ ಜನವಸತಿಯು ತೀರ ಕಡಿಮೆ. ಹಿಂದಕ್ಕೆ ವಾಸ್ಕೋಡಿಗಾಮನು ಯುರೋಪಕ್ಕೆ ತಿರಿಗಿ ಹೋಗುವಾಗ ಇಲ್ಲಿ ಕೆಲವು ದಿವಸ ನಿಂತಿದ್ದನು. ಇದು ಪೋರ್ತುಗೀಜರ ವಶದಲ್ಲಿ ಅದೆ. ಅವರು ಗುನ್ಹೇಗಾರರನ್ನು ಇಲ್ಲಿಗೆ ಕಳಿಸುವರು.

೨. **ಅಂಕೋಲಾ.** — ಉತ್ತರ ಅಕ್ಷಾಂಶ ೧೪°, ೪೦′; ಪೂರ್ವ ರೇಖಾಂಶ ೭೪°, ೨೫′. ಜನಸಂಖ್ಯೆ ೩೧೬೦. ಇದು ತಾಲೂಕಿನ ಮುಖ್ಯ ಗ್ರಾಮವು. ಇಲ್ಲಿ ತಾಲೂಕ ಕಚೇರಿ, ಟಪಾಲ ಕಚೇರಿ, ತಾರ ಆಫೀಸು, ಇಂಗ್ರಜೀ ಶಾಲೆ, ಕಸ್ಟಮ ಕಚೇರಿ, ೬ ಪ್ರಾಥಮಿಕ ಶಾಲೆಗಳು ಅವೆ. ಪೇಟೆಯು ತಕ್ಕಮಟ್ಟಿಗೆ ದೊಡ್ಡದದೆ. ಇಲ್ಲಿಯ ಹಾಳುಕೋಟೆಯನ್ನು ಸ್ವಾದೆಯ ಅರಸನೊಬ್ಬನು ಕಟ್ಟಿಸಿದನೆಂದು ಹೇಳುತ್ತಾರೆ. ಮಳೆ ೯೬ ಇಂಚು.

೩. **ಅವರ್ಸೆ.** — ಉತ್ತರ ಅಕ್ಷಾಂಶ ೧೪°, ೪೨′; ಪೂರ್ವ ರೇಖಾಂಶ ೭೪°, ೨೫′. ಜನಸಂಖ್ಯೆ ೨೪೫೫. ಇಲ್ಲಿ ೨ ಪ್ರಾಥಮಿಕ ಶಾಲೆಗಳಿವೆ. ಹಡಗದ ಆಕಾರದ್ದೊಂದು ಕಾತ್ಯಾಯನೀ ದೇವಸ್ಥಾನವುಂಟು. ಈ ದೇವತೆಗೆ ಖಾರವೀ ಜನರೂ ಕಲಾವಂತರೂ ನಡಕೊಳ್ಳುವರು. ಇದರ ಹತ್ತರ ಹಟ್ಟಿಕೇರಿಯಲ್ಲಿ ಇರುವ ಕಟ್ಟಿಗೆಯ ಡಿಪೋದಲ್ಲಿ ವರ್ಷಕ್ಕೊಮ್ಮೆ ಆಗುವ ಲಿಲಾವಿನಲ್ಲಿ ಸಾವಿರಾರು ರೂಪಾಯಿಗಳ ವ್ಯಾಪಾರವಾಗುವದು. ಹಟ್ಟಿಕೇರಿಯಲ್ಲಿ ಮುಸಾಫರೀ ಬಂಗಲೆಯೂ ಧರ್ಮಶಾಲೆಯೂ ಇರುವವು.

೪. **ಬನವಾಸಿ.** — ಉತ್ತರ ಅಕ್ಷಾಂಶ ೧೪°, ೩೨′; ಪೂರ್ವ ರೇಖಾಂಶ ೭೫°, ೫′. ಜನಸಂಖ್ಯೆ ೨೧೪೬. ವರದಾ ತೀರದಲ್ಲಿ ಪ್ರಸಿದ್ಧ ಕ್ಷೇತ್ರ. ಪ್ರಾಚೀನಕಾಲದ ಮಧುಕೇಶ್ವರನ ದೇವಸ್ಥಾನವುಂಟು. ಅಲ್ಲಿ ಜೇನುತುಪ್ಪದಂಥ ಬಣ್ಣದ ಲಿಂಗವಿರುವದು. ಈ ಗುಡಿಯ ಸಮೀಪದಲ್ಲಿ ನೋಡತಕ್ಕಂಥ ಸುಂದರವಾದ ಕಲ್ಲಿನ ಮಂಚವಿರುವದು. ಮಧುಕೇಶ್ವರನಿಗೆ ಸರಕಾರದಿಂದ ೪೦೦೭ ರೂಪಾಯಿಯ ನೇಮಣೂಕು ನಡೆಯುತ್ತದೆ. ಇದು ಪ್ರಾಚೀನಕಾಲ

ದಲ್ಲಿ ಪ್ರಸಿದ್ಧ ರಾಜಧಾನಿಯು. ಕ್ರಿ. ಶ. ಪೂರ್ವದಲ್ಲಿ ೧೦೦ ವರ್ಷದಿಂದ ಕ್ರಿ ಶ. ೭ನೇ ಶತಕದ ವರೆಗೆ ಕದಂಬರೂ, ಅನಂತರ ಚಾಲುಕ್ಯರೂ, ದೇವಗಿರಿಯ ಯಾದವರೂ, ವಿಜಯನಗರದ ನರಪತಿಗಳೂ, ಸ್ವಾದೆಯ ಅರಸರೂ ಆಳಿದರು

೫. **ಬೇಲಿಕೇರಿ.**—ಜನಸಂಖ್ಯೆ ೧೦೬೬. ಸಮುದ್ರದಂಡೆಯಲ್ಲಿ ಆಲದ ಬನದೊಳಗೆ ಸರಕಾರೀ ಬಂಗಲೆಯುಂಟು. ಹವೆಯು ಆರೋಗ್ಯಕರವಾದ್ದ ರಿಂದ ದೊಡ್ಡ ಅಧಿಕಾರಸ್ಥರು ಇಲ್ಲಿ ಇಳಿಯುವದು ವಿಶೇಷ. ಒಂದು ಕನ್ನಡ ಶಾಲೆಯದೆ.

೬. **ಭಟಕಳ.**—ಉತ್ತರ ಅಕ್ಷಾಂಶ ೧೩°, ೫೬′; ಪೂರ್ವ ರೇಖಾಂ ೭೪°, ೩೬′. ಜನಸಂಖ್ಯೆ ೭೧೪೧. ಹೊನ್ನಾವರದ ದಕ್ಷಿಣಕ್ಕೆ ೨೫ ಮೈಲಿನ ಮೇಲೆ ಮುಂಬಯಿ ಇಲಾಖೆಯ ಕೊನೆಯ ಬಂದರವು. ಇಲ್ಲಿ ಹಿಂದೂಜನರ ಗಿಂತ ಮುಸಲ್ಮಾನರ ವಸ್ತಿಯು ಹೆಚ್ಚುಂಟು. ಇವರಿಗೆ ನವಾಯಿತರೆನ್ನುವರು

ಇಲ್ಲಿ ೧೫ನೇ ೧೬ನೇ ಶತಕಗಳಲ್ಲಿ ಕಟ್ಟಿದಂಥ ೧೩ ಬಸ್ತಿಗಳವೆ. ಅವ ಗಳಲ್ಲಿ ಮೂರು ನಾಲ್ಕು ನೋಡತಕ್ಕಂಥವವೆ. ಇವಲ್ಲದೆ ನಾರಾಯಣ ವೆಂಕಟರಮಣ ದೇವತೆಗಳ ಗುಡಿಗಳವೆ. ಮತ್ತು ಚಂದ್ರನಾಥೇಶ್ವರನ ಗುಡಿಯು ಬಹು ಭವ್ಯವಾದದ್ದಿರುತ್ತದೆ.

ಭಟಕಳದಲ್ಲಿ ನಾಲ್ಕು ಮಶೀದೆಗಳಿವೆ. ಜುವ್ಮ್ಮಾ ಮಶೀದೆಗೆ ಸರಕಾರದಿಂದ ೪೦೦ ರೂಪಾಯಿಯ ನೇಮಣೂಕು ನಡೆಯುತ್ತದೆ.

ಇಲ್ಲಿ ೧೬೭೦ರಲ್ಲಿ ಇಂಗ್ಲಿಷರು ಅಂಗಡಿ ಹಾಕಿದ್ದರು.

ವರ್ಷದ ಸರಾಸರಿ ಮಳೆ ೧೩೮ ಇಂಚು.

೭. **ಬೀಳಗಿ.**—ಜನಸಂಖ್ಯೆ ೮೦೦. ಇದು ಸಿದ್ದಾಪುರದ ಪಶ್ಚಿಮಕ್ಕೆ ಆರು ಮೈಲಿನ ಮೇಲೆ ಅದೆ. ಇಲ್ಲಿ ಪಾರಸನಾಥ, ವಿರೂಪಾಕ್ಷ, ಹನುಮಂತ ಎಂಬ ಮೂರು ದೇವಸ್ಥಾನಗಳಿವೆ. ಅಡಿಕೆ, ಯಾಲಕ್ಕಿ, ಮೆಣಸು, ಬಾಳೇಕಾಯಿಗಳ ವ್ಯಾಪಾರ ಬಹಳ.

೮. **ಚಂದಾವರ.**—ಜನಸಂಖ್ಯೆ ೭೬೧. ಕುಮಟೆಯ ಆಗ್ನೇಯಕ್ಕೆ ಐದು ಮೈಲಿನ ಮೇಲೆ ಅದೆ. ಇಲ್ಲಿ ಮುಸಲ್ಮಾನರ ವಸ್ತಿ ವಿಶೇಷ. ಇದರ ಸಮೀಪ ದಲ್ಲಿದ್ದ ಮಲ್ಲಾಪುರದಲ್ಲಿ ಸಾರಸ್ವತರು ವಾಸಿಸುವರು. ಚಂದಾವರದಲ್ಲಿ ಕ್ರಿಸ್ತಿ ಯನ್ನರ ಚರ್ಚವಿದ್ದು ವರ್ಷಕ್ಕೊವ್ಮೆ ಉತ್ಸವವಾಗುತ್ತದೆ.

೯. **ಧಾರೇಶ್ವರ.**—ಜನಸಂಖ್ಯೆ ೧೦೨೧. ಕುಮಟೆಯಿಂದ ಐದು ಮೈಲಿನ

ಮೇಲೆ ಅದೆ. ಇದು ಈ ಜಿಲ್ಲೆಯ ಪಂಚ ಕ್ಷೇತ್ರಗಳಲ್ಲಿ ಒಂದು. ಇಲ್ಲಿಯ ಧಾರೇಶ್ವರನ ಗುಡಿಗೆ ಸರಕಾರದಿಂದ ೧೪೪೦ ರೂಪಾಯಿಯ ನೇಮಣೂಕು ನಡೆಯುತ್ತದೆ. ಮಕರ ಸಂಕ್ರಾಂತಿಯಲ್ಲಿ ರಥೋತ್ಸವವಾಗುತ್ತದೆ.

೧೦. **ಗೆರಸಪ್ಪೆ.**—ಜನಸಂಖ್ಯೆ ೧೬೩೫. ಹೊನ್ನಾವರದಿಂದ ೧೮ ಮೈಲಿನ ಮೇಲೆ ಶರಾವತೀ ನದಿಯ ದಂಡೆಯಲ್ಲಿರುವದು. ಇಲ್ಲಿ ಜೈನ ಅರಸರು ಬಹು ಕಾಲ ಆಳಿದರು. ಅವರು ಕಟ್ಟಿಸಿದ ಗುಡಿಗಳಲ್ಲಿ ಚತುರ್ಮುಖಿ, ಮಹಾವೀರ, ಪಾರಸನಾಥ ಎಂಬ ದೇವಸ್ಥಾನಗಳು ಈಗ್ಯೂ ನೋಡತಕ್ಕ ಹಾಗಿವೆ. ಈ ಗ್ರಾಮವು ಗಟ್ಟದ ಮೇಲ್ಭಾಗಕ್ಕೂ ಕೆಳಭಾಗಕ್ಕೂ ಮಧ್ಯಸ್ಥವಾಗಿರುವದರಿಂದ ವ್ಯಾಪಾರವು ಬೆಳೆದದೆ. ಇಲ್ಲಿಂದ ೧೮ ಮೈಲಿನ ಮೇಲೆ ಜಗತ್ತಿನಲ್ಲಿ ಪ್ರಸಿದ್ಧ ವಾದ ತಡಸಲವುಂಟು.

೧೧. **ಗೋಕರ್ಣ.**—ಉತ್ತರ ಅಕ್ಷಾಂಶ ೧೪°, ೩೩'; ಪೂರ್ವ ರೇಖಾಂಶ ೭೪°, ೨೮'. ಜನಸಂಖ್ಯೆ ೮೪೮೧. ಕುಮಟೆಯ ಉತ್ತರಕ್ಕೆ ೧೦ ಮೈಲಿನ ಮೇಲೆ ಪ್ರಸಿದ್ಧ ಕ್ಷೇತ್ರವು. ಊರ ಮಧ್ಯದಲ್ಲಿ ಸಮುದ್ರದಂಡೆಯ ಮೇಲೆ ಮಹಾ ಬಳೇಶ್ವರನ ಭವ್ಯ ದೇವಸ್ಥಾನವದೆ. ಸುತ್ತಲೂ ಹವೀಕರ ಮನೆಗಳವೆ. ಮಹಾ ಶಿವರಾತ್ರಿಯಲ್ಲಿ ರಥೋತ್ಸವವಾಗುವದು. ಆಗ ೩೦ ಸಾವಿರ ಜನರು ನೆರೆಯುವರು. ಅಲ್ಲಿ ಮೂರು ಪ್ರಾಥಮಿಕ ಶಾಲೆಗಳೂ, ೨ ಸಂಸ್ಕೃತ ಪಾಠ ಶಾಲೆಗಳೂ, ಪೋಸ್ಟು, ಪೊಲೀಸ ಕಚೇರಿಯೂ ಇರುವವು. ಅಹಲ್ಯಾ ಬಾಯಿಯ ಛತ್ರದಲ್ಲಿ ಬಡವರಿಗೆ ಮೂರು ದಿವಸ ಸದಾವರ್ತವು ದೊರೆಯುವದು.

ಗೋಕರ್ಣವು ರಾಮಾಯಣದ ಕಾಲದಿಂದ ಪ್ರಸಿದ್ಧವು. ಇತ್ತಲಾಗಿ ಎರ ಡಂತಸ್ತಿನ ಮನೆಗಳು ಹೆಚ್ಚಾಗಿವೆ. ವ್ಯಾಪಾರವು ಬೆಳೆದದೆ.

೧೨. **ಗುಡ್ಡೇಹಳ್ಳಿ.**—ಕಾರವಾರದಿಂದ ೩ ಮೈಲಿನ ಮೇಲೆ ೧೮೦೦ ಫೂಟು ಎತ್ತರವಾದದ್ದು. ಹವೆಯು ತಂಪಾಗಿರುವದರಿಂದ ದೊಡ್ಡ ಅಧಿಕಾರ ಸ್ಥರು ಬೇಸಿಗೆಯಲ್ಲಿ ಅಲ್ಲಿರುವರು. ಅಲ್ಲಿ ಬಂಗಲೆಯೂ ಬಾವಿಯೂ ಇರು ವವು. ಕಾಯಂ ವಸ್ತಿ ಇಲ್ಲ.

೧೩. **ಹಳದೀಪುರ.** - ಜನಸಂಖ್ಯೆ ೫೧೦೧. ಹೊನ್ನಾವರದ ಉತ್ತರಕ್ಕೆ ೫ ಮೈಲಿನ ಮೇಲೆ ಅದೆ. ಇಲ್ಲಿ ಹವೀಕರ ಅಗ್ರಹಾರವಿದೆ. ಇಲ್ಲಿ ಅವಲಕ್ಕಿ ಮಂಡಕ್ಕಿಗಳನ್ನು ಮಾಡುತ್ತಾರೆ; ೨ ಪ್ರಾಥಮಿಕ ಶಾಲೆಗಳೂ ಧರ್ಮಶಾಲೆ ಯೂ ಇರುವವು.

೧೪. **ಹಲ್ಯಾಳ.** — ಉತ್ತರ ಅಕ್ಷಾಂಶ ೧೫°, ೨೦′; ಪೂರ್ವ ರೇಖಾಂಶ ೭೪°, ೪೫′. ಜನಸಂಖ್ಯೆ ೫೫೦೫. ಧಾರವಾಡ ಜಿಲ್ಹೆಯೊಳಗಿನ ಅಳಣಾವರ ಸ್ಟೇಶನದಿಂದ ೭ ಮೈಲಿನ ಮೇಲೆ ಅದೆ. ತಾಲೂಕಿನ ಮುಖ್ಯ ಗ್ರಾಮವು. ಟಪಾಲು ಮತ್ತು ತಾರ ಆಫೀಸು ಅದೆ. ೪ ಪ್ರಾಥಮಿಕ ಶಾಲೆಗಳವೆ. ಇಲ್ಲಿ ಮ್ಯುನಿಸಿಪಾಲಿಟಿಯದೆ. ಹವೆಯು ರೋಗಕಾರಕವು. ಚಳಿಜ್ವರ, ನಾರು ಇವು ಮುಖ್ಯ ಬೇನೆಗಳು. ೧೮೮೧ರಲ್ಲಿ ಜನಸಂಖ್ಯೆ ೬೬೫೮ ಇತ್ತು; ಈಗ ಕಡಿಮೆಯಾಗಿದೆ. ಮಳೆ ೪೭ ಇಂಚು.

೧೫. **ಹೊನ್ನಾವರ.** — ಉತ್ತರ ಅಕ್ಷಾಂಶ ೧೪°, ೪೭′; ಪೂರ್ವ ರೇಖಾಂಶ ೭೪°, ೨೮′. ಜನಸಂಖ್ಯೆ ೭೩೨೩. ೧೮೬೨ರಲ್ಲಿ ಕಾನಡಾ ಜಿಲ್ಹೆಯು ಮುಂಬಯಿಗೆ ಸೇರಿದ ಬಳಿಕ ಕಾರವಾರವು ಜಿಲ್ಹೆಯ ಮುಖ್ಯ ಸ್ಥಳವಾದ್ದರಿಂದ ಹೊನ್ನಾವರದ ವಸ್ತಿಯು ಕಡಿಮೆಯಾಯಿತು. ಇಲ್ಲಿ ತಾಲೂಕಿನ ಕಚೇರಿಗಳಲ್ಲದೆ ಆಸ್ಪತ್ರಿ, ಮ್ಯುನಿಸಿಪಾಲಿಟಿ, ಇಂಗ್ರೇಜಿ ಹಾಯಸ್ಕೂಲು, ಟಪಾಲು ಮತ್ತು ತಾರ ಆಫೀಸು, ಮುನಸಿಫ ಕೋರ್ಟು, ಮತ್ತು ೬ ಪ್ರಾಥಮಿಕ ಶಾಲೆಗಳು ಅವೆ. ಹೊನ್ನಾವರ ಬಂದರವು ಸುರಕ್ಷಿತವಾದದ್ದಲ್ಲ. ಕಾರಣ ಎಷ್ಟೋ ಜನರು ಕುಮಟೆಯಲ್ಲಿ ಇಳಿದು ಹೊನ್ನಾವರಕ್ಕೆ ಹೋಗುತ್ತಾರೆ.

ಇಲ್ಲಿ ಗುಲಾಲು ಮಾಡುವ ಕಾರಖಾನೆಯದೆ. ಮತ್ತು ಮಾವಿನಹಣ್ಣಿನ ವಡಿಗಳನ್ನು ಮಾಡುವ ಉದ್ಯೋಗವು ಸಹ ಪ್ರಾರಂಭವಾಗಿದೆ. ಈ ಪಟ್ಟಣದ ಉತ್ತರಕ್ಕೆ ರಾಮತೀರ್ಥವೆಂಬ ನೀರಿನ ಶಲೆಯು ಪ್ರಸಿದ್ಧವದೆ. ಅದರ ಸ್ನಾನದಿಂದ ಚರ್ಮರೋಗ, ಹುಚ್ಚು ಮೊದಲಾದ ವ್ಯಾಧಿಗಳು ವಾಸಿಯಾಗುವವು.

ಈಶಾನ್ಯಕ್ಕೆ ಬಸವರಾಜದುರ್ಗವೆಂಬ ನಡುಗಡ್ಡೆಯಲ್ಲಿ ಒಂದು ಕೋಟೆಯದೆ. ಅದರಲ್ಲಿ ತೆಂಗಿನ ಬನಗಳುಂಟು.

ಹೊನ್ನಾವರದಲ್ಲಿ ವರ್ಷಕ್ಕೆ ೧೦೫ರಿಂದ ೧೪೫ ಇಂಚುಗಳ ವರೆಗೆ ಮಳೆಯಾಗುವದು.

೧೬. **ಕಾರವಾರ.** — ಉತ್ತರ ಅಕ್ಷಾಂಶ ೧೪°, ೫೦′; ಪೂರ್ವ ರೇಖಾಂಶ ೭೪°, ೧೫′. ಜನಸಂಖ್ಯೆ ೧೮೧೫೯. ಇದು ಜಿಲ್ಹೆಯ ಮುಖ್ಯ ಪಟ್ಟಣವು. ಉಷ್ಣಮಾನವು ೬೦°ದಿಂದ ೧೨೦°ದ ವರೆಗೆ. ಮಳೆ ೧೦೦—೧೫೦ ಇಂಚು. ಜಿಲ್ಹೆಯ ಎಲ್ಲ ಕಚೇರಿಗಳಲ್ಲದೆ ಒಂದು ಸರಕಾರೀ ಹಾಯಸ್ಕೂಲು, ೨ ಖಾಸಗೀ ಇಂಗ್ರೇಜೀ ಶಾಲೆಗಳು, ೮ ಪ್ರಾಥಮಿಕ ಶಾಲೆಗಳು, ಆಸ್ಪತ್ರಿ, ಮತ್ತು ತುರಂಗ

ಮೊದಲಾದವುಗಳು ಅವೆ. ಮಹಮಡನ್ ಪ್ರೆಸ್ ಎಂಬ ಒಂದು ಛಾಪಖಾನೆಯದೆ. ೨ ದೊಡ್ಡ ಚರ್ಚಗಳಿವೆ. ಇಲ್ಲಿಯ ಮ್ಯುನಿಸಿಪಾಲಿಟಿಯು ಜಿಲ್ಹೆಯಲ್ಲಿ ದೊಡ್ಡದು. ಬಂದರದ ಪಶ್ಚಿಮಕ್ಕೆ ದೇವಗಡ ನಡುಗಡ್ಡೆ ಇರುವದರಿಂದ ಬಿರುಗಾಳಿಯ ಭಯವಿಲ್ಲ. ಅಲ್ಲಲ್ಲಿ ಬೆಳಿಸಿದ ಗಾಳೀಮರಗಳ ಬನದಿಂದ ಈ ಪಟ್ಟಣಕ್ಕೆ ಶೋಭೆಯುಂಟಾಗಿದೆ. ದೇವಗಡದಲ್ಲಿ ಒಂದು ದೀಪಸ್ತಂಭ ಉಂಟು. ಬಾಡ, ಸುಂಕೇರಿ, ಕೋಡೀಬಾಗ, ಶೇಜವಾಡ, ಕೋಣೆ ಇವು ಮುಖ್ಯ ಭಾಗಗಳು. ಕೋಡೀಬಾಗದಲ್ಲಿ ಇಮಾರತೀ ಕಟ್ಟಿಗೆಯ ಡಿಪೋ ಅದೆ. ಅಲ್ಲಿ ಆನೆಗಳು ತೊಲೆಗಳನ್ನು ಎಳೆದು ಹೊಂದಿಸಿ ಇಡುವದುಂಟು. ಶೇಜವಾಡವು ಈ ಜಿಲ್ಹೆಯ ಪಂಚಕ್ಷೇತ್ರಗಳಲ್ಲಿ ಒಂದಾಗಿದೆ. ಅರ್ಚಕರು ಕರ್ಹಾಡೇ ಬ್ರಾಹ್ಮಣರು.

೧೭. **ಕೆಕ್ಕಾರ.**— ಜನಸಂಖ್ಯೆ ೧೦೨೪. ಹವೀಕರ ಮಠವದೆ. ಇಲ್ಲಿ ಒಂದು ಸಂಸ್ಕೃತ ಪಾಠಶಾಲೆ ಇರುವದು. ಸುತ್ತಲೂ ಹವೀಕರ ಹಳ್ಳಿಗಳು ಬಹಳ. ಅಲ್ಲಿ ಅಡಿಕೆಯ ಬೆಳೆಯು ವಿಶೇಷ.

೧೮. **ಕರ್ಕಿ.**— ಜನಸಂಖ್ಯೆ ೩೧೬೩. ಹವೀಕರ ಮೂಲಸ್ಥಾನವು. ಅವರಲ್ಲಿ ಕೆಲವರು ವಿದ್ಯೆ ಯಕ್ಷಗಾನಗಳಲ್ಲಿ ಕೆಲಮಟ್ಟಿಗೆ ಮುಂದರಿದಿರುವರು.

೧೯. **ಕುಮಟಾ.**— ಉತ್ತರ ಅಕ್ಷಾಂಶ ೧೪°, ೨೫′; ಪೂರ್ವ ರೇಖಾಂಶ ೭೪°, ೨೭′. ಜನಸಂಖ್ಯೆ ೧೦,೩೪೩. ತಾಲೂಕಿನ ಸ್ಥಳವು. ಇಲ್ಲಿ ಮ್ಯುನಿಸಿಪಾಲಿಟಿಯದೆ. ತಾಲೂಕಿನ ಕಚೇರಿಗಳಲ್ಲದೆ ಮುನಸಿಫ ಕೋರ್ಟು, ಗಿಬ್ಬ ಹಾಯಸ್ಕೂಲು, ೮ ಪ್ರಾಥಮಿಕ ಶಾಲೆಗಳು, ಆಸ್ಪತ್ರಿ, ಟಪಾಲು, ತಾರ ಆಫೀಸು, ಮುಸಾಫರೀ ಬಂಗಲೆ ಮತ್ತು ಧರ್ಮಶಾಲೆಗಳು ಇರುತ್ತವೆ.

ಇದು ಜಿಲ್ಹೆಯಲ್ಲಿ ಎರಡನೇ ಬಂದರವು. ಸಾಧಾರಣ ಸುರಕ್ಷಿತವಾದದ್ದು. ಇಲ್ಲಿಂದ ಈಗ ಅಡಿಕೆ, ಮೆಣಸು, ಯಾಲಕ್ಕಿಗಳು ಪರಸ್ಥಳಕ್ಕೆ ಹೋಗುತ್ತವೆ. ಕೆಲವು ವರ್ಷಗಳ ಹಿಂದೆ ಅರಳೆಯ ವ್ಯಾಪಾರವು ವಿಶೇಷವಾಗಿತ್ತು. ಅರಬರು ಇಲ್ಲಿಗೆ ಖರ್ಜೂರ, ಅಂಟು, ಡಾಳಿಂಬ ಮುಂತಾದ ಸರಕುಗಳನ್ನು ತರುವರು; ಅಕ್ಕಿಯನ್ನು ತಮ್ಮ ದೇಶಕ್ಕೆ ಒಯ್ಯುವರು.

ಉಷ್ಣತೆ ೯೪°, ಶೀತ ೬೯°, ಮಳೆ ೧೨೫–೧೭೫ ಇಂಚು.

೨೦. **ಮಾಜಾಳಿ.**— ಜನಸಂಖ್ಯೆ ೪೬೩೩. ಕಾರವಾರದ ಉತ್ತರಕ್ಕೆ ೭ ಮೈಲಿನ ಮೇಲೆ ಗೋವೆಯ ಸರಹದ್ದಿನ ಮೇಲೆ ಅದೆ. ಇಲ್ಲಿ ಕಸ್ಟಮನಾಕೆಯೂ, ೨ ಸಾಲೆಗಳೂ, ಪೋಸ್ಟೂ ಇರುವವು.

೨೧. **ಮಿರ್ಜಾನ.** — ಜನಸಂಖ್ಯೆ ೯೬೯. ಕುಮಟೆಯ ಉತ್ತರಕ್ಕೆ ೫ ಮೈಲಿನ ಮೇಲೆ. ಇಲ್ಲಿ ಒಂದು ಹಾಳುಕೋಟೆಯುಂಟು. ಅದನ್ನು ಸರ್ಪನ ಮಲಿಖನು ಕಟ್ಟಿಸಿದನೆಂದು ತಿಳಿಯುತ್ತದೆ. ಇಲ್ಲಿ ಮುಸಲ್ಮಾನರ ವಸ್ತಿ ಬಹಳ. ಕಾರಣ ಒಂದು ಉರ್ದು ಸಾಲೆಯನ್ನು ಇಟ್ಟಿರುವರು. ಮುಸಾಫರೀ ಬಂಗಲೆಯು ನದಿಯ ದಂಡೆಗೆ ಸಮೀಪವಾಗಿದೆ.

೨೨. **ಮುಂಡಗೋಡ.** — ಉತ್ತರ ಅಕ್ಷಾಂಶ ೧೪°, ೫೮′; ಪೂರ್ವ ರೇಖಾಂಶ ೭೫°, ೧೦′. ಜನಸಂಖ್ಯೆ ೧೧೯೫. ಮಹಾಲಿನ ಮುಖ್ಯ ಗ್ರಾಮವು. ೩೦ ವರ್ಷಗಳಲ್ಲಿ ಜನಸಂಖ್ಯೆಯು ೨೦೯ ಕಡಿಮೆಯಾಗಿದೆ. ಮಹಾಲಿನ ಎಲ್ಲ ಕಚೇರಿಗಳಲ್ಲದೆ ರೇಂಜ ಫಾರೆಸ್ಟ ಕಚೇರಿ, ಆಸ್ಪತ್ರಿ, ಮುಸಾಫರೀ ಬಂಗಲೆ ಇರುತ್ತವೆ. ಊರ ಸಮೀಪದಲ್ಲಿ ಒಂದು ಹಾಳುಕೋಟೆಯುಂಟು.

೨೩. **ಮುರಡೇಶ್ವರ.** — ಜನಸಂಖ್ಯೆ ೪೭೭೨. ಸಮುದ್ರದಂಡೆಗೆ ಕಂದುಗಿರಿ ಎಂಬ ಗುಡ್ಡದ ಮೇಲೆ ಮುರಡೇಶ್ವರನ ದೊಡ್ಡ ಗುಡಿಯುಂಟು. ಇದಕ್ಕೆ ಸರಕಾರದಿಂದ ೧೪೪೦ ರೂಪಾಯಿಯ ನೇಮಣೂಕು ನಡೆಯುತ್ತದೆ. ಇಲ್ಲಿ ನವಾಯಿತರ ವಸ್ತಿ ಇರುವದು.

೨೪. **ಸದಾಶಿವಗಡ.** — ಉತ್ತರ ಅಕ್ಷಾಂಶ ೧೪°, ೫೦′; ಪೂರ್ವ ರೇಖಾಂಶ ೭೪°, ೧೦′. ಜನಸಂಖ್ಯೆ ೪೫೭೩. ಕಾರವಾರದ ಉತ್ತರಕ್ಕೆ ೩ ಮೈಲಿನ ಮೇಲೆ. ಇಲ್ಲಿ ಮೊದಲು ದಂಡಿನ ಒಂದು ಪಾಳ್ಯವಿತ್ತು. ಈಗ ಪೊಲೀಸ ಕಚೇರಿ, ೬ ಪ್ರಾಥಮಿಕ ಶಾಲೆಗಳು, ಮುಸಾಫರೀ ಬಂಗಲೆ, ಧರ್ಮಶಾಲೆ ಇರುತ್ತವೆ. ಇಲ್ಲಿಯ ಗುಡ್ಡದ ಮೇಲೆ ಒಂದು ಕೋಟೆಯುಂಟು. ಅದನ್ನು ಸ್ವಾದೆಯ ಸದಾಶಿವನಾಯಕನು ಕಟ್ಟಿಸಿದನೆಂದು ಹೇಳುತ್ತಾರೆ.

೨೫. **ಸಾಣೀಕಟ್ಟೆ.** — ಜನಸಂಖ್ಯೆ ೪೭೫. ಕುಮಟೆಯ ಉತ್ತರಕ್ಕೆ ೧೦ ಮೈಲಿನ ಮೇಲೆ. ಇಲ್ಲಿ ಉಪ್ಪಿನ ಆಗರಗಳಿವೆ. ಉಪ್ಪಿನಿಂದ ಸರಕಾರಕ್ಕೆ ೨⅓ ಲಕ್ಷ ರೂಪಾಯಿಗಳ ಉತ್ಪನ್ನವದೆ. ಕಸ್ಟಮ ಖಾತೆಯ ಸರಕಾರಕೂನರ ಕಚೇರಿ, ೧ ಕನ್ನಡ ಸಾಲೆ, ಧರ್ಮಶಾಲೆ ಅವೆ.

೨೬. **ಶಿರಾಳಿ.** — ಜನಸಂಖ್ಯೆ ೪೨೦೮. ಇಲ್ಲಿ ಸಾರಸ್ವತ ಬ್ರಾಹ್ಮಣರ ಚಿತ್ರಾಪುರ ಮಠವೂ ೨ ಪ್ರಾಥಮಿಕ ಶಾಲೆಗಳೂ, ಟಪಾಲ ಕಚೇರಿಯೂ ಅವೆ.

೨೭. **ಸಿದ್ದಾಪುರ.** — ಉತ್ತರ ಅಕ್ಷಾಂಶ ೧೪°, ೨೩′; ಪೂರ್ವ ರೇಖಾಂಶ ೭೪°, ೫೮′. ಜನಸಂಖ್ಯೆ ೨೩೬೫. ತಾಲೂಕಿನ ಮುಖ್ಯ ಗ್ರಾಮವು. ಬುಧ

ವಾರ ಸಂತೆಯಾಗುವದು. ಈ ಊರ ದಕ್ಷಿಣಕ್ಕೆ ಮೈಸೂರ ಸೀಮೆಯ ಮಾರ್ಗದಲ್ಲಿ ರಮಣೀಯವಾದ ಬಕುಲವೃಕ್ಷದ ಬನವದೆ. ಪಶ್ಚಿಮಕ್ಕೆ ೩ ಮೈಲಿನ ಮೇಲೆ ಭುವನಗಿರಿ ದೇವಸ್ಥಾನವೂ ಕೆಳಗೆ ಕೆರೆಯೂ ಇರುವವು. ಇಲ್ಲಿ ರಥ ಸಪ್ತಮಿಗೆ ಜಾತ್ರೆಯಾಗುತ್ತದೆ.

೨೮. ಸಿರಸಿ. — ಉತ್ತರ ಅಕ್ಷಾಂಶ ೧೪°, ೨೫′; ಪೂರ್ವ ರೇಖಾಂಶ ೭೪°, ೫೫′. ಜನಸಂಖ್ಯೆ ೬೩೭೪. ತಾಲೂಕಿನ ಕಚೇರಿಗಳಲ್ಲದೆ ಮುನಸಿಫ ಕೋರ್ಟು, ಟಪಾಲ ಕಚೇರಿ, ತಾರ ಆಫೀಸು, ಇಂಗ್ಲಿಷ ಸಾಲೆ, ೬ ಪ್ರಾಥಮಿಕ ಶಾಲೆಗಳು, ಮುಸಾಫರೀ ಬಂಗಲೆ, ಮ್ಯುನಿಸಿಪಾಲಿಟಿ ಇರುತ್ತವೆ. ಊರಿನ ವಸ್ತಿಯು ತಿಳುವಾಗಿದೆ. ಇದು ಜಿಲ್ಹೆಯಲ್ಲಿ ಪ್ರಸಿದ್ಧವಾದ ವ್ಯಾಪಾರದ ಸ್ಥಳವು. ಅಡಿಕೆ, ಯಾಲಕ್ಕಿ, ಮೆಣಸು, ತೆಂಗಿನಕಾಯಿ ಇವುಗಳನ್ನು ಪರಸ್ಥಳಗಳಿಗೆ ಕಳಿಸುವರು. ಹವೆಯು ರೋಗಕರವಾದದ್ದು.

ಎರಡು ವರ್ಷಕ್ಕೊಮ್ಮೆ ಆಗುವ ಮರಿಯಮ್ಮನ ಜಾತ್ರೆಗೆ ೧೫—೨೦ ಸಾವಿರ ಜನರು ಕೂಡುವರು. ಜಾತ್ರೆಯಲ್ಲಿ ಕೋಣ, ಕುರಿ, ಕೋಳಿಗಳನ್ನು ಕಡಿಯುವರು.

೨೯. ಸ್ವಾದೆ. — ಜನಸಂಖ್ಯೆ ೪೩೮. ಸಿರಸಿಯ ಉತ್ತರಕ್ಕೆ ೧೦ ಮೈಲಿನ ಮೇಲೆ ಅದೆ. ವಿಜಯನಗರಕ್ಕಿಂತ ಪೂರ್ವದ ರಾಜಧಾನಿಯು. ವಿಜಯನಗರವು ಹಾಳಾದ ಬಳಿಕ ಇಮ್ಮಡಿ ಅರಸಪ್ಪನಾಯಕನೆಂಬ ಲಿಂಗಾಯತ ಸರದಾರನು ಇಲ್ಲಿ ಸ್ವತಂತ್ರವಾಗಿ ಆಳಹತ್ತಿದನು. (೧೫೯೦ ಇ. ಸ.) ಮುಂದೆ ೧೭೬೦ರಲ್ಲಿ ಹೈದರನು ದಂಡೆತ್ತಿ ಬರಲು ಅವನ ವಂಶದವರು ಗೋವೆಗೆ ಓಡಿ ಹೋಗಿ ಬಾಂದೇವಾಡಿಯಲ್ಲಿ ಈಗಲೂ ಆಳುತ್ತಿರುವರು.

ಇಲ್ಲಿಯ ಜೈನರ ಮಠವು ೮ನೇ ಶತಕದಿಂದ ನಡೆಯುತ್ತ ಬಂದದೆ. ಹವೀಕರ ಮಠಕ್ಕೆ ಹೊನ್ನಳ್ಳಿಮಠವೆನ್ನುವರು. ಮೂರನೇದು ವಾದಿರಾಜ ಸ್ವಾಮಿಗಳ ಮಠವು. ಇವರು ೧೬ನೇ ಶತಕದ ಕಡೆಯಲ್ಲಿ ಆಗಿಹೋದರು. ಫಾಲ್ಗುಣ ಪೂರ್ಣಿಮೆಗೆ ತ್ರಿವಿಕ್ರಮದೇವರ ಮತ್ತು ವೈಶಾಖ ಪೂರ್ಣಿಮೆಗೆ ನಾರಸಿಂಹನ ರಥೋತ್ಸವವೂ ಆಗುವವು.

೩೦. ಸುಪೆ. — ಉತ್ತರ ಅಕ್ಷಾಂಶ ೧೫°, ೧೮′; ಪೂರ್ವ ರೇಖಾಂಶ ೭೪°, ೩೫′. ಜನಸಂಖ್ಯೆ ೧೧೦೭. ಕಾಳೀ ಪಾಂಢರೀ ಹೊಳೆಗಳ ಸಂಗಮದ ಹತ್ತರ ಅದೆ. ಇಲ್ಲಿ ಪೇಠಾದ ಕಚೇರಿಗಳಲ್ಲದೆ ಆಸ್ಪತ್ರಿ, ಮುಸಾಫರೀ ಬಂಗಲೆ ಇರು

ತ್ರವೆ. ಇಲ್ಲಿಯ ರಾಮಲಿಂಗನ ಗುಡಿಗೆ ಸರಕಾರದಿಂದ ೬೦೦ ರೂಪಾಯಿಯ ನೇಮಣೂಕು ನಡೆಯುತ್ತದೆ. ಮಳೆ ೮೯ ಇಂಚು. ಪರಮಾವಧಿ ಶೀತ ೫೮°; ಉಷ್ಣತೆ ೯೧°.

೩೧. **ಉಳವಿ.** — ಜನಸಂಖ್ಯೆ ೨೧೫. ಲಿಂಗವಂತರ ಧರ್ಮಗುರುವಾದ ಬಸವೇಶ್ವರನು ಬಿಜ್ಜಳನನ್ನು ಕೊಲ್ಲಿಸಿದ ಬಳಿಕ (೧೧೬೭) ಇಲ್ಲಿಗೆ ಓಡಿಬಂದು ಬಾವಿಯೊಳಗೆ ಹಾರಿಕೊಂಡನೆಂದು ಹೇಳುತ್ತಾರೆ. ಬಸವೇಶ್ವರನ ಗುಡಿಯು ಸಾಮಾನ್ಯ ತರದ್ದಿರುತ್ತದೆ. ಫಾಲ್ಗುಣಮಾಸದಲ್ಲಿ ಜಾತ್ರೆಯಾಗುತ್ತದೆ. ಆಗ್ಗೆ ೧೫೦೦೦ ಜನರು ಕೂಡುವರು. ಇಲ್ಲಿ ತ್ರೈಮಾಸಿಕ ಮ್ಯುನಿಸಿಪಾಲಿಟಿಯದೆ.

೩೨. **ಕ್ಯಾಸಲರಾಕ್.** — ಉತ್ತರ ಅಕ್ಷಾಂಶ ೧೫°, ೨೬′; ಪೂರ್ವ ರೇಖಾಂಶ ೭೪°, ೨೩′. ಜನಸಂಖ್ಯೆ ೧೦೮೮. ಗೋವೆಯ ಸರಹದ್ದಿನ ಮೇಲೆ ಇರುವದರಿಂದ ಇಲ್ಲಿ ಸಾಮಾನುಗಳನ್ನು ತಪಾಸು ಮಾಡಿ ಸುಂಕ ತೆಗೆದುಕೊಳ್ಳುವರು. ಇಲ್ಲಿ ಟಪಾಲಕಚೇರಿ, ತಾರ ಆಫೀಸು, ಫಾರೆಸ್ಟ ಆಫೀಸು, ಕಸ್ಟಮ ಅಸಿಸ್ಟಂಟ ಕಲೆಕ್ಟರನ ಆಫೀಸು, ಮರಾಠಿ ಸಾಲೆ ಇರುವವು. ಇದು ಸಮುದ್ರಸಪಾಟಿಯಿಂದ ೧೯೦೭ ಫೂಟು ಎತ್ತರವಿರುತ್ತದೆ. ಹವೆಯು ಆರೋಗ್ಯಕರವು. ಆದ್ದರಿಂದ ಬೇಸಿಗೆಯಲ್ಲಿ ಇರಲಿಕ್ಕೆ ಇಲ್ಲಿಗೆ ದೊಡ್ಡ ಅಧಿಕಾರಸ್ಥರು ಬರುವರು. ಮಳೆಗಾಲದಲ್ಲಿ ಮಳೆಯು ಅತಿಶಯವಾಗುವದು. ವರ್ಷದ ಸರಾಸರಿ ಮಳೆ ೨೫೦ ಇಂಚು.

೩೩. **ಉಪ್ಪಿನಪಟ್ಟಣ.** — ಜನಸಂಖ್ಯೆ ೬೯೧. ಅಘನಾಶಿನೀ ಹೊಳೆಯ ದಂಡೆಯಲ್ಲಿ ವ್ಯಾಪಾರದ ಊರು. ಅಡಿಕೆ, ಯಾಲಕ್ಕಿ, ಮೆಣಸು ಮುಂತಾದವುಗಳನ್ನು ಪರಸ್ಥಳಗಳಿಗೆ ಕಳಿಸುವರು. ಉಪ್ಪಿನ ವ್ಯಾಪಾರವೂ ಉಂಟು. ಇಲ್ಲಿ ಒಂದು ಸಾಲೆಯದೆ. ಸಮೀಪದಲ್ಲಿ ಕತಗಾಲ ಎಂಬ ಊರ ಹತ್ತರ ಮುಸಾಫರೀ ಬಂಗಲೆಯುಂಟು.

೩೪. **ಯಾಣ.** — ಕುಮಟೆಯಿಂದ ೧೫ ಮೈಲಿನ ಮೇಲೆ ಪ್ರಸಿದ್ಧ ಕ್ಷೇತ್ರ. ಶಿವರಾತ್ರಿಗೆ ಬೈರವೇಶ್ವರನ ಜಾತ್ರೆಯಾಗುತ್ತದೆ.

೩೫. **ಯಲ್ಲಾಪುರ.** — ಉತ್ತರ ಅಕ್ಷಾಂಶ ೧೪°, ೫೮′. ೭೪°, ೫೦′. ಜನಸಂಖ್ಯೆ ೧೯೯೦. (೧೯೧೧). ೧೮೮೧ರಲ್ಲಿ ಜನಸಂಖ್ಯೆ ೨೦೪೮. ತಾಲೂಕಿನ ಕಚೇರಿಗಳಲ್ಲದೆ ೪ ಪ್ರಾಥಮಿಕ ಶಾಲೆಗಳೂ, ತಾರ ಆಫೀಸು, ಆಸ್ಪತ್ರೆ, ಮುಸಾಫರೀ ಬಂಗಲೆ ಅವೆ. ಹವೆ ರೋಗಕಾರಕ. ಪರಮಾವಧಿ ಉಷ್ಣತೆ ೯೫°, ಶೀತ ೬೦°. ಸರಾಸರಿ ಮಳೆ ೬೯ ಇಂಚು.

# ೧೩ನೆಯ ಪ್ರಕರಣ.

## ಇತಿಹಾಸ.

ಕಾನಡಾ ಜಿಲ್ಲೆಯು ಮಹಾಭಾರತ ಕಾಲದಲ್ಲಿ ವಿರಾಟನ ರಾಜ್ಯಕ್ಕೆ ಸೇರಿತ್ತೆಂದು ತಿಳಿಯುತ್ತದೆ. ಅದಕ್ಕೂ ಪೂರ್ವದಲ್ಲಿ ಅಂದರೆ ರಾಮಾಯಣ ಕಾಲದಲ್ಲಿ ಇದು ರಾವಣನ ರಾಜ್ಯಕ್ಕೆ ಒಳಗಾಗಿತ್ತೆಂದು ಅನುಮಾನವುಂಟು. ಪ್ರಾಚೀನ ಇತಿಹಾಸಕ್ಕೆ ಪುರಾಣಗಳ ಹೊರತು ಮತ್ತೇನೂ ಆಧಾರವಿಲ್ಲ.

ಕರ್ನಾಟಕದ ನಿಜವಾದ ಇತಿಹಾಸವು ಶಾಲಿವಾಹನನ ಕಾಲದಿಂದ ಅಂದರೆ ಕ್ರಿಸ್ತಶಕದ ಆರಂಭದಿಂದ ಕೆಲಮಟ್ಟಿಗೆ ದೊರೆಯುತ್ತದೆ. ಈ ಜಿಲ್ಲೆಯಲ್ಲಿದ್ದ ಅಂಕೋಲಾ, ಸದಾಶಿವಗಡ, ಮಿರ್ಜಾನ, ಸ್ವಾದೆಗಳಲ್ಲಿಯ ಹಾಳು ಕೋಟೆಗಳಿಂದಲೂ ಬನವಾಸಿ ಗೆರಸಪ್ಪೆಗಳಲ್ಲಿಯ ಶಿಲಾಲೇಖಗಳಿಂದಲೂ ಈ ಜಿಲ್ಲೆಯ ಇತಿಹಾಸವನ್ನು ಅರಿಯಬಹುದು.

ಕದಂಬರೆಂಬ ಕುರುಬ ಜಾತಿಯ ಅರಸರು ಚಾಲುಕ್ಯರ ಮಾಂಡಲಿಕರಾಗಿ ಕ್ರಿಸ್ತಶಕದ ಆರಂಭದಲ್ಲಿ ಆಳಿದರು. ಆಗ ಬನವಾಸಿಯು ರಾಜಧಾನಿಯಾಗಿ ಮೆರೆಯುತ್ತಿತ್ತೆಂದೂ ಅದಕ್ಕೆ ಕೌಮುದೀ, ಬೈಂದವೀ, ಜಯಂತೀ, ವೈಜಯಂತೀ ಮೊದಲಾದ ಹೆಸರುಗಳಿದ್ದವೆಂದೂ ತಿಳಿಯುತ್ತದೆ. ಈ ವಂಶದ ಪ್ರಸಿದ್ಧ ಅರಸನಾದ ಮಯೂರವರ್ಮನ ತಂದೆಯಾದ ಶಕವರ್ಮನು ಏಳನೇ ಶತಕದಲ್ಲಿ ಮಲಬಾರದಿಂದ ಹವೀಕರನ್ನು ತಂದು ಈ ಜಿಲ್ಲೆಯಲ್ಲಿ ಇಟ್ಟನೆಂದು ತಿಳಿಯುತ್ತದೆ.

ಆಮೇಲೆ ಎಂಟನೇ ಶತಮಾನದಿಂದ ಬಾದಾಮಿಯಲ್ಲಿ ಚಾಲುಕ್ಯವಂಶದ ಅರಸರು ಪ್ರಬಲರಾಗಿ ಕದಂಬವಂಶದ ಅರಸರನ್ನು ಮಾಂಡಲಿಕರನ್ನಾಗಿ ಮಾಡಿಕೊಂಡು, ಅವರಲ್ಲಿ ಒಬ್ಬನನ್ನು ಗೋವೆಯಲ್ಲಿಟ್ಟು ಆಳಿದರೆಂದು ಗೊತ್ತಾಗುತ್ತದೆ. ಅನಂತರ ರಾಷ್ಟ್ರಕೂಟವಂಶದ ಅರಸರು ಕ್ರಿಸ್ತಶಕದ ೯೭೩ರ ವರೆಗೆ ಆಳಿದರು.

ತರುವಾಯ ನಿಜಾಮನ ರಾಜ್ಯದಲ್ಲಿದ್ದ ಕಲ್ಯಾಣವೆಂಬಲ್ಲಿ ಚಾಲುಕ್ಯವಂಶದವರು ೨೦೦ ವರ್ಷ ಆಳಿದರೆಂತಲೂ ಆ ಕಾಲಕ್ಕೆ ಬಿಜ್ಜಳನ ಮಂತ್ರಿಯು ಲಿಂಗಾಯತ ಮತವನ್ನು ಸ್ಥಾಪಿಸಿದ್ದರಿಂದ ಬಿಜ್ಜಳನ ರೋಷವನ್ನು ತಪ್ಪಿಸಿಕೊಳ್ಳಲಿಕ್ಕೆ ಅವನು ಉಳಿವಿಗೆ ಓಡಿಬಂದನೆಂದೂ ಇತಿಹಾಸದಿಂದ ಗೊತ್ತಾಗುತ್ತದೆ.

ಮುಂದೆ ದ್ವಾರಸಮುದ್ರದ ಬಲ್ಲಾಳ ರಾಜರೂ ದೇವಗಿರಿಯ ಯಾದವರೂ ಕೂಡಿ ೧೩೧೦ರ ವರೆಗೆ ಆಳಿದರು. ಅನಂತರ ವಿಜಯನಗರದ ರಾಜ್ಯವು ಪ್ರಬಲವಾಗಿ ೧೫೬೫ರ ವರೆಗೆ ಬಹು ವೈಭವದಿಂದ ನಡೆಯಿತು. ಆಗ ಅವರ ಸುಭೇದಾರರು ಸ್ವಾದಿ, ಬೀಳಗಿ, ಚಂದ್ರಗುತ್ತಿ, ಗೆರಸಪ್ಪೆ ಮೊದಲಾದ ಗ್ರಾಮಗಳಲ್ಲಿ ಇರುತ್ತಿದ್ದರು. ಮುಂದೆ ವಿಜಯನಗರದ ರಾಜ್ಯವು ಹಾಳಾದ ಮೇಲೆ ಅವರು ಸ್ವತಂತ್ರರಾದರು. ವಿಜಯನಗರದ ವೆಂಕಟಾದ್ರಿಯು ತನ್ನ ಸೋದರಳಿಯನಾದ ಇಮ್ಮಡಿ ಅರಸಪ್ಪನಾಯಕನನ್ನು ಸ್ವಾದೇ ಪರಗಣೆಯ ಮೇಲೆ ಸುಭೇದಾರನನ್ನಾಗಿ ನೇಮಿಸಿದ್ದನು. ಇವನ ವಂಶದವರು ಅಲ್ಲಿ ೨೦೦ ವರ್ಷ ಆಳಿದರು. ೧೭೫೦ರಲ್ಲಿ ಸವಾಯಿ ಇಮ್ಮಡಿ ಸದಾಶಿವರಾಯನು, ಹೈದರನು ದೌಡು ಮಾಡುವನೆಂದು ಕೇಳಿ ತನ್ನ ರಾಜ್ಯವನ್ನು ಗೋವೆಯ ಪೋರ್ತುಗೀಜರಿಗೆ ಕೊಟ್ಟು ತಾನು ಗೋವೆಯಲ್ಲಿ ಬಾಂದೇವಾಡಿಯ ಹತ್ತರ ಕೆಲವು ಜಹಾಗೀರು ಪಡೆದು ಉಳಿದುಕೊಂಡನು. ಇವನೇ ಈಗ ಹಾಳುಬಿದ್ದಿರುವ ಸದಾಶಿವಗಡದ ಕೋಟೆಯನ್ನು ಕಟ್ಟಿಸಿದನೆಂದು ತಿಳಿಯುತ್ತದೆ. ಈಗಲೂ ಇವನ ವಂಶದವರು ಬಾಂದೇವಾಡಿಯಲ್ಲಿ ಇರುವರು. ಹೀಗೆ ೧೭೫೦ರನಂತರ ಕಾನಡಾ ಜಿಲ್ಹೆಯ ಉತ್ತರ ಭಾಗವು (ಈಗಿನ ಕಾರವಾರ, ಅಂಕೋಲಾ, ಸುಪಾ ತಾಲೂಕುಗಳು) ಪೋರ್ತುಗೀಜರ ಕೈವಶವಾಗಿತ್ತು. ೧೭೬೩ರಲ್ಲಿ ಹೈದರನ ಸರದಾರನೊಬ್ಬನು ಯಲ್ಲಾಪುರ ಅಂಕೋಲಾ ತಾಲೂಕುಗಳನ್ನು ಆಕ್ರಮಿಸಿ ಈಗಿನ ಹೈದರಘಟ್ಟವೆಂಬ ಮಾರ್ಗದಿಂದ ಪ್ರವೇಶಿಸಿ ಕಾರವಾರ ತಾಲೂಕಿನೊಳಗಿನ ಸದಾಶಿವಗಡ, ಸುಂಕೇರಿ, ಕಡವಾಡದ ವರೆಗಿದ್ದ ಪ್ರದೇಶವನ್ನು ತಕ್ಕೊಂಡನು.

ಇನ್ನು ಕಾನಡಾ ಜಿಲ್ಹೆಯ ದಕ್ಷಿಣದಲ್ಲಿ ಕೆಲದಿ ಗ್ರಾಮದ ಗೌಡನಾದ ಸದಾಶಿವ ನಾಯಕನಿಗೆ ಚಂದ್ರಗುತ್ತಿ (ಸಿದ್ದಾಪುರ), ಬಾರ್ಕೂರು (ಕುಂದಾಪುರ) ಮಂಗಳೂರು ಈ ಮೂರು ಪರಗಣೆಗಳನ್ನು ವಿಜಯನಗರದ ಸದಾಶಿವ ರಾಯನು ಕೊಟ್ಟಿದ್ದನು (೧೫೬೦). ಇವನು ಮಲವರ ಕುಲದ ಲಿಂಗವಂತನು. ಇವನ ರಾಜಧಾನಿ ಇಕ್ಕೇರಿ (ಬೆದನೂರ)ಯಾಗಿತ್ತು. ಈ ರಾಜ್ಯವು ೧೭೫೦ರ ವರೆಗೆ ನಡೆದು ಮೈಸೂರ ರಾಜ್ಯಕ್ಕೆ ಸೇರಿತು. ಆಗ ಈ ಜಿಲ್ಹೆಯ ದಕ್ಷಿಣ ಭಾಗವು ಹೈದರನ ಆಳಿಕೆಗೆ ಒಳಗಾಯಿತು.

ಕಾನಡಾ ಜಿಲ್ಹೆಯ ಆಗ್ನೇಯ ದಿಕ್ಕಿಗಿರುವ ಗೆರಸಪ್ಪೆಯಲ್ಲಿ ಜೈನಕುಲದ

ಅರಸರು ವಿಜಯನಗರಕ್ಕೆ ಮಾಂಡಲಿಕರಾಗಿ ಆಳುತ್ತಿದ್ದರು. ಅವರು ವಿಜಯ ನಗರದ ರಾಜ್ಯವು ಹಾಳಾದ ಮೇಲೆ ಸ್ವತಂತ್ರರಾಗಿ ತಮ್ಮ ರಾಜ್ಯವನ್ನು ಪಶ್ಚಿಮಕ್ಕೆ ಹೊನ್ನಾವರ, ಕುಮಟಾ, ಭಟಕಳದವರೆಗೆ ಬೆಳಿಸಿದರು. ಕಾನಡಾ ಜಿಲ್ಹೆಯಲ್ಲಿ ಅಲ್ಲಲ್ಲಿ ಇದ್ದ ಜೈನವಸ್ತಿಯು ಈ ರಾಜ್ಯದ ಕುರುಹಾಗಿದೆ.

ಬೆದನೂರಿನ ರಾಜ್ಯವು ಹಾಳಾದ ಮೇಲೆ ೧೭೬೦ರಲ್ಲಿ ಆ ರಾಜ್ಯಕ್ಕೆ ಸೇರಿದ ಮಿರ್ಜಾನ ಕೋಟೆಯು ಹೈದರನ ವಶವಾಯಿತು. ಈ ಕೋಟೆಯು ಅಘನಾಶಿನೀ ದಂಡೆಯಲ್ಲಿ ಜಿಲ್ಹೆಯ ಮಧ್ಯದಲ್ಲಿರುವ ಕಾರಣ ಪ್ರಾಚೀನ ಕಾಲದಿಂದ ಬಹು ಪ್ರಸಿದ್ಧವಾಗಿತ್ತೆಂದು ತೋರುತ್ತದೆ.

ಟೀಪುವಿನ ಮರಣದನಂತರ ಕಾನಡಾ ಜಿಲ್ಹೆಯು ಇಂಗ್ಲಿಷರ ವಶಕ್ಕೆ ಬಂತು. ೧೮೬೧ನೇ ಇಸವಿಯ ವರೆಗೆ ಇದು ಮದ್ರಾಸ ಇಲಾಖೆಗೆ ಸೇರಿತ್ತು. ಆಗ ಹೊನ್ನಾವರವು ಜಿಲ್ಹೆಯ ಮುಖ್ಯ ಪಟ್ಟಣವಾಗಿತ್ತು. ಮುಂದೆ ಮದ್ರಾಸ ಹಾಯಕೋರ್ಟು ಕಾನಡಾ ಜಿಲ್ಹೆಗೆ ಬಹು ದೂರವಾದ್ದರಿಂದ ಹಾಗೂ ಕಾರವಾರವು ಸುರಕ್ಷಿತ ಬಂದರವೆಂದು ಕಂಡುಬಂದದ್ದರಿಂದ ಈ ಜಿಲ್ಹೆಯು ಮುಂಬಯಿ ಇಲಾಖೆಗೆ ಸೇರಿಸಲ್ಪಟ್ಟಿತು.

ಇದು ಇಂಗ್ಲಿಷರ ಆಧೀನವಾಗಿ ನೂರು ವರ್ಷಗಳ ಮೇಲೆ ಆದವು. ಈಗ ಹಿಂದಿನ ಕಾಲದಂತೆ ಕೊಲೆ ಸುಲಿಗೆಗಳ ಭೀತಿಯು ಇಲ್ಲದಂತಾಗಿ ಘೋರಾರಣ್ಯಗಳಲ್ಲಿಯೂ ಉನ್ನತ ಪರ್ವತಗಳಲ್ಲಿಯೂ ರಾಜಮಾರ್ಗಗಳಾದ್ದರಿಂದ ಪ್ರಜೆಗಳು ಸುಖ ಸಮಾಧಾನದಿಂದಿರುವರು.